# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1621 |
| ಸದಸ್ಯರ ಹೆಸರು | : | ಶ್ರೀ ಕೆ. ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 11-03-2022. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಪಂಚಾಯತಿ ವ್ಯಾಪ್ತಿಯಲ್ಲಿ ಸ್ವತ್ತು ಮತ್ತು ಇ-ಸ್ವತ್ತುಗಳಲ್ಲಿ ಆಗುತ್ತಿರುವ ಅಕ್ರಮಗಳಿಗೆ ತಡೆ ನೀಡಿ. ನಾನಾ ಸುಧಾರಣಾ ಕ್ರಮಗಳನ್ನು ಜಾರಿಗೆ ತರಲು ನಿವೃತ್ತ ಐ.ಎ.ಎಸ್.ಅಧಿಕಾರಿ ಶ್ರೀ ಕೆ.ಹೆಚ್.ಗೋಪಾಲಕೃಷ್ಣಗೌಡ ನೇತೃತ್ವದ ಸಮಿತಿ 2017 ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಸದರಿ ವರದಿಯನ್ನು ಇದುವರೆಗೂ ಜಾರಿಗೊಳಿಸದಿರುವುದಕ್ಕೆ ಕಾರಣವೇನು. | ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 690 ಗ್ರಾಪಂಅ 2015 ದಿನಾಂಕ:05-04-2017 ರಲ್ಲಿ ಬೆಂಗಳೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ, ಮೋಸ ಹಾಗೂ ಅನಾನುಕೂಲತೆಗಳ ಬಗ್ಗೆ ಬಂದಿರುವ ದೂರುಗಳ ಹಿನ್ನೆಲೆಯಲ್ಲಿ ನಿವೃತ್ತ ಭಾರತೀಯ ಆಡಳಿತ ಸೇವೆ (ಐ.ಎ.ಎಸ್.) ಅಧಿಕಾರಿಯಾದ ಶ್ರೀ ಕೆ.ಹೆಚ್. ಗೋಪಾಲಕೃಷ್ಣೇಗೌಡರ ರವರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಿ ಆದೇಶಿಸಲಾಗಿತ್ತು. |
| (ಆ) | ಸರ್ಕಾರದ ಈ ವಿಳಂಬ ನೀತಿಯಿಂದಾಗಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸರ್ವೆ ಮತ್ತು ಆಸ್ತಿ ಹಕ್ಕು, ಪುನರ್ ವಸತಿ ಕೇಂದ್ರ, ಇ-ಸ್ವತು ಸರ್ಕಾರಿ ಜಾಗದಲ್ಲಿ ಅನಧಿಕೃತ ಮನೆಗಳ ಸಕ್ರಮಕ್ಕೆ ಬಾಕಿ ಇರುವ ಅರ್ಜಿಗಳ ಇತ್ಯರ್ಥ, ಅರಣ್ಯ ಹಕ್ಕು ಕಾಯ್ದೆ ಅಡಿ ಬಾಕಿ ಇರುವ ಅರ್ಜಿ ಇತ್ಯರ್ಥ ಹೀಗೆ ಹತ್ತು ಹಲವು ಜನೋಪಯೋಗಿ ಸರ್ಕಾರಿ ಕಾರ್ಯಕ್ರಮಗಳು ನಿಂತಹೋಗಿದ್ದು, ಸದರಿ ವರದಿಯನ್ನು ತುರ್ತಾಗಿ ಜಾರಿಗೊಳಿಸುವ ಪ್ರಸ್ತಾವನೆ/ ನಿರ್ಧಾರವನ್ನು ಸರ್ಕಾರ ಕೈಗೊಳ್ಳುವುದೇ; | ಈ ಸಮಿತಿಯು ದಿನಾಂಕ:05-02-2018 ರಂದು ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತದೆ.<br><br>ಈ ವರದಿಯ ಬಗ್ಗೆ ಸರ್ಕಾರದ ಕಾರ್ಯದರ್ಶಿಗಳು, (ಪಂಚಾಯತ್ ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 20-09-2018 ರಂದು ಸಭೆ ನಡೆಸಿ ತೀರ್ಮಾನ ತೆಗೆದುಕೊಂಡು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಇ-ಸ್ವತ್ತು ತಂತ್ರಾಂಶಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ಬದಲಾವಣೆ ಮಾಡಲು ಎನ್.ಐ.ಸಿ. ರವರಿಗೆ ತಿಳಿಸಲಾಗಿದೆ.<br><br>ಕಂದಾಯ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಅರಣ್ಯ ಇಲಾಖೆ ಮತ್ತು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ವಸತಿ ಇಲಾಖೆಗಳಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಪರಿಹಾರ ಕ್ರಮ ಕೈಗೊಳ್ಳಲು ಸಂಬಂಧಿಸಿದ ಇಲಾಖೆಗಳಿಗೆ ತಿಳಿಸಲಾಗಿದೆ. |
| (ಇ) | ನಿವೃತ್ತ ಅಧಿಕಾರಿ ಶ್ರೀ ಕೆ.ಹೆಚ್. ಗೋಪಾಲಕೃಷ್ಣಗೌಡ ರವರು 2017ರಲ್ಲಿ ಸಲ್ಲಿಸಿದ ವರದಿಯಲ್ಲಿನ ಶಿಫಾರಸ್ಸುಗಳೇನು?<br><br>(ವರದಿಯ ವಿವರ/ಪ್ರತಿಯನ್ನು ನೀಡುವುದು) | ಸದರಿ ವರದಿಯ ಶಿಫಾರಸ್ಸಿನ ಪ್ರತಿಯನ್ನು ಅನುಬಂಧದಲ್ಲಿ ನೀಡಿದೆ. |

ಸಂಖ್ಯೆ. ಗ್ರಾಅಪ 97 ಗ್ರಾಪಂಅ 2022

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1621ಕ್ಕೆ ಅನುಬಂಧ

# ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿ

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ

2ನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 70

ಸಂಖ್ಯೆ : ಇ-ಸ್ವತ್ತು/ಸುಸಸ/ವರದಿ/2017-18

ದಿನಾಂಕ: 05.02.2018

ರವರಿಗೆ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001.

ಮಾನ್ಯರೆ,

ವಿಷಯ : ಬೆಂಗಳೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಗ್ರಾಮ ಪಂಚಾಯಿತಿಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಸರ್ಕಾರದ ನಿಯಮಗಳನ್ನು ಪಾಲಿಸದೆ ಸ್ವತ್ತುಗಳಿಗೆ ನಮೂನೆ-9 ಮತ್ತು ನಮೂನೆ-11ಬಿ ವಿತರಿಸಿರುವ ಬಗ್ಗೆ – ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿಯು ವರದಿ ಸಲ್ಲಿಸುವ ಕುರಿತು.

ಉಲ್ಲೇಖ :
1. ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 690 ಗ್ರಾಪಂಅ 2015 ಬೆಂಗಳೂರು, ದಿನಾಂಕ : 05-04-2017.
2. ಈ ಸಮಿತಿ ಕಚೇರಿ ಪತ್ರ ಸಂಖ್ಯೆ : ಇ-ಸ್ವತ್ತು/ಸುಸಸ/21/2017-18 ದಿನಾಂಕ : 31.08.2017.
3. ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 690 ಗ್ರಾಪಂಅ 2015 ಬೆಂಗಳೂರು, ದಿನಾಂಕ : 12-10-2017.

***

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ-1ರಲ್ಲಿ ನಮೂದಿಸಲಾದ ಸರ್ಕಾರದ ಆದೇಶದ ಮೂಲಕ ಶ್ರೀ ಕೆ.ಎಚ್.ಗೋಪಾಲಕೃಷ್ಣೇಗೌಡ, ಭಾ.ಆ.ಸೇ(ನಿವೃತ್ತ) ಇವರ ಅಧ್ಯಕ್ಷತೆಯಲ್ಲಿ ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿಯನ್ನು ರಚಿಸಿ, ಸರ್ಕಾರದ ಆದೇಶವಾದ 03 ತಿಂಗಳಲ್ಲಿ ವರದಿ ನೀಡಲು ಸೂಚಿಸಲಾಗಿತ್ತು. ಅನಂತರ ಆಡಳಿತಾತ್ಮಕ ಕಾರಣಗಳಿಂದಾಗಿ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಲು ನೀಡಲಾದ ಕಾಲಾವಧಿಯನ್ನು ದಿನಾಂಕ: 31.12.2017 ರವರೆಗೆ ವಿಸ್ತರಿಸಿ ಉಲ್ಲೇಖ-3 ರಲ್ಲಿನ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶದಲ್ಲಿ ಸೂಚಿಸಿದ ಪ್ರಕಾರ ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿಯು ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ, ಅಲ್ಲಿ ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ ಕರ್ನಾಟಕ ರಾಜ್ಯದಲ್ಲಿನ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಕಾನೂನು ಬಾಹಿರವಾಗಿ ನಮೂನೆ-11ಬಿ ವಿತರಿಸಿ ಅನಂತರ ರದ್ದುಪಡಿಸಿದ ಸರ್ಕಾರಿ ಆದೇಶದಿಂದ ಬಾಧಿತರಾದವರಿಗೆ ನ್ಯಾಯ ದೊರಕಿಸಲು ಇರುವ ಮಾರ್ಗೋಪಾಯಗಳು ಮತ್ತು ಇ-ಸ್ವತ್ತು ಅನುಷ್ಠಾನಕ್ಕೆ ಹೊರಡಿಸಲಾಗಿರುವ ಕಾರ್ಯಕ್ಷೇತ್ರದ ಮಟ್ಟದಲ್ಲಿ ಅನುಷ್ಠಾನಗೊಳ್ಳುವ ಹಂತದಲ್ಲಿ ಸಮಸ್ಯೆಗಳ ಅಧ್ಯಯನ ನಡೆಸಿ ವರದಿಯನ್ನು ಸಿದ್ಧಪಡಿಸಿದೆ. ಸದರಿ ವರದಿಯ 9 ಪ್ರತಿಗಳನ್ನು ಈ ಪತ್ರದೊಂದಿಗೆ ತಮಗೆ ಸಲ್ಲಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,

(ರಮೇಶ್ ಡಿ.ಪಿ.)
ಸಮನ್ವಯ ಅಧಿಕಾರಿ
ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿ
ಹಾಗೂ ಸಹಾಯಕ ನಿರ್ದೇಶಕರು
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

ಪ್ರತಿಯನ್ನು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ ವರದಿಯನ್ನು ಮಾನ್ಯ ಸಚಿವರ ಗಮನಕ್ಕೆ ತರುವಂತೆ ಕೋರಲಾಗಿದೆ.

# ಕರ್ನಾಟಕ ರಾಜ್ಯದ ಗ್ರಾಮ ಪಂಚಾಯಿತಿಗಳ

# ವ್ಯಾಪ್ತಿಯಲ್ಲಿ ಇ-ಸ್ವತ್ತು ಮಾರ್ಗಸೂಚಿ

# ಅನುಷ್ಠಾನ ಹಂತದ ಸಮಸ್ಯೆಗಳ

# ಅಧ್ಯಯನಕ್ಕಾಗಿ ರಚಿಸಲಾದ

# ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿ

# ವರದಿ

**2018**

# ವಿಷಯ ಸೂಚಿ



| ಕ್ರ. ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 01. | ಭಾಗ – I : ಪೀಠಿಕೆ | 01–02 |
| 02. | ಭಾಗ – II : ರಾಜ್ಯದ ವಿವಿಧ ಪಂಚಾಯಿತಿ ವ್ಯಾಪ್ತಿಯಲ್ಲಿ ಕಂಡುಬಂದ ಹಲವು ಆಡಳಿತಾತ್ಮಕ ನ್ಯೂನತೆ/ತೊಡಕುಗಳು/ಸಮಸ್ಯೆಗಳು | 03–05 |
| 03. | ಭಾಗ – III : ಸಮಸ್ಯೆಗಳ ಸ್ವರೂಪ, ವ್ಯಾಪ್ತಿ, ಸ್ಥೂಲ ಪರಿಚಯ | 06–15 |
| 04. | ಭಾಗ – IV : ತಕ್ಷಣ ಆಗಬೇಕಾದ ಆಡಳಿತಾತ್ಮಕ ಹಾಗೂ ತಾಂತ್ರಿಕ ಸುಧಾರಣೆಗಳು | 16–19 |
| 05. | ಭಾಗ – V : ಈ ಸಮಸ್ಯೆಗಳಿಗೆ ಅಂತಿಮವಾದ ದೀರ್ಘಕಾಲದ ಪರಿಹಾರ ಮಾರ್ಗಗಳು | 20–25 |
| 06. | ಅನುಬಂಧ – ಅ : ಭೇಟಿ ನೀಡಿದ ಜಿಲ್ಲಾ ಪಂಚಾಯಿತಿಗಳ ಹಾಗೂ ತಾಲ್ಲೂಕು ಪಂಚಾಯಿತಿಯ ವಿವರಗಳು | 26–29 |
| 07. | ಅನುಬಂಧ – ಆ : ಭೇಟಿ ನೀಡಿದ ಗ್ರಾಮ ಪಂಚಾಯಿತಿಗಳ ವಿವರಗಳು | 30–34 |
| 08. | ಅನುಬಂಧ – ಇ : ಕಂದಾಯ ಗ್ರಾಮ ರಚನೆ ವಿವರ | 35 |
| 09. | ಅನುಬಂಧ – ಈ : 40 ಕ್ಕಿಂತ ಹೆಚ್ಚು ಸದಸ್ಯರು ಇರುವ ಗ್ರಾಮ ಪಂಚಾಯಿತಿಯ ವಿವರ | 36 |
| 10. | ಅನುಬಂಧ – ಉ : 94 'ಸಿ' ರಡಿ ಸ್ವೀಕರಿಸಿದ ಅರ್ಜಿಗಳ ವಿಲೇವಾರಿ ವಿವರ | 37 |
| 11. | ಅನುಬಂಧ – ಊ : ಅರಣ್ಯ ಹಕ್ಕು ಕಾಯ್ದೆಯಡಿ ಬಾಕಿ ಇರುವ ಅರ್ಜಿಗಳು | 38 |
| 12. | ಅನುಬಂಧ – ಋ : The Karnataka Gram Swaraj and Panchayat Raj Act, 1993, Section-199 | 39–41 |
| 13. | ಅನುಬಂಧ – ಋ : ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಮತ್ತು ಕಂದಾಯ ಇಲಾಖೆ ಜಂಟಿಯಾಗಿ ಹೊರಡಿಸಿರುವ ಸುತ್ತೋಲೆ ಸಂಖ್ಯೆ : ಗ್ರಾಅಪ : 441 : ಗ್ರಾಪಂಅ : 2016(ಭಾಗ-3) ದಿನಾಂಕ : 28.10.2016. | 42–43 |
| 14. | ಅನುಬಂಧ – ಎ : The Karnataka Zilla parishad, Taluk panchayat samithis, Mandal Panchayats and Nyaya Panchayats Act, 1983 Section-116 | 44–46 |

# ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿ

**ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ**

2ನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 70

## ಭಾಗ – 1

### ಪೀಠಿಕೆ

ದಿನಾಂಕ 14.06.2013 ರಿಂದ ಜಾರಿಗೆ ಬರುವಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು-2006ಕ್ಕೆ ತಿದ್ದುಪಡಿಯನ್ನು ತಂದು ಇ-ಸ್ವತ್ತು ತಂತ್ರಾಂಶ ಜಾರಿಗೊಳಿಸಲಾಗಿರುತ್ತದೆ. ಈ ತಂತ್ರಾಂಶದ ಅನುಷ್ಠಾನದಲ್ಲಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ, ಲೋಪ ಹಾಗೂ ಅನಾನುಕೂಲತೆಗಳ ಕುರಿತು ಇ-ಸ್ವತ್ತು ವಿತರಣೆಗೆ ಹೊರಡಿಸಲಾಗಿರುವ ಮಾರ್ಗಸೂಚಿಗಳನ್ನು ಕ್ಷೇತ್ರ ಮಟ್ಟದಲ್ಲಿ ಅನುಷ್ಠಾನಗೊಳಿಸುವ ಹಂತದಲ್ಲಿ ಎದುರಾಗುವ ವಾಸ್ತವಿಕ ಸಮಸ್ಯೆಗಳನ್ನು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಅಲ್ಲದೆ ರಾಜ್ಯದ ವಿವಿಧ ಅನ್ಯ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಕ್ಷೇತ್ರ ಮಟ್ಟದ ಸಮಸ್ಯೆಗಳನ್ನು ಅಧ್ಯಯನ ಮಾಡಿ ಅವಶ್ಯವಿರುವ ಸುಧಾರಣೆಗಳ ಬಗ್ಗೆ ಸಲಹೆ ನೀಡುವ ಉದ್ದೇಶಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ:690:ಗ್ರಾಪಂಅ:2015 ಬೆಂಗಳೂರು ದಿನಾಂಕ 05.04.2017 ರ ಅನ್ವಯದಲ್ಲಿ ಈ ಸಮಿತಿಯು ರಚನೆಗೊಂಡಿರುತ್ತದೆ. ಸಮಿತಿಗೆ ಅವಶ್ಯಕ ಕಚೇರಿ, ಕಟ್ಟಡ ಮತ್ತು ಸಿಬ್ಬಂದಿಗಳನ್ನು ಒದಗಿಸುವಲ್ಲಿ ತಡವಾದ ಕಾರಣ ದಿನಾಂಕ: 12.10.2017 ರ ಸಮ ಸಂಖ್ಯೆಯ ಸರ್ಕಾರದ ಆದೇಶದಲ್ಲಿ ಸಮಿತಿಯ ಅವಧಿಯನ್ನು ದಿನಾಂಕ : 31.12.2017 ರವರೆಗೆ ವಿಸ್ತರಿಸಲಾಗಿದೆ. ಅಂತೆಯೇ ದಿನಾಂಕ : 09.06.2017ರಿಂದ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ಕಾರ್ಯನಿರ್ವಹಿಸಲು ಈ ಸಮಿತಿಯು ಆರಂಭಿಸುತ್ತದೆ.

ಸಮಿತಿಯ ಪರಿಶೀಲನೆ, ವರದಿ ಸಲ್ಲಿಸಲಾದ ಅಂಶಗಳು ಈ ಕೆಳಕಂಡಂತಿವೆ:

1. ನಿವೃತ್ತ IAS ಅಧಿಕಾರಿ ಶ್ರೀ [illegible] ರವರ ನೇತೃತ್ವದ ಸಮಿತಿಯ ವರದಿ ಮೇರೆಗೆ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕಿನ 05 (ಐದು) ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾನೂನುಬಾಹಿರವಾಗಿ ನಮೂನೆ-11(ಬಿ) ವಿತರಿಸಿರುವುದಾಗಿ ವರದಿ ಮಾಡಿದ ಹಿನ್ನೆಲೆಯಲ್ಲಿ ಅವುಗಳನ್ನೆಲ್ಲಾ ರದ್ದುಪಡಿಸಿದ್ದು, ಈ ಆದೇಶದಿಂದ ಬಾಧಿತರಾದವರಿಗೆ ನ್ಯಾಯ ದೊರಕಿಸಲು ಅನುವಾಗುವ ಮಾರ್ಗೋಪಾಯಗಳನ್ನು ಸೂಚಿಸುವುದು.

2. ಇ-ಸ್ವತ್ತು ಅನುಷ್ಠಾನಕ್ಕೆ ಹೊರಡಿಸಲಾಗಿರುವ ಮಾರ್ಗಸೂಚಿಗಳು ಕ್ಷೇತ್ರ ಮಟ್ಟದಲ್ಲಿ ಅನುಷ್ಠಾನಗೊಳ್ಳುವ ಹಂತದಲ್ಲಿ ಎದುರಾಗುವ ವಾಸ್ತವಿಕ ಸಮಸ್ಯೆಗಳನ್ನು ಅಧ್ಯಯನಮಾಡಿ ಅವಶ್ಯವಿರುವ ಮಾರ್ಪಾಟುಗಳಿಗೆ ಸಲಹೆ ನೀಡುವುದು. ಇದಕ್ಕೆ ಪೂರಕವಾಗಿ ಆಯ್ದ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಕ್ಷೇತ್ರ ಮಟ್ಟದ ಸಮಸ್ಯೆಗಳನ್ನು ಅಧ್ಯಯನ ಮಾಡುವುದು.
3. ಇ-ಸ್ವತ್ತು ಅನುಷ್ಠಾನದಲ್ಲಿ ಮಾರ್ಗಸೂಚಿ ಉಲ್ಲಂಘನೆ ಮಾಡಿ ಅಕ್ರಮವೆಸಗುವ ಪ್ರಕರಣಗಳು ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ ಹಾಗು ಮೈಸೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ನಡೆದಿದೆ ಹಾಗೂ ರಾಜ್ಯದ ಎಲ್ಲಾ ಜಿಲ್ಲೆಗಳ ಆಯ್ದ ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ಪರಿಶೀಲಿಸಿ ವರದಿ ನೀಡುವುದು.

ಸರ್ಕಾರದ ಆದೇಶಾನುಸಾರ ಸಮಿತಿಯು ರಾಜ್ಯದ ಕರಾವಳಿ, ಮಲೆನಾಡು, ಮುಂಬೈ ಕರ್ನಾಟಕ, ಹೈದರಾಬಾದ್ ಕರ್ನಾಟಕ ಮತ್ತು ಹಳೆ ಮೈಸೂರು ಭಾಗಗಳಲ್ಲಿ ವ್ಯಾಪಕವಾಗಿ ಸಂಚರಿಸಿ 24-ಜಿಲ್ಲೆಗಳಲ್ಲಿ (ವಿವರ ಅನುಬಂಧ-ಅ) ಆಯ್ದ ಪ್ರತಿನಿಧಿಕ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಗ್ರಾಮ ಪಂಚಾಯಿತಿಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ/ಡಾಟಾ ಎಂಟ್ರಿ ಆಪರೇಟರ್/ವಿಷಯ ನಿರ್ವಾಹಕರು ಅಲ್ಲದೆ ತಾಲ್ಲೂಕು ಪಂಚಾಯಿತಿಗಳ ಸಹಾಯಕ ನಿರ್ದೇಶಕರು ಹಾಗೂ ಕಾರ್ಯನಿರ್ವಹಣಾ ಅಧಿಕಾರಿ ಮತ್ತು ಜಿಲ್ಲಾ ಪಂಚಾಯಿತಿಗಳ ಡಿಪಿಎಂಯು / ಉಪಕಾರ್ಯದರ್ಶಿ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆಗಳನ್ನು ಆಯೋಜಿಸಿ ಅಭಿಪ್ರಾಯ ಸಂಗ್ರಹಣೆ ಮಾಡಲಾಗಿರುತ್ತದೆ. ವಿವಿಧ ಜಿಲ್ಲೆಗಳಲ್ಲಿ ಇ-ಸ್ವತ್ತು ತಂತ್ರಾಂಶದ ಅಳವಡಿಕೆಯಲ್ಲಿ ಆಗುತ್ತಿರುವ ಆಡಳಿತಾತ್ಮಕ ಹಾಗೂ ತಾಂತ್ರಿಕ ಸಮಸ್ಯೆಗಳನ್ನು ಅರಿಯಲು ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ಗ್ರಾಮ ಪಂಚಾಯತಿಯ ಅಧ್ಯಕ್ಷರು/ಸದಸ್ಯರು/ಸಿಬ್ಬಂದಿಗಳನ್ನು ಸಂಪರ್ಕಿಸಿ ಅಭಿಪ್ರಾಯ ಪಡೆದು ಅವರು ಸೂಚಿಸಿರುವ ಪರಿಹಾರ ಮಾರ್ಗೋಪಾಯಗಳನ್ನು ದಾಖಲಿಸಿಕೊಳ್ಳಲಾಗಿದೆ.

ಅಲ್ಲದೆ ಸರ್ಕಾರದ ಆದೇಶದಲ್ಲಿ ಅಡಕವಾಗಿರುವ ಬೆಂಗಳೂರು ನಗರ ಜಿಲ್ಲೆಯ ಐದೂ ಗ್ರಾಮ ಪಂಚಾಯಿತಿಗಳಿಗೆ ಪೂರ್ವಭಾವಿ ತಿಳುವಳಿಕೆ ನೀಡಿ ಖಾತೆ ರದ್ದುಪಡಿಕೆಯಿಂದ ಬಾಧಿತರಾದವರು ಸಮಿತಿಯ ಮುಂದೆ ಹಾಜರಾಗಿ ತಮ್ಮ ಅಹವಾಲನ್ನು ಸಲ್ಲಿಸಲು ಅವಕಾಶ ನೀಡಿ ಸಾರ್ವತ್ರಿಕ ನೋಟೀಸನ್ನು ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ಪ್ರಕಟಿಸಿ ನಿಗದಿತ ದಿನಾಂಕದಂದು ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಗ್ರಾಮ ಪಂಚಾಯಿತಿ ಪದಾಧಿಕಾರಿಗಳ/ಸಿಬ್ಬಂದಿ ಸಮ್ಮುಖದಲ್ಲಿ ಸಂತ್ರಸ್ತ ಸಾರ್ವಜನಿಕರ ಅಹವಾಲುಗಳನ್ನು ಆಲಿಸಿ ಮನವಿಗಳನ್ನು ಸ್ವೀಕರಿಸಿದೆ. ಒಟ್ಟಾರೆ ಸಮಿತಿಯು 36 ಗ್ರಾಮಪಂಚಾಯಿತಿಗಳಿಗೆ (ವಿವರ ಅನುಬಂಧ-ಆ) ಭೇಟಿ ನೀಡಿ ಸ್ಥಳೀಯ ಸಮಸ್ಯೆಗಳ ಕುರಿತು ಸಾರ್ವಜನಿಕರೂ ಸೇರಿದಂತೆ ಗ್ರಾಮ ಪಂಚಾಯಿತಿಯ ಪದಾಧಿಕಾರಿಗಳ/ಸದಸ್ಯರ/ಸಿಬ್ಬಂದಿಗಳಿಂದ ಅಭಿಪ್ರಾಯ ಸಂಗ್ರಹ ಮಾಡಲಾಗಿರುತ್ತದೆ.

************

# ಭಾಗ –II

ರಾಜ್ಯದ ವಿವಿಧ ಜಿಲ್ಲಾ ಪಂಚಾಯಿತಿಗಳ ಅಧೀನದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಂಡು ಬಂದ ಆಡಳಿತಾತ್ಮಕ ನ್ಯೂನತೆ/ಲೋಪದೋಷಗಳು/ಸಮಸ್ಯೆಗಳು ಈ ಕೆಳಗಿನಂತಿವೆ :

1. ಕೆಲವು ದಶಕಗಳಿಂದ ಜನವಸತಿ ಇರುವ ನೆಲೆಗಳನ್ನು ಇನ್ನೂ ಕಂದಾಯ ಗ್ರಾಮಗಳೆಂದು ಘೋಷಿಸಿ ಗ್ರಾಮಠಾಣಾ ವ್ಯಾಪ್ತಿಯನ್ನು ನಿಗದಿಪಡಿಸದಿರುವ ಅನೇಕ ಪ್ರಕರಣಗಳು ಬಾಕಿ ಇರುವುದು ಕಂಡು ಬಂದಿದೆ. ಉದಾ :- ಲಂಬಾಣಿ ತಾಂಡಾ, ಗೊಲ್ಲರಹಟ್ಟಿ, ನಾಯಕರ ಹಟ್ಟಿ, ಕ್ಯಾಂಪ್, ಪುನರ್ವಸತಿ ಕೇಂದ್ರಗಳು. (ವಿವರ ಅನುಬಂಧ–ಅ).
2. ಕರ್ನಾಟಕ ಗ್ರಾಮ ಸ್ವರಾಜ್ಯ ಕಾಯಿದೆಯಲ್ಲಿ ನಿಗದಿ ಪಡಿಸಿರುವ ಜನಸಂಖ್ಯೆ ಮಿತಿಮೀರಿದ ಅನೇಕ ಗ್ರಾಮ ಪಂಚಾಯಿತಿಗಳನ್ನು (ವಿವರ ಅನುಬಂಧ–ಆ) ಪಟ್ಟಣ/ನಗರ ಸ್ಥಳೀಯ ಸಂಸ್ಥೆಗಳನ್ನಾಗಿ ಪರಿವರ್ತಿಸದೆ ಗ್ರಾಮ ಪಂಚಾಯಿತಿಗಳನ್ನಾಗಿ ಉಳಿಸಿಕೊಂಡಿರುವುದು ಉದಾ :- ಹೂಟಗಳ್ಳಿ, ಹಿನಕಲ್, ಮೈಸೂರು ತಾಲ್ಲೂಕು. ಮೈಸೂರು ಜಿಲ್ಲೆ. ಸದಸ್ಯರ ಸಂಖ್ಯೆ 69, 61. ಜನಸಂಖ್ಯೆ 50,000 ಮೀರಿದೆ. ಕೃಷಿ ಜಮೀನು ಪೂರ್ಣ ಭೂ ಸ್ವಾಧೀನ ಅಥವಾ ಪರಿವರ್ತನೆಯಾಗಿದೆ.
3. ಹೊಸ ಗ್ರಾಮವನ್ನು ವಿಭಜಿಸಿ ಎರಡು ಪಂಚಾಯಿತಿಗಳನ್ನು ರಚಿಸಿ ಜನಸಂಖ್ಯೆ ಮಿತಿಮೀರಿದ್ದರೂ ಎರಡೂ ಪಂಚಾಯಿತಿಗಳನ್ನು ಗ್ರಾಮ ಪಂಚಾಯಿತಿಗಳನ್ನಾಗಿ ಮುಂದುವರಿಸಿರುವುದು. ಉದಾ :- ಗೋಗಿ (ಪೇಟಾ). ಗೋಗಿ (ಕೆ.ಬಾ) ಗ್ರಾಮ ಪಂಚಾಯಿತಿಗಳು, ಶಹಾಪುರ್ ತಾಲ್ಲೂಕು, ಯಾದಗಿರಿ ಜಿಲ್ಲೆ.
4. ಗ್ರಾಮಠಾಣಾ ಹಕ್ಕುಗಳನ್ನು, ಗ್ರಾಮ ಪಂಚಾಯಿತಿಗಳು ಭೂಮಾಪನ ಇಲಾಖೆಯಿಂದ ಪಡೆದು ದಾಖಲಾತಿಗಳಾಗಿ ಸಂರಕ್ಷಿಸಿಕೊಳ್ಳದಿರುವುದು.
5. ಈ ಹಿಂದೆ ಅಸ್ತಿತ್ವದಲ್ಲಿದ್ದ ಪಟ್ಟಣ ಪಂಚಾಯಿತಿ/ಅಧಿಸೂಚಿತ ಪಟ್ಟಣ ಪ್ರದೇಶಗಳನ್ನು ಪುನಃ ಗ್ರಾಮ ಪಂಚಾಯಿತಿಗಳನ್ನಾಗಿ ಪರಿವರ್ತಿಸಿರುವುದು. ಉದಾ :- ಕೊಡಗು ಜಿಲ್ಲೆಯ ಕೊಡ್ಲಿಪೇಟೆ. ಪೊನ್ನಂಪೇಟೆ, ಶುಂಠಿಕೊಪ್ಪ, ಗೋಣಿಕೊಪ್ಪಲು. ಶನಿವಾರ ಸಂತೆ ಇತ್ಯಾದಿ.
6. ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ಮನೆಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿರುವವರು ಕಂದಾಯ ಇಲಾಖೆಗೆ ಸಕ್ರಮ ಕೋರಿ ಭೂ ಕಂದಾಯ ಕಾಯಿದೆಯ ಕಲಂ 94ಸಿ ಅಡಿಯಲ್ಲಿ ಸಲ್ಲಿಸಿರುವ ಸಾವಿರಾರು ಅರ್ಜಿಗಳು ಈ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬಾಕಿ ಇರುತ್ತವೆ. (ವಿವರ ಅನುಬಂಧ–ಇ).

7. ಕಾಯ್ದಿರಿಸಿದ ಅರಣ್ಯ ಜಮೀನಿನಲ್ಲಿ ದಶಕಗಳಿಂದ ಮನೆ ಕಟ್ಟಿಕೊಂಡು ವಾಸಿಸುತ್ತಿರುವ ಬುಡಕಟ್ಟು ಜನಾಂಗ, ಇತರರು ವಸತಿ ಹಕ್ಕು ಕೋರಿ ಅರಣ್ಯ ಹಕ್ಕು ಕಾಯಿದೆ ಅಡಿಯಲ್ಲಿ ಸಲ್ಲಿಸಿರುವ ನೂರಾರು ಅರ್ಜಿಗಳು ವಿವಿಧ ಜಿಲ್ಲೆಗಳಲ್ಲಿ ಬಾಕಿ ಇರುವುದು.

(ವಿವರ ಅನುಬಂಧ-ಊ)

8. ಮಲೆನಾಡು/ಪಶ್ಚಿಮ ಘಟ್ಟ ಪ್ರದೇಶದಲ್ಲಿ ಜನವಸತಿಗೆಂದು ಗ್ರಾಮಠಾಣಾಕ್ಕಾಗಿ ಆಯ್ಕೆ ಮಾಡಿ ಮೀಸಲಿರಿಸಿರುವ ಖಾನೇಷುಮಾರಿ ಜಮೀನಿನಲ್ಲಿ ನಿವೇಶನಗಳನ್ನು ವಿಂಗಡಿಸಿ ಅಳತೆ ಮಾಡಿ ವಾಸಿಸಲು ಅನುವು ಮಾಡಿ ಕೊಟ್ಟಿದ್ದರೂ ಹಕ್ಕು ಪತ್ರಗಳನ್ನು ಹಂಚಿಕೆ ಮಾಡದೆ ಹೋದದ್ದು.

9. ಕಾನು, ಸೊಪ್ಪಿನ ಬೆಟ್ಟ, ದೇವರಕಾಡು, ಜುಮ್ಮಾ, ಬಾಣೆ ಇತ್ಯಾದಿ ಜಮೀನುಗಳಲ್ಲಿ ದಶಕಗಳಿಂದ ಮನೆ ಕಟ್ಟಿಕೊಂಡು ವಾಸಿಸುತ್ತಿರುವವರಿಗೆ ಸಕ್ರಮಗೊಳಿಸಲು ಯಾವುದೇ ಕಾಯಿದೆಯಲ್ಲಿ ಅವಕಾಶ ಕಲ್ಪಿಸದೇ ಇರುವುದು.

10. ಇ-ಸ್ವತ್ತು ದಾಖಲಿಸಲು ಪಂಚಾಯಿತಿಯಿಂದ ರವಾನೆಯಾದ ಪ್ರಕರಣಗಳನ್ನು ಕಂದಾಯ ಇಲಾಖೆಯ ಭೂ ಮಾಪಕರು ನೆಪ ಹುಡುಕಿ ವಿಳಂಬ ಮಾಡುತ್ತಿರುವುದು.

11. ಇ-ಸ್ವತ್ತು ತಂತ್ರಾಂಶ ಬಳಕೆ/ಅನುಷ್ಠಾನದ ಬಗ್ಗೆ ಎಲ್ಲಾ ಗ್ರಾಮ ಪಂಚಾಯಿತಿಗಳ ವಿವಿಧ ಹಂತದ ಸಿಬ್ಬಂದಿಗೆ ಪೂರ್ಣವಾಗಿ ತರಬೇತಿ ನೀಡದಿರುವುದು.

12. ಇ-ಸ್ವತ್ತು ತಂತ್ರಾಂಶದಲ್ಲಿ ದತ್ತಾಂಶ ಆರೋಹಿಸಲು ಈ ಹಿಂದೆ ಲಭ್ಯವಿದ್ದ ಅನಿರ್ದಿಷ್ಟ ಕಾಲಾವಧಿಯನ್ನು ತೀರಾ ಮಿತಿಗೊಳಿಸಿರುವುದು.

13. ಈ ಹಿಂದೆ ಪಂಚತಂತ್ರಕ್ಕೆ ದಾಖಲಾಗದ ಆಸ್ತಿಗಳನ್ನು ದಾಖಲೆಗೆ ತರಲು ಕಾಲಾವಕಾಶ ನೀಡದೆ ಹೋಗಿರುವುದು.

14. ಇ-ಸ್ವತ್ತು ತಂತ್ರಾಂಶದಲ್ಲಿ ಹೆಜ್ಜೆಹೆಜ್ಜೆಗೂ ಆರೋಹಿಸಿದ ದತ್ತಾಂಶ ಉಳಿಸಿಕೊಳ್ಳುವಂತೆ 'Save' ಆಯ್ಕೆಯನ್ನು ಒದಗಿಸದಿರುವುದು.

15. ಕೆಲವು ದತ್ತಾಂಶ ಆರೋಹಿಸಲು ಕ್ಷೇತ್ರ ಸ್ಥಳಾವಕಾಶ ಕಡಿಮೆ ಇರುವುದು. ಉದಾ :- ವಸಂತ ನರಸಾಪುರ ಕೈಗಾರಿಕಾ ಪ್ರದೇಶ ತುಮಕೂರು ಜಿಲ್ಲೆಯಲ್ಲಿ ಕೈಗಾರಿಕಾ ನಿವೇಶನದ ವಿಸ್ತೀರ್ಣ ಚ.ಮೀ.ಗಳಲ್ಲಿ ಆರೋಹಿಸಲು ಸಾಕಷ್ಟು ಸ್ಥಳಾವಕಾಶ ತಂತ್ರಾಂಶದಲ್ಲಿ ನೀಡಿಲ್ಲದಿರುವುದು.

16. ಇ-ಸ್ವತ್ತು ಖಾತಾ ದಾಖಲಿಸಲು ಸಲ್ಲಿಸಿದ ಅರ್ಜಿಗಳನ್ನು ಸಕಾಲ ಶೀರ್ಷಿಕೆಯಲ್ಲಿ ಸ್ವೀಕರಿಸಿ ಸ್ವೀಕೃತಿಯನ್ನು ಅರ್ಜಿದಾರರಿಗೆ ತಕ್ಷಣ ನೀಡಲು ಸಾಧ್ಯವಾಗದಿರುವುದು.

17. ಇ-ಸ್ವತ್ತು - ಸಕಾಲ - ಪಂಚತಂತ್ರಗಳಿಗೆ ಪರಸ್ಪರ ಸಂಪರ್ಕ (link) ಕಲ್ಪಿಸದಿರುವುದು.

18. ಸಣ್ಣ ಪುಟ್ಟ ವಿವಾದಗಳನ್ನು ಇತ್ಯರ್ಥಪಡಿಸಿ ಇ-ಖಾತಾ ದಾಖಲಿಸುವ ಅಂತಿಮ ಅಧಿಕಾರವನ್ನು ಗ್ರಾಮ ಪಂಚಾಯಿತಿಗೆ ನೀಡದಿರುವುದು.

19. ಖಾತೆ ಮಾಡುವಾಗ ಹಕ್ಕು ಹಾಗೂ ಇತರ ಋಣಗಳನ್ನು ದಾಖಲಿಸಲು ಹಾಗೂ ಸಾಲ ನೀಡಿದ ಬ್ಯಾಂಕ್ ಪರವಾಗಿ ಸ್ವತ್ತಿನ ಮೇಲೆ ಖಾತೆದಾರರ ಮಾಲೀಕತ್ವ ಉಳಿಸಿಕೊಂಡು ಬೋಜಾ ಸೃಷ್ಟಿಸಲು ತಂತ್ರಾಂಶದಲ್ಲಿ ಅವಕಾಶವಿಲ್ಲದೇ ಇರುವುದು.

20. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ ಹೊಂದಿದಂತಿರುವ ಅದರದೇ ಒಂದು ಭಾಗದಂತೆ ಕಾಣುವ ಗುಡ್ಡಗಳ ಮೇಲೆ ಅತೀ ವಿಸ್ತಾರದ 1 ಎಕರೆ/2 ಎಕರೆ ಜಮೀನಿನಲ್ಲಿ ಮೋಜುದಾಣ, ಒಂಟಿ ವಾಸದ ಮನೆಗಳನ್ನು ಕಟ್ಟಿರುವುದು ಒಂಟಿ ನಿವೇಶನಗಳನ್ನು ವಿಂಗಡಿಸಿ ಖಾತೆ ಮಾಡಿರುವುದು ಕಂಡು ಬಂದಿದೆ. ಈ ಜಮೀನುಗಳೆಲ್ಲಾ ಬಹುತೇಕ ಅರಣ್ಯ ಪ್ರದೇಶಕ್ಕೆ ಸೇರಿದ ಅಥವಾ ಸರ್ಕಾರಿ ಗೋಮಾಳ, ಖರಾಬು ಇತ್ಯಾದಿ ವರ್ಗೀಕರಣದ ರಾಜ್ಯ ಒಡೆತನದ ಸಾರ್ವಜನಿಕ ಸೊತ್ತುಗಳಾಗಿದ್ದು ಹೇಗೆ ಖಾಸಗಿ ವ್ಯಕ್ತಿಗಳ ಕೈವಶವಾಗಿದೆ ಎಂಬುದರ ಬಗ್ಗೆ ರಾಜ್ಯ ಸರ್ಕಾರ ಕೂಲಂಕಷವಾಗಿ ವಿಚಾರಣೆ ಮಾಡುವ ಅಗತ್ಯವಿದೆ. ವಿಚಾರಣೆಯಲ್ಲಿ ಈ ಆಸ್ತಿಗಳು ಮೂಲತಃ ಅರಣ್ಯ, ಖರಾಬು ಇತ್ಯಾದಿ ರಾಜ್ಯ ಸರ್ಕಾರಕ್ಕೆ ಸೇರಿದ ಆಸ್ತಿಗಳೆಂದು ಕಂಡು ಬಂದಲ್ಲಿ ಸರ್ಕಾರ ಅವುಗಳನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು. ವಿಚಾರಣೆಯಲ್ಲಿ ಖಾಸಗಿಯವರ ಹಕ್ಕು ಸ್ವಾಮ್ಯ ಸಾಬೀತಾದರೂ ಆ ಪ್ರದೇಶದಲ್ಲಿ ಜನವಸತಿ ಸಾಧ್ಯವಿಲ್ಲ. ಅಲ್ಲದೇ ರಾಷ್ಟ್ರೀಯ ಉದ್ಯಾನದ ಪ್ರದೇಶದಲ್ಲಿ ಜನವಸತಿಗೆ ಅವಕಾಶವೂ ಇಲ್ಲ. ಈ ಪ್ರದೇಶಗಳಲ್ಲಿ ವನ್ಯ ಜೀವಿ ಮಾನವ ಸಂಘರ್ಷ ಪ್ರಕರಣಗಳು ಹೆಚ್ಚುತ್ತಿದ್ದು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಸುತ್ತ ಇಂತಹ ಬಹು ವಿಸ್ತೀರ್ಣದ ಖಾಸಗಿ ಆಸ್ತಿಗಳನ್ನು ರಾಜ್ಯ ಸರ್ಕಾರ ಭೂ ಸ್ವಾಧೀನಪಡಿಸಿಕೊಂಡು ರಾಷ್ಟ್ರೀಯ ಉದ್ಯಾನ ಹಾಗೂ ಸಾಮಾನ್ಯರ ಜನವಸತಿ ಪ್ರದೇಶದ ಮಧ್ಯೆ ಸಂಘರ್ಷ ತಡೆ ಪ್ರದೇಶವನ್ನಾಗಿ ರೂಪಿಸುವ ಅವಶ್ಯಕತೆ ಇದೆ.

************

# ಭಾಗ-III

## I. ಸಮಸ್ಯೆಗಳ ಸ್ವರೂಪ, ವ್ಯಾಪ್ತಿ, ಸ್ಥೂಲ ಪರಿಚಯ

ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿಯು ರಾಜ್ಯದ ಕರಾವಳಿ, ಮಲೆನಾಡು, ಬಯಲುಸೀಮೆ, ಮುಂಬಯಿ ಕರ್ನಾಟಕ, ಹೈದರಾಬಾದ್-ಕರ್ನಾಟಕದ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಸಭೆಗಳನ್ನು ಕರೆದು ಅಭಿಪ್ರಾಯ ಸಂಗ್ರಹಿಸಿದಾಗ ಹೊರ ಹೊಮ್ಮಿದ ಪ್ರಮುಖ ಸಮಸ್ಯಾತ್ಮಕ ಅಂಶಗಳು ಈ ಮುಂದಿನಂತಿವೆ.

1. ಕರಾವಳಿ ಜಿಲ್ಲೆಗಳಲ್ಲಿ ಇತ್ತೀಚೆಗೆ ಜಾರಿಗೆ ಬಂದಿರುವ ಕೇಂದ್ರದ ಸಿಆರ್‌ಝಡ್ (CRZ) ಕರಾವಳಿ ನಿಷೇಧಿತ ವಲಯದ ಕಾನೂನು. ಈಗಾಗಲೇ ಸಮುದ್ರ ತೀರದಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಿರುವವರಿಗೆ ಪ್ರಮುಖವಾಗಿ ಮೀನುಗಾರಿಕೆ ಉದ್ಯೋಗ ಅವಲಂಬಿಸಿರುವ ಕುಟುಂಬಗಳಿಗೆ ವಾಸದ ಮನೆ ಹಕ್ಕನ್ನು ದಾಖಲಿಸಲು ಅಡ್ಡ ಬರುತ್ತಿದೆ ಎಂಬುದು ಗ್ರಾಮ ಪಂಚಾಯಿತಿಗಳ ಅಭಿಪ್ರಾಯ. ಅಂತೆಯೇ ಅರಣ್ಯ ಪ್ರದೇಶದಲ್ಲಿ/ಸರ್ಕಾರಿ ಖರಾಬಿನಲ್ಲಿ ಅನಾದಿಕಾಲದಿಂದ ಮನೆ ಕಟ್ಟಿಕೊಂಡು ವಾಸಿಸುತ್ತಿರುವ ಕುಟುಂಬಗಳಿಗೂ ಹಕ್ಕು ಪತ್ರ ದಾಖಲೆಯಿಲ್ಲದೆ ಇ-ಸ್ವತ್ತು ಖಾತಾ ಮಾಡಲು ಸಾಧ್ಯವಾಗುತ್ತಿಲ್ಲ. ಮನೆಗಳು ಶಿಥಿಲವಾಗಿದ್ದರೂ, ಬಿದ್ದುಹೋದರೂ ಪುನರ್‌ನಿರ್ಮಾಣಕ್ಕೆ ಗ್ರಾಮ ಪಂಚಾಯಿತಿಯಿಂದ ಪರವಾನಗಿ ನೀಡಲಾಗುತ್ತಿಲ್ಲ. ಅಪ್ಪ ಸತ್ತರೆ ಅಣ್ಣ ತಮ್ಮಂದಿರಲ್ಲಿ ಆಸ್ತಿ ಪಾಲು ಮಾಡಲು ಸಾಧ್ಯವಿಲ್ಲ. ಇದೇ ಪರಿಸ್ಥಿತಿ ಪಶ್ಚಿಮ ಘಟ್ಟ ಪ್ರದೇಶ ಅಂದರೆ ಮಲೆನಾಡು ಜಿಲ್ಲೆಗಳಲ್ಲಿಯೂ ಇದೆ.

2. ಮಲೆನಾಡು ಜಿಲ್ಲೆಗಳಲ್ಲಿ ಮುಖ್ಯ ರಸ್ತೆಗಳ ಬದಿಯ ದೊಡ್ಡಗ್ರಾಮಗಳ ಬಗ್ಗೆ ಗ್ರಾಮಠಾಣಾ ನಕ್ಷೆಗಳು ಲಭ್ಯವಿದ್ದರೂ ಬಹುತೇಕ ಸಣ್ಣ ಸಣ್ಣ ಗ್ರಾಮಗಳಿಗೆ ಹಾಗೂ ಅರಣ್ಯ ಪ್ರದೇಶ ಹಾಗೂ ತೋಟ ಮತ್ತು ಕೃಷಿ ಜಮೀನುಗಳಲ್ಲಿ ಚದುರಿಹೋಗಿರುವ ವಾಸದ ಮನೆಗಳ ಬಗ್ಗೆ ಗ್ರಾಮಠಾಣಾ ನಕ್ಷೆಗಳು ಲಭ್ಯವಿಲ್ಲ. ಅಂತಹ ಚದುರಿದಂತಿರುವ ಬಿಡಿ ವಾಸದ ಮನೆಗಳ ಬಗ್ಗೆ ಹಕ್ಕು ಪತ್ರ ದಾಖಲೆಗಳು ಲಭ್ಯವಿಲ್ಲದ ಕಾರಣ ಇ-ಖಾತೆ ನೀಡಲಾಗುತ್ತಿಲ್ಲ. ಈ ಹಿಂದೆ ಸರ್ಕಾರದ ವಿವಿಧ ವಸತಿ ಯೋಜನೆಗಳಲ್ಲಿ ರಚಿಸಿ ವಿತರಿಸಲಾದ ನಿವೇಶನಗಳಿಗೂ, ನಿರ್ಮಿಸಿರುವ ಮನೆಗಳಿಗೂ ಹಕ್ಕು ಪತ್ರ, ಇತರೆ ದಾಖಲೆಗಳು ತಹಸೀಲ್ದಾರ್ ಕಚೇರಿಯಲ್ಲಾಗಲೀ, ಗ್ರಾಮ ಪಂಚಾಯಿತಿಗಳಲ್ಲಾಗಲೀ ಲಭ್ಯವಿಲ್ಲ. ಅಲ್ಲದೇ ಸರ್ಕಾರದ ಗುಂಡುತೋಪು, ಗೋಮಾಳ, ಖರಾಬು, ಕಾನು ಜಮೀನಿನಲ್ಲಿ ಅನಧಿಕೃತವಾಗಿ ಮನೆಗಳನ್ನು ನಿರ್ಮಿಸಿ ವಾಸಿಸುತ್ತಿರುವವರೂ ಬಹಳಷ್ಟು ಸಂಖ್ಯೆಯಲ್ಲಿದ್ದಾರೆ. ಅರಣ್ಯ ಪ್ರದೇಶ, ಸೊಪ್ಪಿನ ಬೆಟ್ಟ, ಕಾನು, ರಕ್ಷಿತ ಪ್ರದೇಶಗಳಲ್ಲಿಯೂ ದೀರ್ಘ ಕಾಲದಿಂದ ಮನೆ ಕಟ್ಟಿಕೊಂಡು ವಾಸಿಸುತ್ತಿರುವ ಜನರಿದ್ದಾರೆ. ಇಂತಹ ಕುಟುಂಬಗಳು

ಕಂದಾಯ ಇಲಾಖೆಗೆ ಭೂ ಕಂದಾಯ ಕಾಯಿದೆ 1964 ರ ಕಲಂ 94ಸಿ ಅನ್ವಯ ಅಥವಾ ಅರಣ್ಯ ಇಲಾಖೆಗೆ ಅರಣ್ಯ ಹಕ್ಕು ಕಾಯಿದೆ 2002 ಅಡಿಯಲ್ಲಿ ಅರ್ಜಿಗಳನ್ನು ಸಲ್ಲಿಸಿದ್ದರೂ ಅವುಗಳು ಇತ್ಯರ್ಥವಾಗದೇ ಸಹಸ್ರಾರು ಸಂಖ್ಯೆಯಲ್ಲಿ ಬಾಕಿ ಇರುವುದು ಇ-ಖಾತಾ ದಾಖಲೆಗೆ ಅಡಚಣೆಯಾಗಿದೆ. ಇನ್ನು ಬಹಳ ಹಿಂದೆಯೇ ಸರ್ಕಾರ ಜನವಸತಿಗಾಗಿ ಖಾನೇಷುಮಾರಿ ಜಮೀನನ್ನು ಗುರುತಿಸಿ ಅಳತೆ ಮಾಡಿ ಗಡಿ ಗುರುತಿಸಿ ನಿವೇಶನಗಳ ಆಸ್ತಿಯನ್ನು ವಿಂಗಡಿಸಿ ನಕ್ಷೆಗಳನ್ನು ತಯಾರಿಸಿದ್ದರೂ ಹಕ್ಕು ಪತ್ರ ನೀಡದೆ ಹೋದ ಪ್ರಕರಣಗಳಲ್ಲಿ ಅವಿಭಕ್ತ ಕುಟುಂಬಗಳು ಆ ಜಮೀನಿನಲ್ಲಿ ದೀರ್ಘಕಾಲದಿಂದಲೂ ಮನೆ, ಕಣ, ಕೈ ತೋಟ, ದನದ ಕೊಟ್ಟಿಗೆ, ಉದ್ಯಾನ ಅಭಿವೃದ್ಧಿ ಪಡಿಸಿ ವಾಸವಾಗಿದ್ದರೂ ಅವರಿಗೆ ಅನುಭವದಲ್ಲಿರುವ ವಿಸ್ತೀರ್ಣದ ಖಾತೆ ಮಾಡಲು ಗ್ರಾಮ ಪಂಚಾಯಿತಿಗಳು ಕ್ರಮ ಕೈಗೊಳ್ಳದೆ ಅಧಿಕಾರ ವ್ಯಾಪ್ತಿ ಇಲ್ಲ, ಅನುಭವದಲ್ಲಿರುವ ವಿಸ್ತೀರ್ಣ 50' x 80' ನಿವೇಶನಕ್ಕಿಂತ ದೊಡ್ಡದು ಇತ್ಯಾದಿ ಸಬೂಬು ತೆಗೆದು ಆ ಕುಟುಂಬಗಳಲ್ಲಿ ಗಲಾಟೆ ಹುಟ್ಟಿಸಿರುವ ಪ್ರಕರಣಗಳು ಅನೇಕ. ಪಶ್ಚಿಮ ಘಟ್ಟದ ಶ್ರೇಣಿ ಹಾಗೂ ಕಣಿವೆಗಳಲ್ಲಿರುವ ಇಂತಹ ಜನವಸತಿ ಪ್ರದೇಶದಲ್ಲಿ ಅನಾದಿಕಾಲದಿಂದ ವಾಸಿಸುತ್ತಿರುವ ಕುಟುಂಬಗಳಿಗೆ ವಾಸದ ಮನೆ, ಕಣ, ದನದ ದೊಡ್ಡಿ ಹೊರತುಪಡಿಸಿ ಉಳಿದ ಅನುಭವದಲ್ಲಿರುವ ಜಾಗವನ್ನು ಗಿಡ, ತೋಟ ಮಾಡಿ ಹಸಿರಾಗಿರುವ ಷರತ್ತು ವಿಧಿಸಿ ಅನುಭೋಗದಲ್ಲಿರುವ ಪೂರ್ಣ ವಿಸ್ತೀರ್ಣಕ್ಕೆ ಅವಿಭಕ್ತ ಕುಟುಂಬದ ವ್ಯವಸ್ಥಾಪಕರ ಹೆಸರಲ್ಲಿ ಖಾತೆ ಮಾಡಿಕೊಡುವುದೇ ಸೂಕ್ತ ಪರಿಹಾರವಾಗಬಲ್ಲದು ಎಂಬುದು ಸರ್ವಸಮ್ಮತ ಅಭಿಪ್ರಾಯ.

3. ಕಾಫಿ ಬೆಳೆಯುವ ಕೊಡಗು, ಚಿಕ್ಕಮಗಳೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಕಾಫಿ ತೋಟದಲ್ಲಿಯೇ ವಾಸದ ಮನೆ, ಕಣ, ದನದ ದೊಡ್ಡಿ, ಕಾಫಿ ಬೀಜ ಸಂಸ್ಕರಣಾ ಘಟಕ ಇತ್ಯಾದಿ ವ್ಯವಸ್ಥೆ ಜೊತೆಗೆ ವಸತಿ ಸಮುಚ್ಚಯವನ್ನು ನಿರ್ಮಿಸಿಕೊಂಡು ಬಿಡಿಬಿಡಿಯಾಗಿ ಮನೆಗಳು ಕಾಫಿ ತೋಟಗಳಲ್ಲಿ ಚದುರಿ ಹೋಗಿರುವ ಪ್ರಕರಣಗಳು ಬಹಳ. ಅಲ್ಲದೇ ಇತ್ತೀಚೆಗೆ ಅಂತಹ ಹಳೆಯ ವಾಸದ ಮನೆಗಳನ್ನು ಪ್ರವಾಸಿಗರ ತಂಗುದಾಣಗಳನ್ನಾಗಿ ಅಥವಾ ರೆಸಾರ್ಟ್ (ಹೋಂಸ್ಟೇಗಳನ್ನಾಗಿ) ಬಳಕೆ ಮಾಡುತ್ತಿರುವ ಪ್ರಕರಣಗಳೂ ಹೆಚ್ಚುತ್ತಿವೆ. ಅಂತಹ ಆಸ್ತಿ, ಕಟ್ಟಡಗಳನ್ನು ಇ-ಸ್ವತ್ತು ವ್ಯಾಪ್ತಿಗೆ ತಂದು ಕರನಿರ್ಧರಣೆ ಮಾಡಬೇಕಾಗಿರುವುದು ಗ್ರಾಮ ಪಂಚಾಯಿತಿಯ ಸಂಪನ್ಮೂಲ ಕ್ರೋಢೀಕರಣ ದೃಷ್ಟಿಯಿಂದ ಅಗತ್ಯವಾದ ಕ್ರಮ.

4. ಗ್ರಾಮಠಾಣಾ ಸಮೀಪದ, ಸಂಪರ್ಕ ರಸ್ತೆ ಪಕ್ಕದ ಕೃಷಿ ಜಮೀನುಗಳಲ್ಲಿ ಅನ್ಯಕ್ರಾಂತ ಮಾಡದೇ ನಗರ ಯೋಜನೆ ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ ನಾಗರೀಕ ಸೌಲಭ್ಯಗಳಿಗೆ ಜಮೀನನ್ನು ಮೀಸಲಿಡದೇ ರಸ್ತೆ, ಚರಂಡಿ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಒದಗಿಸದೇ ವಸತಿ ವಿನ್ಯಾಸಗಳನ್ನು ರಚಿಸಿ ನಿವೇಶನಗಳನ್ನು ವಿಂಗಡಿಸಿ ಒಪ್ಪಂದ ಪತ್ರ/ಕ್ರಯ ಪತ್ರ/ನೋಂದಾಯಿಸದ ಕ್ರಯ ಪತ್ರಗಳ ಮುಖಾಂತರ ಪರಭಾರೆ ಮಾಡಿದ್ದು ಕ್ರಯಕ್ಕೆ

ಪಡೆದವರು ನಿವೇಶನಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ದೀರ್ಘಕಾಲದಿಂದ ವಾಸಿಸುತ್ತಿರುವುದು ಬಹುತೇಕ ಎಲ್ಲಾ ಜಿಲ್ಲೆಗಳ ಗ್ರಾಮಾಂತರ ಪ್ರದೇಶದಲ್ಲಿನ ಸಾಮಾನ್ಯವಾದ ಬೆಳವಣಿಗೆ. ಅನ್ಯಾಕ್ರಾಂತ ಆದೇಶ ಪಡೆದು ನಗರ ಯೋಜನಾ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ವಸತಿ ವಿನ್ಯಾಸದಲ್ಲಿ ವಿಂಗಡಿಸಿದ ನಿವೇಶನಗಳನ್ನು ನೋಂದಾಯಿಸಿದ ಕ್ರಯ ಪತ್ರ ಮುಖಾಂತರ ಖರೀದಿಸಿ ಮನೆ ನಿರ್ಮಿಸಿರುವ ಪ್ರಕರಣಗಳಲ್ಲಿ ಮಾತ್ರ ಇ-ಸ್ವತ್ತು ತಂತ್ರಾಂಶದಂತೆ ಖಾತೆ ಮಾಡಿ ನಮೂನೆ-9, ನಮೂನೆ-11 ವಿತರಿಸಲು ಸಾಧ್ಯ. ಉಳಿದ ಪ್ರಕರಣಗಳಲ್ಲಿ ಅದು ಸಾಧ್ಯವೇ ಇಲ್ಲ. ಇದರಿಂದ ಜನ ವಾಸಿಸುತ್ತಿರುವ ಗ್ರಾಮಠಾಣಾ ಸಮೀಪದ ಮನೆ/ಕಟ್ಟಡಗಳಿಗೆ ಕರಾಕರಣೆ ಮಾಡಲು ಸಾಧ್ಯವಾಗುತ್ತಿಲ್ಲ. ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ ಜಿಲ್ಲೆಗಳಲ್ಲಿ ಕೃಷಿ ಜಮೀನನ್ನು ಭೂ-ಮಾಲೀಕರು ಒಪ್ಪಂದ ಪತ್ರದ ಮುಖಾಂತರ 1 ಗುಂಟೆ, 2 ಗುಂಟೆ ವಿಸ್ತೀರ್ಣದ ನಿವೇಶನಗಳನ್ನಾಗಿ ಪರಭಾರೆ ಮಾಡಿರುವ ಪ್ರಕರಣಗಳೇ ಹೆಚ್ಚು. ಅಲ್ಲಿ ಮನೆ ನಿರ್ಮಿಸಿ ವಾಸಿಸುತ್ತಿರುವವರನ್ನು ತೆರವುಗೊಳಿಸುವುದು ಸಾಧ್ಯವೇ ಇಲ್ಲ. ಅದು ಅನಾವಶ್ಯಕ ಕೂಡ.

5. ರಾಷ್ಟ್ರೀಯ/ರಾಜ್ಯ ಹೆದ್ದಾರಿ/ಪ್ರವಾಸಿ ತಾಣಗಳ ಪಕ್ಕದಲ್ಲಿ ಹೋಟೆಲ್, ಅಂಗಡಿ, ತಂಗುದಾಣ, ರೆಸಾರ್ಟ್ ಇತ್ಯಾದಿಗಳನ್ನು ಯಾತ್ರಿಕರ ಅನುಕೂಲಕ್ಕಾಗಿ ನಿರ್ಮಿಸುವ ಬೆಳವಣಿಗೆ ಪ್ರವಾಸಿ ತಾಣಗಳು, ದೇವಾಲಯಗಳು ಹೆಚ್ಚಿರುವ ಜಿಲ್ಲಾ ವ್ಯಾಪ್ತಿಗಳಲ್ಲಿ ವ್ಯಾಪಕವಾಗಿ ಪ್ರಸರಿಸುತ್ತಿದೆ. ಮಂಡ್ಯ, ರಾಮನಗರ, ಚಿಕ್ಕಮಗಳೂರು, ಕೊಡಗು, ಹಾಸನ, ಮೈಸೂರು, ಕೊಪ್ಪಳ, ಬಳ್ಳಾರಿ, ಧಾರವಾಡ, ಚಾಮರಾಜನಗರ, ವಿಜಯಪುರ, ಬೀದರ್ ಜಿಲ್ಲೆಗಳು ಕೇವಲ ಉದಾಹರಣೆಗಳಷ್ಟೇ. ಈ ರೀತಿಯ ವಾಣಿಜ್ಯ ಕಟ್ಟಡಗಳನ್ನು, ಅವುಗಳು ಗ್ರಾಮ ವ್ಯಾಪ್ತಿಯಿಂದ ಬಹುದೂರವಿದ್ದರೂ ಅನ್ಯಾಕ್ರಾಂತವಾಗದ ಕೃಷಿ ಜಮೀನುಗಳಲ್ಲಿದ್ದರೂ ಗ್ರಾಮ ಪಂಚಾಯಿತಿಯ ಇ-ಖಾತೆಗೆ ತಂದು ಕರವಿಧಿಸುವ ಪ್ರಕ್ರಿಯೆಗೆ ಚಾಲನೆ ಕೊಡದಿದ್ದರೆ ನಷ್ಟವಾಗುವುದು ಗ್ರಾಮ ಪಂಚಾಯಿತಿಗಳಿಗೆ ಹೊರತು ಕಾನೂನು ಉಲ್ಲಂಘಿಸಿ ವಾಣಿಜ್ಯ ಕಟ್ಟಡಗಳನ್ನು ನಿರ್ಮಿಸಿದವರಿಗಲ್ಲ. ಇದೇ ತರ್ಕ ಗ್ರಾಮೀಣ ಪ್ರದೇಶದಲ್ಲಿ ಅಲ್ಲಲ್ಲಿ ನಾಯಿಕೊಡೆಗಳಂತೆ ಏಳುತ್ತಿರುವ ಮದುವೆ ಮಂಟಪ, ಛತ್ರ, ಮೋಜುದಾಣ (ರಿಸಾರ್ಟ್)ಗಳಿಗೂ ಅನ್ವಯಿಸುತ್ತದೆ.

6. ಉದ್ಯೋಗನಿಮಿತ್ತ ನಗರಗಳಿಗೆ ಯುವ ಸಮೂಹ ವಲಸೆ ಹೋಗುತ್ತಿರುವ ಪ್ರಕ್ರಿಯೆ ವ್ಯಾಪಕವಾಗುತ್ತಿರುವ ಕಾರಣ ಜಿಲ್ಲಾ ಕೇಂದ್ರಸ್ಥಾನಗಳು ವೇಗವಾಗಿ ನಗರೀಕರಣಗೊಳ್ಳುತ್ತಿರುವ ಈ ದಶಕದಲ್ಲಿ ಸ್ವಾಭಾವಿಕವಾಗಿ ವಸತಿ ವ್ಯವಸ್ಥೆಗೆ ಬೇಡಿಕೆ ಹೆಚ್ಚು. ಜಿಲ್ಲಾ ಕೇಂದ್ರಗಳ ಸುತ್ತ ಮುತ್ತಣ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ನಿವೇಶನ ವಿಂಗಡಣೆ, ಮಾರಾಟ ಪ್ರಕರಣಗಳು ಹೆಚ್ಚುತ್ತಿದ್ದು, ಈ ಬದಲಾವಣೆ ವ್ಯಾಪಕವಾಗಿದ್ದು ಇದನ್ನು ನಿರ್ವಹಿಸುವಲ್ಲಿ ಕಂದಾಯ, ನಗರ ಯೋಜನೆ ಇಲಾಖೆಗಳು ಸೋಲುತ್ತಿರುವ ಕಾರಣ ಕಾನೂನು ಉಲ್ಲಂಘನೆಯಾಗಿ ಅನಧಿಕೃತ ವಸತಿ ವಿನ್ಯಾಸಗಳು, ಕಟ್ಟಡಗಳ ನಿರ್ಮಾಣ ಅಡೆತಡೆ ಇಲ್ಲದೇ ಸಾಗಿದೆ. ಆದ್ದರಿಂದ ಅಂತಹ ಗ್ರಾಮಗಳನ್ನು,

ಹತ್ತಿರದ ನಗರ / ಪಟ್ಟಣ ಪ್ರದೇಶಗಳಲ್ಲಿ ವಿಲೀನಗೊಳಿಸಿ ನಗರ ಸಭೆ, ನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ತಂದು ಬೆಳವಣಿಗೆಯನ್ನು ಕ್ರಮಬದ್ಧಗೊಳಿಸಿ ಸುಧಾರಿಸಬಹುದೆಂದು ತೋರುತ್ತದೆ. ಜನಸಂಖ್ಯೆ ಮಿತಿ ಮೀರಿದ ಗ್ರಾಮ ಪಂಚಾಯಿತಿಗಳನ್ನು, ಅವು ಜಿಲ್ಲಾ, ತಾಲ್ಲೂಕು ಕೇಂದ್ರಗಳಿಂದ ಬಹುದೂರವಿದ್ದು ವಿಲೀನಗೊಳಿಸಲು ಸಾಧ್ಯವಾಗದಿದ್ದಲ್ಲಿ ಪ್ರತ್ಯೇಕ ಪಟ್ಟಣ, ಸ್ಥಳೀಯ ಸಂಸ್ಥೆಯನ್ನಾಗಿಯಾದರೂ ಘೋಷಿಸುವುದು ಅನಿವಾರ್ಯವಾಗುತ್ತದೆ.

7. ಅಂತಿಮವಾಗಿ ಸಮಸ್ಯೆಗಳ ಆಗರವಾಗಿರುವ ಬೃಹತ್ ಬೆಂಗಳೂರು ಮಹಾನಗರದ ಸುತ್ತಮುತ್ತಲ ಗ್ರಾಮ ಪಂಚಾಯಿತಿಗಳ ಬೆಳವಣಿಗೆಯ ವೇಗ ಅಗಾಧ, ಬದಲಾವಣೆ ಕ್ಷಿಪ್ರ. ಈ ಬದಲಾವಣೆಯ ವೇಗಕ್ಕೆ ಹೋಗಿ ಸುಧಾರಣೆ ತರಲು ಈಗಿನ ಆಡಳಿತ ವ್ಯವಸ್ಥೆಗೆ ಸಾಧ್ಯವಾಗದ ಪರಿಸ್ಥಿತಿ ಸೃಷ್ಟಿಯಾಗಿದೆ. ಬೆಂಗಳೂರಿಗೆ ವಿವಿಧ ಕಾರಣಗಳಿಗಾಗಿ ವಲಸೆ ಬರುತ್ತಿರುವವರ ಸಂಖ್ಯೆ ಅಪಾರ. ಅವರ ವಸತಿ ಸಮಸ್ಯೆ ಪರಿಹರಿಸುವ ಹೊರೆ ಸುತ್ತಮುತ್ತಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಮೇಲೆ ಬಿದ್ದು ಅವುಗಳು ವೇಗವಾಗಿ ಬೆಳೆಯುತ್ತಿವೆ. ಕಂದಾಯ ಇಲಾಖೆಯಾಗಲೀ, ನಗರ ಯೋಜನೆ ಇಲಾಖೆಯಾಗಲಿ ಈ ವೇಗದ ಬೆಳವಣಿಗೆಯ ಸುಧಾರಣೆಗೆ ಯತ್ನಿಸುತ್ತಿಲ್ಲ. ಒಂದು ಅಂದಾಜಿನ ಪ್ರಕಾರ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ನಾಲ್ಕು ವರ್ಷಗಳಲ್ಲಿ ವಿತರಿಸಿದ ನಿವೇಶನಗಳ ನೂರು ಪಟ್ಟು, ಬೆಂಗಳೂರು ನಗರದ ಸುತ್ತಲ ನಲವತ್ತು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಅಧಿಕೃತ/ಅನಧಿಕೃತ ನಿವೇಶನಗಳ ರಚನೆ, ಪರಭಾರೆಯಾಗಿರುವುದು! ಈ ಬೃಹತ್ ಸಮಸ್ಯೆಗೆ ಪರಿಹಾರ ಸುಲಭ ಸಾಧ್ಯವಲ್ಲ. ಬೆಂಗಳೂರು ನಗರದ ಮೂಲಭೂತ ಸೌಕರ್ಯಗಳ ಮೇಲೆ ಈ ಸುತ್ತಲ ಬೆಳವಣಿಗೆ ಅಗಾಧ ಹೊರೆಯಾಗುವುದರಲ್ಲಿ ಸಂದೇಹವಿಲ್ಲ. ವೇಗವಾಗಿ ನಗರೀಕರಣ ಗೊಳ್ಳುತ್ತಿರುವ ಹಾಗೂ ಜನಸಂಖ್ಯೆ ಮಿತಿಮೀರಿ ಬೆಳೆಯುತ್ತಿರುವ ಗ್ರಾಮೀಣ ಸೊಗಡು ಮರೆಯಾಗುತ್ತಿರುವ ಅಂತಹ ಗ್ರಾಮ ಪಂಚಾಯಿತಿಗಳಲ್ಲಿ ಕೆಲವನ್ನು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ತರಬಹುದು. ಕೆಲವು ಗ್ರಾಮ ಪಂಚಾಯಿತಿಗಳನ್ನು ಪ್ರತ್ಯೇಕವಾಗಿ ಅಥವಾ ಗುಂಪುಗೂಡಿಸಿ ನಗರ ಪಾಲಿಕೆ/ಪುರಸಭೆ/ಪಟ್ಟಣ ಪಂಚಾಯಿತಿಗಳನ್ನಾಗಿ ಪರಿವರ್ತಿಸಿ ಸಂಬಂಧಿಸಿದ ಪಟ್ಟಣ/ಸ್ಥಳೀಯ ಸಂಸ್ಥೆ ಯೋಜನಾ ಪ್ರಾಧಿಕಾರಗಳು ಅವುಗಳ ಬೆಳವಣಿಗೆಯನ್ನು ನಿಯಂತ್ರಿಸಿ ಶಿಸ್ತಿನೊಂದಿಗೆ ಯೋಜನೆಯಂತೆ ಕ್ರಮ ಜರುಗಿಸುವುದು ಸೂಕ್ತ.

## II. ಸಾರ್ವಜನಿಕರ ಅಭಿಪ್ರಾಯ-ಸಮಸ್ಯೆಗಳ ವಿಶ್ಲೇಷಣೆ :

ನಮ್ಮ ಸಭೆಯೊಂದರಲ್ಲಿ ಜನ ಪ್ರತಿನಿಧಿಯೊಬ್ಬರು ರಾಜ್ಯ ಸರ್ಕಾರ ಇ-ಸ್ವತ್ತು ಎಂಬ ಭೂತವನ್ನು ಸೃಷ್ಟಿಸಿ ಎಲ್ಲರೂ ಗಾಬರಿಯಾಗುವಂತೆ ಗಣಕತಂತ್ರ ತಂತ್ರಾಂಶ ಉಪಯೋಗಕ್ಕೆ ಬಾರದಂತಹ ಪರಿಸ್ಥಿತಿಯನ್ನು ನಿರ್ಮಿಸಿದೆ ಎಂದು ಅಲವತ್ತುಕೊಂಡು ಇದು ಭ್ರಷ್ಟಾಚಾರವನ್ನು ಇಮ್ಮಡಿಗೊಳಿಸಿದೆ ಎಂದು ಆರೋಪಿಸಿರುವುದರಲ್ಲಿ ಬಹಳ

ಸತ್ಯಾಂಶವಿರುವುದು ಕಂಡುಬರುತ್ತದೆ. ಇ-ಸ್ವತ್ತು ತಂತ್ರಾಂಶ ಸೃಷ್ಟಿಗೆ ಬೆಂಗಳೂರು ಮಹಾನಗರ ಸುತ್ತಣ ಪ್ರದೇಶದಲ್ಲಿ ಆಗಿರುವ ಅಕ್ರಮ ಭೂ ವ್ಯವಹಾರಗಳಿಗೆ ಸರ್ಕಾರ ಕಡಿವಾಣ ಹಾಕಬೇಕೆಂಬ ಗೌ|| ಉಚ್ಚ ನ್ಯಾಯಾಲಯದ ಅಪೂರ್ಣ ನಿರ್ದೇಶನವೇ ಕಾರಣ. ಬೆಂಗಳೂರು ನಗರ ಜಿಲ್ಲೆಯ ದಕ್ಷಿಣ ತಾಲ್ಲೂಕಿನ ಬಸವನಪುರ ಗ್ರಾಮ ಪಂಚಾಯಿತಿಯ ಕಮ್ಮನಹಳ್ಳಿ ಸ. ನಂ. 74 ರ ಕೃಷಿ ಜಮೀನಿನಲ್ಲಿ ನಿವೇಶನದ ಖಾತೆ ಬದಲಾವಣೆಯನ್ನು ಗ್ರಾಮ ಪಂಚಾಯಿತಿ ಮಾಡಿದ್ದು ಅದರ ವಿರುದ್ಧ ಕೃಷಿ ಜಮೀನಿನ ಕ್ರಯದಾರ ಆರ್. ವೆಂಕಟೇಶ ರವರು ಸಲ್ಲಿಸಿದ್ದ ಮೇಲ್ಮನವಿಯನ್ನು ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಪುರಸ್ಕರಿಸಿ ವಿವಾದಗ್ರಸ್ತ ಆಸ್ತಿಯ ಮಾಲೀಕತ್ವದ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಬಾಕಿ ಇದೆ ಎಂಬ ಕಾರಣಕ್ಕೆ ಖಾತೆ ರದ್ದು ಪಡಿಸಿದ್ದರು. ಈ ಆದೇಶವನ್ನು ನಿವೇಶನದ ಕ್ರಯದಾರ ವಿ.ಜಿ.ಐಯ್ಯರ್ ರವರು ರಿಟ್ ಅರ್ಜಿ ಸಲ್ಲಿಸಿ ಗೌ|| ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು. ಅದು ವೈಯಕ್ತಿಕ ಆಸ್ತಿ ಹಕ್ಕಿನ ಬಗೆಗಿನ ರಿಟ್ ಪ್ರಕರಣವೇ ಹೊರತು ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯಾಗಿರಲಿಲ್ಲ. ಆದರೂ ಗೌ|| ಉಚ್ಚ ನ್ಯಾಯಾಲಯ ರಿಟ್ ಅರ್ಜಿಯನ್ನು ರಿಟ್ ಪ್ರಕರಣ ಸಂಖ್ಯೆ **12278/2007(LB-RES)** ರಲ್ಲಿ ದಿನಾಂಕ **07.07.2008** ರಂದು ಇತ್ಯರ್ಥಪಡಿಸಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ಆದೇಶವನ್ನು, ಅಧಿಕಾರ ವ್ಯಾಪ್ತಿ ಇಲ್ಲದ ಕಾರಣ ನೀಡಿ ರದ್ದುಗೊಳಿಸಿದ ನಂತರವೂ ಸಾರ್ವಜನಿಕ ಹಿತಾಸಕ್ತಿಯ ಪ್ರಕರಣವೆಂದು ಪರಿಗಣಿಸಿ ರಾಜ್ಯದ ವಿವಿಧ ತಾಲ್ಲೂಕುಗಳ ತಹಶೀಲ್ದಾರರು ಖರಾಬು ಜಮೀನಿನ ರಕ್ಷಣೆ ಬಗ್ಗೆ ಪ್ರಮಾಣ ಪತ್ರಗಳನ್ನು ಸಲ್ಲಿಸಲು ನಿರ್ದೇಶಿಸಿ ಸಲ್ಲಿತವಾದ ಪ್ರಮಾಣ ಪತ್ರಗಳ ಆಧಾರದ ಮೇಲೆ ಕಾಲಕಾಲಕ್ಕೆ ಆದೇಶಗಳ ಸರಮಾಲೆಯನ್ನು ಹೊರಡಿಸಿದ್ದರು. ರಿಟ್ ಅರ್ಜಿ ಇತ್ಯರ್ಥವಾದ ನಂತರ ಹೊರಡಿಸಲಾದ ಈ ಯಾವುದೇ ಆದೇಶದಿಂದಲೂ ರಿಟ್ ಅರ್ಜಿದಾರರಿಗೆ ಯಾವ ರೀತಿಯ ಪರಿಹಾರ ದೊರೆತಿರಲಿಲ್ಲ. ರಿಟ್ ಪ್ರಕರಣ ಸಂಖ್ಯೆ : **12278/2007(LB-RES)** ರಲ್ಲಿ ಏಕ ನ್ಯಾಯಾಧೀಶ ಪೀಠದ ದಿನಾಂಕ: **07.07.2008** ದ ನಂತರದ ಆದೇಶಗಳನ್ನು ಪ್ರಶ್ನಿಸಿ ಶ್ರೀ ಕೆ.ಎಸ್. ಯತಿರಾಜ್ ಎಂಬುವವರು ಗೌ|| ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠಕ್ಕೆ ರಿಟ್ ಮೇಲ್ಮನವಿಗಳನ್ನು ಸಲ್ಲಿಸಿದ್ದು ಅವು ರಿಟ್ ಮೇಲ್ಮನವಿ ಕ್ರಮ ಸಂಖ್ಯೆ: **906-932/2015** ಗಳಲ್ಲಿ ನೋಂದಾಗಿದ್ದು ಇನ್ನೂ ಇತ್ಯರ್ಥವಾಗಿಲ್ಲ. ಗೌ|| ಉಚ್ಚ ನ್ಯಾಯಾಲಯದ ಏಕ ನ್ಯಾಯಾಧೀಶ ಪೀಠದ ಆದೇಶದಲ್ಲಿ ಗಮನಿಸಬೇಕಾದ ಅಂಶವೆಂದರೆ ಬಸವನಪುರ ಗ್ರಾಮ ಪಂಚಾಯಿತಿಯು ಸರ್ಕಾರದ ಆದೇಶದನ್ವಯ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನವಾಗಿದ್ದು ವಿವಾದಿತ ಆಸ್ತಿ ಬಗ್ಗೆ ಮೇಲ್ಮನವಿಯನ್ನು ಇತ್ಯರ್ಥ ಪಡಿಸುವ ಅಧಿಕಾರ ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ದತ್ತವಾಗಿಲ್ಲ ಎಂಬುದು. ಆದರೆ ರಿಟ್ ಅರ್ಜಿಯನ್ನು

ದಿನಾಂಕ: 07.07.2008 ರಂದು ಇತ್ಯರ್ಥಪಡಿಸಿದ ನಂತರವೂ ರಿಟ್ ಪ್ರಕರಣವನ್ನು ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆ ಎಂದು ಪರಿಭಾವಿಸಿ ಇಡೀ ರಾಜ್ಯದ ಸರ್ಕಾರಿ ಖರಾಬು ಜಮೀನುಗಳಿಗೆ ಸಂಬಂಧಿಸಿದಂತೆ ವಿಸ್ತರಿಸಿ ಆದೇಶಗಳ ಸರಮಾಲೆಯನ್ನು ಸೃಷ್ಟಿಸಿದ್ದೇ ವಿಶೇಷ ! ಸರ್ಕಾರದ ವಿವಿಧ ವಿವರಣೆಯ ಖರಾಬು ಜಮೀನುಗಳು ಸಾರ್ವಜನಿಕರ ಸಾಮಾನ್ಯ ಬಳಕೆ ಆಸ್ತಿಗಳಾಗಿದ್ದು ಅವುಗಳನ್ನು ಸಂರಕ್ಷಿಸುವುದು ಸರ್ಕಾರದ, ಅದರ ಅಧೀನ ಅಧಿಕಾರಿಗಳ ಆದ್ಯ ಕರ್ತವ್ಯವೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೆ ವಿಷಯಕ್ಕೆ ಸಂಬಂಧಿಸದ ವೈಯಕ್ತಿಕ ಹಕ್ಕಿನ ಪ್ರಕರಣವೊಂದರಲ್ಲಿ ಈ ರೀತಿ ಒತ್ತಾಯದ ಪ್ರಮಾಣ ಪತ್ರಗಳನ್ನು ತಹಶೀಲ್ದಾರರಿಂದ ಪಡೆದು ಆದೇಶಗಳನ್ನು ಹೊರಡಿಸಿ ಕಡತದಲ್ಲಿಟ್ಟರೆ ಸರ್ಕಾರಿ ಖರಾಬು ಜಮೀನುಗಳ ಸಂರಕ್ಷಣೆಯಾಗುತ್ತದೆ ಎಂಬುದು ವಾಸ್ತವಾಂಶಕ್ಕೆ ತೀರಾ ದೂರವಾದ ಸಂಗತಿ. ಭೂಗಳ್ಳರು ಸರ್ಕಾರಿ ಖರಾಬು ಜಮೀನನ್ನು ಸುಳ್ಳು ದಾಖಲೆ ಸೃಷ್ಟಿಸಿ ಅಕ್ರಮವಾಗಿ ವಶಕ್ಕೆ ಪಡೆಯುವ ಪ್ರಕ್ರಿಯೆಯನ್ನು ಗ್ರಾಮ ಪಂಚಾಯಿತಿ ಸೇರಿದಂತೆ ಆಡಳಿತ ವ್ಯವಸ್ಥೆಯು ಎಲ್ಲಾ ಹಂತಗಳಲ್ಲಿಯೂ ವಿರೋಧಿಸಬೇಕೆಂಬುದರಲ್ಲಿ ಎರಡು ಮಾತಿಲ್ಲ. ಆದರೆ ಗ್ರಾಮ ಪಂಚಾಯಿತಿ ಸರ್ಕಾರದ ಖರಾಬು ಜಮೀನುಗಳ ಬಗ್ಗೆ ಮಾತ್ರವಾಗಲಿ ಅಂತಹ ಜಮೀನಿನಲ್ಲಿ ಅನಧಿಕೃತವಾಗಿ ವಿಂಗಡಣೆಯಾದ ನಿವೇಶನಗಳ, ಅವುಗಳಲ್ಲಿ ಅಕ್ರಮವಾಗಿ ನಿರ್ಮಾಣವಾಗುವ ಕಟ್ಟಡಗಳ ಬಗ್ಗೆ ಮಾತ್ರ ಖಾತೆ ದಾಖಲು/ಬದಲಾವಣೆ ಮಾಡುವುದಿಲ್ಲ. ಗ್ರಾಮಠಾಣಾ ವ್ಯಾಪ್ತಿಯ ಖಾಸಗಿ ಮನೆ, ನಿವೇಶನ/ಆಸ್ತಿ, ಅನ್ಯಾಕ್ರಾಂತವಾದ ಕೃಷಿ ಜಮೀನಿನಲ್ಲಿ ವಸತಿ ವಿನ್ಯಾಸಗಳು ರಚನೆಯಾಗಿ ಸಂಬಂಧಿಸಿದ ನಗರ ಯೋಜನಾ ಪ್ರಾಧಿಕಾರದ ಅನುಮೋದನೆ ಪಡೆದ ನಿವೇಶನಗಳು. ಅಂತಹ ನಿವೇಶನಗಳಲ್ಲಿ ನಿರ್ಮಾಣವಾಗುವ ಮನೆಗಳು/ಆಸ್ತಿಗಳಿಗೂ ಖಾತೆ ದಾಖಲು ಮಾಡಿ ಕರ ವಿಧಿಸುತ್ತಾರೆ. ಎಲ್ಲಾ ಆಸ್ತಿಗಳು ಸರ್ಕಾರಿ ಖರಾಬು ಜಮೀನಿನಲ್ಲಿ ನೆಲೆಗೊಂಡಿರುವುದಿಲ್ಲ. ಕೆಲವು ಇರಬಹುದು. ಅಂತಹ ಆಸ್ತಿಗಳ ಬಗ್ಗೆ ತೀವ್ರ ವಿಚಾರಣೆ ಮಾಡಿ ಗ್ರಾಮ ಪಂಚಾಯಿತಿಯು ನಿರ್ಣಯ ಕೈಗೊಂಡು ಖಾತೆ ದಾಖಲು ಮಾಡಬಹುದು ಅಥವಾ ನಿರಾಕರಿಸಬಹುದು. ಆದರೆ ಎಲ್ಲಾ ಖಾಸಗಿ ಆಸ್ತಿಗಳನ್ನು ಸಂಶಯದ ದೃಷ್ಟಿಯಿಂದ ನೋಡಿ ಅವುಗಳ ಖಾತೆ ದಾಖಲು ಮಾಡಲು ನಿರ್ಬಂಧ ಹೇರುವುದು ಸರಿಯಾದ ಕ್ರಮವಲ್ಲ ಎಂಬುದು ಈ ಸಮಿತಿಯ ಸ್ಪಷ್ಟ ಅಭಿಮತ.

1. ಬೆಂಗಳೂರು ಸುತ್ತಮುತ್ತಲಿನ ಅಕ್ರಮ ಭೂ-ವ್ಯವಹಾರಗಳಿಗೆ ಗ್ರಾಮಪಂಚಾಯಿತಿಗಳು ಮಾತ್ರವೇ ಕಾರಣವಲ್ಲ. ಅಲ್ಲದೇ ಅಕ್ರಮಗಳನ್ನು ತಡೆಯಲು ಗ್ರಾಮ ಪಂಚಾಯಿತಿಗಳಿಗೆ ಯಾವ ಅಧಿಕಾರವೂ ಇಲ್ಲ. ಕೃಷಿ ಜಮೀನುಗಳನ್ನು ವಿವಿಧ ಕೃಷಿಯೇತರ ಉದ್ದೇಶಗಳಿಗಾಗಿ ಅನ್ಯಾಕ್ರಾಂತ/ಪರಿವರ್ತನೆ ಮಾಡುವ ಅಧಿಕಾರವಿರುವ ಕಂದಾಯ ಇಲಾಖೆ ಅನ್ಯಾಕ್ರಾಂತ ಆದೇಶ ಪಡೆಯದೇ ವಸತಿ ವಿನ್ಯಾಸಗಳನ್ನು ರಚಿಸಿ ನಿವೇಶನಗಳನ್ನು ಮಾರಾಟ ಮಾಡಿರುವ ಹಾಗೂ ಅಂತಹ ನಿವೇಶನಗಳಲ್ಲಿ ಅನಧಿಕೃತ ಮನೆ/ಕಟ್ಟಡಗಳನ್ನು ನಿರ್ಮಿಸಿರುವವರ

ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಳ್ಳದೇ ಸುಮ್ಮನಿರುವುದು, ಅನ್ಯಾಕ್ರಾಂತವಾದ ಕೃಷಿ ಜಮೀನುಗಳಲ್ಲಿನ ವಸತಿ ವಿನ್ಯಾಸಗಳಿಗೆ ಅನುಮೋದನೆ ನೀಡುವ ಅಧಿಕಾರವುಳ್ಳ ಯೋಜನಾ ಪ್ರಾಧಿಕಾರಗಳು ಕೃಷಿ ಜಮೀನಿನಲ್ಲಿ ಅನಧಿಕೃತವಾಗಿ ರಚಿಸುವ ವಸತಿ ವಿನ್ಯಾಸಗಳಲ್ಲಿ ಪರವಾನಗಿ ಇಲ್ಲದೆ ಮನೆ ಕಟ್ಟುತ್ತಿರುವವರ ವಿರುದ್ಧ ಯಾವ ಕ್ರಮವನ್ನು ಕೈಗೊಳ್ಳದೆ ಸುಮ್ಮನಿರುವುದು, ಅತಿ ವೇಗವಾಗಿ ನಗರೀಕರಣಗೊಳ್ಳುತ್ತಿರುವ ಬೆಂಗಳೂರು ಮಹಾನಗರ ಪಾಲಿಕೆ ಸುತ್ತಣ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗಳಲ್ಲಿ ಅನಧಿಕೃತ ವಸತಿ ವಿನ್ಯಾಸಗಳ ರಚನೆ ಕಟ್ಟಡಗಳ ನಿರ್ಮಾಣಕ್ಕೆ ಮೂಲ ಕಾರಣ. ರಿಟ್ ಪ್ರಕರಣದಲ್ಲಿ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳು ಪ್ರತಿವಾದಿಯಾಗಿರಲಿಲ್ಲ. ಆದರೂ ನಗರ ಪ್ರದೇಶದ ನಿವೇಶನಗಳ ಬಗ್ಗೆ ಯಾವುದೇ ಅಧಿಕಾರ ವ್ಯಾಪ್ತಿಯಿಲ್ಲದೇ ಗೌ॥ ಉಚ್ಚ ನ್ಯಾಯಾಲಯದಲ್ಲಿ ಅವರು ಪ್ರಮಾಣಪತ್ರವನ್ನು ಸಲ್ಲಿಸಿರುವುದು ಆಶ್ಚರ್ಯ. ಅನಧಿಕೃತ ವಸತಿ ವಿನ್ಯಾಸಗಳಲ್ಲಿ ವಿಂಗಡಣೆಯಾಗಿ ಪರಭಾರೆಯಾದ ನಿವೇಶನಗಳು, ನಿರ್ಮಾಣವಾದ ಮನೆಗಳ ಬಗ್ಗೆ ನೋಂದಣಿ ಕ್ರಯ ಪತ್ರ ಆಧರಿಸಿ ಗ್ರಾಮ ಪಂಚಾಯಿತಿಗಳು ಖಾತೆ ದಾಖಲಾತಿ ನೀಡುವುದನ್ನು ನಿಲ್ಲಿಸಿದರೆ ಅನಧಿಕೃತ ಬೆಳವಣಿಗೆ ನಿಲ್ಲದು. ಬದಲಿಗೆ ಅದರಿಂದ ಗ್ರಾಮ ಪಂಚಾಯಿತಿಗಳ ಆರ್ಥಿಕ ಹಿತಾಸಕ್ತಿಗೇ ನಷ್ಟ. ಅದಕ್ಕೆ ಪೂರಕವಾಗಿ ಎಲ್ಲಾ ಮೂಲ ದಾಖಲೆಗಳನ್ನು ಸಲ್ಲಿಸಿದವರಿಗೆ ಮಾತ್ರ ಇ-ಸ್ವತ್ತು ಖಾತೆ ಮಾಡಬೇಕೆಂಬ ನಿಯಮ ತಂತ್ರಾಂಶಗಳು ರಚಿತವಾದವು. ಜನ ಸಾಮಾನ್ಯರ ಸಂಕಷ್ಟಗಳ ಅರಿವಿಲ್ಲದ ಅಧಿಕಾರಿಗಳು, ಜನಸಂಪರ್ಕವೇ ಇಲ್ಲದ ಯಾವ ಇಲಾಖೆಯ ಕ್ಷೇತ್ರ ಮಟ್ಟದ ಸಮಸ್ಯೆಗಳ ಅರಿವು ಇಲ್ಲದ ವಿದ್ಯುನ್ಮಾನ (NIC) ಇಲಾಖೆಯೊಡಗೂಡಿದಾಗ ಜನ ಸಾಮಾನ್ಯರನ್ನು ಬೆದರಿಸುವ ಪೆಡಂಭೂತವಲ್ಲದೇ ಬೇರೆ ಏನು ಸೃಷ್ಟಿಯಾದೀತು? ಈ ಕಾರಣಕ್ಕೆ ರಚನೆಯಾದ ತಂತ್ರಾಂಶ, ನಿಯಮಗಳನ್ನು ಹಿಂದುಳಿದ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೂ, ಅರಣ್ಯ ಪ್ರದೇಶದಲ್ಲಿ ಜನವಸತಿ ಇರುವ ಮಲೆನಾಡ ವ್ಯಾಪ್ತಿಗೂ ಅನ್ವಯಿಸಿದಾಗ ಜನರ ಹಿತ ಕಾಯುವುದು ಸಾಧ್ಯವೇ? ಒಟ್ಟಾರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮೀಣ ಪ್ರದೇಶದ ಜನತೆಗೆ ಸಮಸ್ಯೆಗಳ ಸರಮಾಲೆ ಉದ್ಭವವಾಗಿರುವುದು 'ವಿದ್ಯುನ್ಮಾನ ಸ್ವತ್ತು ನಿಯಮ ಹಾಗೂ ತಂತ್ರಾಂಶ' ಎಂಬುದರಲ್ಲಿ ಸಂಶಯವಿಲ್ಲ.

2. ಅತಿ ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ಮಹಾನಗರದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಖಾಸಗಿ ಆಸ್ತಿ ಅಭಿವೃದ್ಧಿ ಸಂಸ್ಥೆಗಳು, ಗೃಹ ನಿರ್ಮಾಣ ಸಹಕಾರ ಸಂಘಗಳು, ಅಭಿವೃದ್ಧಿ ಪಡಿಸುವ ವಸತಿ ವಿನ್ಯಾಸಗಳಿಗೆ ಜಮೀನನ್ನು ಒದಗಿಸಲು ನಗರ ಪಾಲಿಕೆ ಗಡಿ ಹತ್ತಿರದ ಹಸಿರು ವಲಯವನ್ನು ಹಳದಿ ವಲಯವನ್ನಾಗಿ ಪರಿವರ್ತಿಸಿ ಹಸಿರು ವಲಯ ಪಟ್ಟಿಯನ್ನು ಬೆಂಗಳೂರಿನಿಂದ ದೂರ ದೂಡುವ ಅವಸರದಲ್ಲಿ ಆ ವಿನೂತನ ಹಸಿರು ವಲಯದಲ್ಲಿ ಬರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಬೆಳವಣಿಗೆಯನ್ನು

ಪರಿಗಣಿಸದಿರುವುದು ದುರದೃಷ್ಟಕರ. ಹಣವಂತರು ಬೆಂಗಳೂರು ನಗರ ವ್ಯಾಪ್ತಿಯಲ್ಲಿ ನಿವೇಶನಗಳನ್ನು ದುಬಾರಿ ಬೆಲೆಗೆ ಕ್ರಯಕ್ಕೆ ಪಡೆಯಲು ಪ್ರಯತ್ನಿಸುವಾಗ ಉದ್ಯೋಗ ನಿಮಿತ್ತ ಬೆಂಗಳೂರು ನಗರಕ್ಕೆ ಬಂದ ಬಡವರು, ಮಧ್ಯಮ ವರ್ಗದವರು, ನಗರ ಸಮೀಪದ ಪಂಚಾಯಿತಿಗಳ ವ್ಯಾಪ್ತಿಯ ಕೃಷಿ ಜಮೀನುಗಳಲ್ಲಿ ರಾತ್ರೋರಾತ್ರಿ ರಚಿತವಾಗುತ್ತಿದ್ದ ಕಂದಾಯ ಭೂಮಿಯಲ್ಲಿನ ವಸತಿ ವಿನ್ಯಾಸಗಳನ್ನೇ ಅವಲಂಬಿಸಿ ಸಣ್ಣ ಸಣ್ಣ ನಿವೇಶನಗಳನ್ನು ತಮಗೆ ಎಟುಕುವ ದರದಲ್ಲಿ ಕ್ರಯಕ್ಕೆ ಪಡೆದು ಮನೆಯನ್ನು ಕಟ್ಟಿಕೊಂಡು ವಾಸಿಸತೊಡಗಿದರು. ಅಂತಹ ಗ್ರಾಮಗಳು ಹಸಿರು ಪಟ್ಟಿ ವ್ಯಾಪ್ತಿಗೆ ಸೇರಿದ್ದರೂ ಇಡೀ ಕೃಷಿ ಭೂಮಿಯಲ್ಲಿ ವಸತಿ ಉದ್ದೇಶದ ಮನೆಗಳನ್ನು ನಿರ್ಮಿಸಿಕೊಂಡು ವಾಸವಾಗಿರುವುದು ವಾಸ್ತವಾಂಶ. ಹೆಸರುಘಟ್ಟ, ಬನ್ನೇರುಘಟ್ಟ, ಬಾಗಲೂರು ಕೆಲವೇ ಉದಾಹರಣೆಗಳು. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲಾ ವ್ಯಾಪ್ತಿಯ ಅನೇಕ ಗ್ರಾಮ ಪಂಚಾಯಿತಿಗಳು ಈ ರೀತಿ ಶರವೇಗದಲ್ಲಿ ವಸತಿ ಉದ್ದೇಶಕ್ಕೆ ಕಲ್ಪವೃಕ್ಷಗಳಾಗಿ ಪರಿವರ್ತನೆಯಾಗಿವೆ. ಅಲ್ಲಿ ವಾಸಿಸುತ್ತಿರುವ ಜನರೆಲ್ಲರೂ ಜನಗಣತಿಯಲ್ಲಿ ಎಣಿಕೆಯಾಗಿ ಮತದಾರರ ಪಟ್ಟಿಯಲ್ಲಿ ಸೇರಿದ್ದು ಮತ ಚಲಾಯಿಸುತ್ತಿರುವ ಭಾರತದ ಸತ್ಪ್ರಜೆಗಳು. ಅವರು ವಾಸಿಸುತ್ತಿರುವ ಮನೆಗಳನ್ನು ಅನ್ಯಾಕ್ರಾಂತವಾಗದ, ಹಸಿರು ವಲಯಕ್ಕೆ ಸೇರಿದ ಜಮೀನಿನಲ್ಲಿ ನಗರ ಯೋಜನಾ ಪ್ರಾಧಿಕಾರದ ಅನುಮೋದನೆಯಿಲ್ಲದ ವಸತಿ ವಿನ್ಯಾಸದಲ್ಲಿ ಅಕ್ರಮವಾಗಿ ನಿರ್ಮಿಸಿರುವ ಮನೆಗಳೆಂದು ಘೋಷಿಸಿ ಅವುಗಳನ್ನು ಕೆಡವಲು ಸಾಧ್ಯವೇ ಇಲ್ಲ. ಅಂತಹ ಕ್ರಮ ನಾಗರೀಕ ಸಮಾಜದಲ್ಲಿ ಸಾಧುವೂ ಅಲ್ಲ.

3. ಯಾವುದೇ ಕಾಯಿದೆಯನ್ನು ಕೇವಲ ಘೋಷಣೆ, ಗೆಜೆಟ್ ಪ್ರಕಟಣೆ ಮೂಲಕ ಅಮಲಿಗೆ ತರಲಾಗದು. ಅಂತಹ ಕಾಯಿದೆಯ ಅಂಶಗಳನ್ನು ಇಲಾಖೆಯ ಸಿಬ್ಬಂದಿ ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಟ್ಟು ಜಾರಿಗೆ ತರಲು ಸನ್ನದ್ಧರಿರಬೇಕು. ಕಾಯಿದೆಯ ಅಂಶಗಳನ್ನು ಜಾರಿಗೆ ತರಬೇಕು ಅಥವಾ ಕಾಯಿದೆ ಉಲ್ಲಂಘನೆಯಾದಲ್ಲಿ ಸಂಬಂಧಿಸಿದವರ ಮೇಲೆ ಕಾನೂನು ಕ್ರಮ ಜಾರಿಯಾಗಬೇಕು. ಗ್ರಾಮೀಣ ಮತ್ತು ನಗರ ಯೋಜನಾ ಕಾಯಿದೆ, ವಿವಿಧ ನಗರ ಅಭಿವೃದ್ಧಿ ಯೋಜನಾ ಪ್ರಾಧಿಕಾರಗಳು, ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರ ವಲಯ ಅಭಿವೃದ್ಧಿ ಪ್ರಾಧಿಕಾರ, ಕಂದಾಯ ಇಲಾಖೆ, ಅರಣ್ಯ ಇಲಾಖೆಗಳು ತಾವು ಕಠಿಣವಾಗಿ ಜಾರಿಗೊಳಿಸಬೇಕಾದ ಕಾನೂನು ಕ್ರಮವನ್ನು, ಕಾನೂನು ಉಲ್ಲಂಘನೆ ಪ್ರಕರಣಗಳಲ್ಲಿ ಕೈಗೊಳ್ಳದ ಕಾರಣ ಸಾವಿರಾರು ಅನಧಿಕೃತ ಮನೆಗಳು ಹಸಿರು ವಲಯದಲ್ಲಿ ಎದ್ದಿವೆ.

4. ಬೆಂಗಳೂರು ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ನಗರ. ರಾಷ್ಟ್ರದ ವಿವಿಧ ಭಾಗಗಳಿಂದ ಶಿಕ್ಷಣ ಉದ್ದೇಶಕ್ಕಾಗಿ, ಉದ್ಯೋಗಕ್ಕಾಗಿ ಕುಟುಂಬಗಳು ಇಲ್ಲಿಗೆ ವಲಸೆ ಬಂದರೆ ರಾಜ್ಯದ ವಿವಿಧ ಜಿಲ್ಲೆಗಳಿಂದಲೂ

ಉದ್ಯೋಗ ಅರಸುತ್ತಾ ಗ್ರಾಮೀಣ ಜನ ಬೆಂಗಳೂರಿನತ್ತ ಧಾವಿಸುತ್ತಿರುವುದು ಆಘಾತಕಾರಿ ವಿಷಯ. ಎಲ್ಲರಿಗೂ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ನಿವೇಶನ ಸ್ಥಳಾವಕಾಶ ಕಲ್ಪಿಸಲು ಸರ್ಕಾರದಿಂದ ಸಾಧ್ಯವಿಲ್ಲ. ಬೆಂಗಳೂರಿನ ಸುತ್ತಮುತ್ತ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಮೀಪ ಅನೇಕ ಕೈಗಾರಿಕೆಗಳು ಬರುತ್ತಿದ್ದು ಅವುಗಳಲ್ಲಿ ದುಡಿಯುವ ಜನ ಹತ್ತಿರದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಗ್ರಾಮಗಳಲ್ಲಿ ವಾಸಕ್ಕೆ ಹಸಿರು ವಲಯದಲ್ಲಿ ಜಾಗ ಹುಡುಕಿಕೊಳ್ಳುವುದು ಸ್ವಾಭಾವಿಕ. ಆದ್ದರಿಂದಲೇ ಕೃಷಿ ಜಮೀನುಗಳನ್ನು ಅನ್ಯಾಕ್ರಾಂತ ಮಾಡದೆಯೇ ನಿವೇಶನಗಳನ್ನಾಗಿ ವಿಂಗಡಿಸಿ ಪರಭಾರೆ ಮಾಡಲಾಗುತ್ತಿದೆ. ದೊಡ್ಡ ದೊಡ್ಡ ಉದ್ಯಮಿಗಳಿಗೆ ಜಾಗ ಕೊಡುವ ಸರ್ಕಾರ ಆ ಉದ್ದಿಮೆಗಳಲ್ಲಿ ದುಡಿಯಲು ಬರುವವರಿಗೆ ವಸತಿ ಎಲ್ಲಿ ಎಂಬ ಪ್ರಶ್ನೆಯನ್ನು ಬಂಡವಾಳ ತೊಡಗಿಸುವ ಉದ್ಯಮದಾರನನ್ನು ಕೇಳುವುದೂ ಇಲ್ಲ. ಸರ್ಕಾರವೂ ಆ ಬಗ್ಗೆ ಗಮನ ಹರಿಸುವುದೂ ಇಲ್ಲ. ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ತರಾತುರಿಯಲ್ಲಿ ಕೃಷಿ ಜಮೀನಿನಲ್ಲಿ ಬೆಳವಣಿಗೆಯಾಗುವ ವಸತಿ ವಿನ್ಯಾಸಗಳು ಬೇಡಿಕೆ ಆಧಾರಿತ. ಅಲ್ಲಿ ನಿವೇಶನ ಕೊಂಡವರು ತಕ್ಷಣವೇ ತಾತ್ಕಾಲಿಕವಾಗಿ ಮನೆಗಳನ್ನು ಕಟ್ಟಿಕೊಂಡು ವಾಸಿಸಲು ಆರಂಭಿಸುತ್ತಾರೆ. ನಂತರ ಪಕ್ಕಾ ಮನೆ ನಿರ್ಮಾಣಕ್ಕೆ ಕೈ ಹಾಕುತ್ತಾರೆ. ಸ್ವಂತ ಹಣವಿರುವವರು ಪರವಾನಗಿ ಪಡೆಯದೆ ಮನೆಯನ್ನು ಪೂರ್ಣಗೊಳಿಸುತ್ತಾರೆ. ಆದರೆ ಅಂತಹ ನಿವೇಶನದಾರರಿಗೆ ಇ-ಸ್ವತ್ತಿನಲ್ಲಿ ಖಾತೆ ನೀಡಿ ಕಟ್ಟಡ ಪರವಾನಗಿ ನೀಡಲು ಪಂಚಾಯಿತಿಗೆ ಸಾಧ್ಯವಾಗದ ಕಾರಣ ಅಧಿಕೃತವಾಗಿ ಬ್ಯಾಂಕ್ ಸಾಲ ಪಡೆದು ಮನೆ ಕಟ್ಟಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ನಿವೇಶನಗಳನ್ನು ಅವರು ನೋಂದಾಯಿತ ಕ್ರಯ ಪತ್ರದ ಮುಖಾಂತರ ಖರೀದಿಸಿದ್ದರೂ ಅದಕ್ಕೆ ಮಾನ್ಯತೆ ನೀಡದೆ ಅವರ ಹಕ್ಕು ನಿರಾಕರಿಸುತ್ತಿರುವುದು ನಾಗರೀಕ ಕಲ್ಯಾಣ ಹಿತದೃಷ್ಟಿಯ ಬೆಳವಣಿಗೆಯಲ್ಲ. ಬೆಂಗಳೂರು ಸುತ್ತ ಮುತ್ತ ಹೊರಗಿನಿಂದ ಬಂದ ಭೂ-ಮಾಫಿಯಾದವರು ದುಬಾರಿ ಬೆಲೆ ನೀಡಿ ರೈತರಿಂದ ಖರೀದಿಸಿದ ನೂರಾರು ಎಕರೆ ಜಮೀನಿಗೆ ಸಂಬಂಧಿಸಿದಂತೆ ಕ್ಷಿಪ್ರ ಕಾಲದಲ್ಲಿ ಹಸಿರು ವಲಯ ಹಳದಿ ವಲಯವಾಗಿ ಪರಿವರ್ತನೆಯಾಗುತ್ತದೆ, ಕೃಷಿ ಉದ್ದೇಶದಿಂದ ವಸತಿ/ವಾಣಿಜ್ಯ/ಕೈಗಾರಿಕಾ ಉದ್ದೇಶಕ್ಕೆ ಅನ್ಯಾಕ್ರಾಂತ ಆಗುತ್ತದೆ, ನಗರ ಯೋಜನಾ ಪ್ರಾಧಿಕಾರದಿಂದ ವಸತಿ ವಿನ್ಯಾಸ, ಕಟ್ಟಡ ವಿನ್ಯಾಸಗಳೂ ಅನುಮೋದನೆಯಾಗುತ್ತವೆ. ಅಂತಹ ಬೃಹತ್ ವಸತಿ ವಿನ್ಯಾಸಗಳಿಗೆ ಕೋಟೆ ಗೋಡೆಯಂತಹ ಆವಾರ ನಿರ್ಮಿಸಿ ಒಳಗೆ ಗಿಡಮರಗಳನ್ನು ನೆಟ್ಟಿರುತ್ತಾರೆ. ಅವುಗಳಲ್ಲಿ ಒಂದು ಮನೆಯೂ ನಿರ್ಮಾಣವಾಗಿಲ್ಲ. ಅಂತಹ ವಸತಿ ವಿನ್ಯಾಸಗಳು ರಿಯಲ್ ಎಸ್ಟೇಟ್ ಉದ್ದಿಮೆದಾರರ ಲಾಭಕೋರ ಯೋಜನೆಗಳು. ಅಂತಹ ಅನೇಕ ಯೋಜನೆಗಳು ಯಶಸ್ವಿಯಾಗಿ ಅನುಷ್ಠಾನಗೊಂಡಿವೆ. ಆದರೆ ಒಬ್ಬ ರೈತ ತನ್ನ ಮಗಳ ಮದುವೆ ಮಾಡಲು ತನ್ನ ಒಂದು ಎಕರೆ ಜಮೀನಿನಲ್ಲಿ ಅರ್ಧ ಮಾರಾಟ ಮಾಡಬೇಕಾದಾಗ ಅಥವಾ ತನ್ನ ಮಕ್ಕಳಿಗೇ ಜಮೀನನ್ನು ಪಾಲು ಮಾಡಬೇಕಾದಾಗ ಯಾರಿಂದಲೂ ಅನುಮತಿ ದೊರೆಯುವುದಿಲ್ಲ. ಅನ್ಯಾಕ್ರಾಂತ ದೂರದ ಮಾತು, ನೋಂದಣಿ ಸಾಧ್ಯವೇ ಇಲ್ಲ. ಕನಿಷ್ಟ ಹತ್ತು ಎಕರೆ

ವಿಸ್ತೀರ್ಣದ ಜಮೀನಿನಲ್ಲಿ ಮಾತ್ರ ಹಸಿರು ವಲಯದಿಂದ ಹಳದಿ ವಲಯಕ್ಕೆ, ಕೃಷಿ ಉದ್ದೇಶದಿಂದ ಕೃಷಿಯೇತರ ಉದ್ದೇಶಕ್ಕೆ ಪರಿವರ್ತನೆ ಹೊಂದಿ ಅದರಲ್ಲಿ ರಚಿತವಾದ ವಸತಿ ವಿನ್ಯಾಸದ ಅನುಮೋದನೆ ಸಾಧ್ಯ. ಈ ಪರಿವರ್ತನೆಗೆ ಬಹಳ ಬೆಲೆ ತರಬೇಕು. ಅದರಲ್ಲಿ ಭ್ರಷ್ಟಾಚಾರದ ಅಂಶವೂ ಅಡಕವಾಗಿದೆ. ಇದು ಬೆಂಗಳೂರಿನ ಸುತ್ತಮುತ್ತಲೂ ಪ್ರಚಲಿತ ವಾಸ್ತವಾಂಶ. ಮೂಲ ನಿವಾಸಿಗಳಾದ ಸ್ಥಳೀಯ ರೈತರಿಗೆ ಅವರ ಜಮೀನಿನಿಂದಲೇ ಲಾಭ ಬರುವಂತೆ ಸರ್ಕಾರದ ಯಂತ್ರ ಇಷ್ಟು ಬರುತ್ತದೆ. ಹೊರಗಿನ ಸೂಟ್‌ಕೇಸ್ ಕಂಪನಿಗಳಿಗೆ ಹಣ ಮಾಡುತ್ತವೆ. ಇದು ಇಂದಿನ ನಮ್ಮ ಬೆಂಗಳೂರಿನ ಸದ್ಯದ ಪರಿಸ್ಥಿತಿಯ ವಿಪರ್ಯಾಸ.

5. ಈ ಹಿಂದೆ ಭೂ ಕಂದಾಯ ಕಾಯ್ದೆ, 1964 ರಂತೆ ರಾಜ್ಯದ ಕೃಷಿ ಹಾಗೂ ಕೃಷಿಯೇತರ ಜಮೀನುಗಳ ಖಾತೆ ನಿರ್ವಹಣೆಯನ್ನು ಕಂದಾಯ ಇಲಾಖೆಯು ಮಾಡಿಕೊಂಡು ಬರಲಾಗುತ್ತಿತ್ತು ನಂತರ ಗ್ರಾಮ ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದಾಗ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಕೆಲಸವನ್ನು ಗ್ರಾಮ ಲೆಕ್ಕಿಗರು ನಿರ್ವಹಿಸುತ್ತಿದ್ದರು. 1985 ರಲ್ಲಿ ಜಾರಿಗೆ ಬಂದ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳ ಅಧಿನಿಯಮ 1983ರಲ್ಲಿ ಮಂಡಲ ಪಂಚಾಯಿತಿಗಳಿಗೆ ಪ್ರತ್ಯೇಕ ಸಿಬ್ಬಂದಿಯನ್ನು ನಿಯೋಜಿಸಿ ಕರ/ತೆರಿಗೆ ವಸೂಲಿ ಅಧಿಕಾರಗಳನ್ನು ಪ್ರದತ್ತ ಗೊಳಿಸಿ ವಿಕೇಂದ್ರೀಕರಣ ವ್ಯವಸ್ಥೆಗೆ ರಾಜ್ಯ ಸರ್ಕಾರ ದಿಟ್ಟ ಹೆಜ್ಜೆ ಇಟ್ಟಿತ್ತು. ಪಂಚಾಯತ್ ರಾಜ್ ಕಾಯ್ದೆ, 1993 ಜಾರಿಗೆ ಬಂದ ನಂತರ ವಿಕೇಂದ್ರೀಕರಣದ ತತ್ವದ ಆಧಾರದಲ್ಲಿ ಕೃಷಿಯೇತರ ಜಮೀನುಗಳ/ಕಟ್ಟಡಗಳ ದಾಖಲೆಗಳ ನಿರ್ವಹಣೆಯನ್ನು ಮಾತ್ರ ಕಾರ್ಯನಿರ್ವಹಣ/ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ನಮೂನೆಯಂತೆ ಕಾಯ್ದೆಯ ಅನುಸೂಚಿಯ ಲೆಕ್ಕಪತ್ರಗಳ ನಿಯಮದಡಿ ಅವಕಾಶ ಕಲ್ಪಿಸಲಾಗಿದೆ. ವ್ಯವಸಾಯ ಭೂಮಿಯ ಬಗ್ಗೆ ಹಕ್ಕು ಪತ್ರ ದಾಖಲೆ ನಿರ್ವಹಣೆಗೆ ಭೂಕಂದಾಯ ಕಾಯ್ದೆ, 1964 ರ ಕಲಂ 128 ರಲ್ಲಿ ಕಂದಾಯ ಇಲಾಖೆಯ ವಿವಿಧ ಹಂತದ ಪ್ರಾಧಿಕಾರಗಳಿಗೆ ಅಧಿಕಾರ ನಿರ್ದಿಷ್ಟಪಡಿಸಲಾಗಿದೆ. ನೂತನ ತಂತ್ರಜ್ಞಾನ ಬಳಕೆ, ತ್ರಿ-ಆಯಾಮದ ಸೇವೆಗಳ ಬದಲು ಗಣಕೀಕೃತ ಸೇವೆಗಳನ್ನು ವಿತರಿಸುವ ವ್ಯವಸ್ಥೆಯನ್ನು ಕರ್ನಾಟಕ ಸರ್ಕಾರವು ಜಾರಿಗೆ ತಂದಿರುತ್ತದೆ. ಆದರೆ ವ್ಯವಸಾಯೇತರ ಜಮೀನಿನಲ್ಲಿ ನಿರ್ಮಾಣವಾಗುವ ಹಾಗೂ ಇತರ ಕಟ್ಟಡ ಆಸ್ತಿಗಳ ಹಕ್ಕು ದಾಖಲೆ ನಿರ್ವಹಣೆಯ ಬಗ್ಗೆ ಪಂಚಾಯತ್‌ರಾಜ್ ಕಾಯ್ದೆಯ ಯಾವುದೇ ನಿರ್ದಿಷ್ಟ ಕಲಂನಲ್ಲಿ ಗ್ರಾಮ ಪಂಚಾಯಿತಿಗಳಿಗೆ ಅಧಿಕಾರ ನೀಡಿರುವುದು ಕಾನೂನು ಬದ್ಧತೆಯಲ್ಲಿನ ಗೊಂದಲದಾಯಕ ಉಂಟಾಗಿರುತ್ತದೆ. ಅದಕ್ಕೆ ಪರಿಹಾರ ಕಂಡು ಹಿಡಿಯುವುದು ಇಂದಿನ ಅನಿವಾರ್ಯ ಅಗತ್ಯ.

************

# ಭಾಗ-IV

## ತಕ್ಷಣ ಆಗಬೇಕಾದ ಆಡಳಿತಾತ್ಮಕ ಹಾಗೂ ತಾಂತ್ರಿಕ ಸುಧಾರಣೆಗಳು:

- ಈ ಹಿಂದೆ ಎರಡು ಬಾರಿ ಅವಕಾಶ ನೀಡಿದ್ದರೂ ಕೆಲವು ಆಸ್ತಿಗಳನ್ನು ಪಂಚತಂತ್ರದಲ್ಲಿ ತರಲು ಸಾಧ್ಯವಾಗಿಲ್ಲ. ಅಂತಹ

(1) ಎಲ್ಲಾ ಆಸ್ತಿಗಳನ್ನು ಪಂಚತಂತ್ರಕ್ಕೆ ದಾಖಲಿಸಲು ಅಂತಿಮವಾಗಿ ಪೂರ್ವಭಾವಿ ಪ್ರಚಾರದೊಂದಿಗೆ ಮುಂದಿನ ಏಪ್ರಿಲ್, ಮೇ ತಿಂಗಳಲ್ಲಿ 2 ತಿಂಗಳ ಕಾಲಾವಕಾಶ ಕೊಡುವುದು. ಈ ಅವಧಿಯಲ್ಲಿ ಪ್ರತಿನಿತ್ಯ ಸೇರ್ಪಡೆ ಮಾಡುವ ಆಸ್ತಿಗಳನ್ನು ತಾಲ್ಲೂಕಿನ ಸಹಾಯಕ ನಿರ್ದೇಶಕರು ಅಥವಾ ತತ್ಸಮಾನ/ಹಿರಿಯ ದರ್ಜೆಯ ಅಧಿಕಾರಿಗಳು ಮರುದಿನವೇ ಪರಿಶೀಲಿಸುವಂತಾಗಬೇಕು.

(2) ಇ-ಸ್ವತ್ತು ತಂತ್ರಾಂಶದ ಅನುಷ್ಠಾನದಲ್ಲಿ ದತ್ತಾಂಶವನ್ನು ಆರೋಹಿಸಲು ಈ ಹಿಂದೆ ದಿನದ 24 ಗಂಟೆಗಳ ಕಾಲಾವಕಾಶವಿತ್ತು. ಆದರೆ ಬೆಂಗಳೂರು ಸುತ್ತಮುತ್ತಣ ಅಕ್ರಮಗಳಿಗೆ ಕಡಿವಾಣ ಹಾಕಲು ಕಾಲಾವಧಿಯನ್ನು ಕೆಲಸದ ದಿನಗಳ ಬೆಳಿಗ್ಗೆ 10.00 ಗಂಟೆಯಿಂದ ಸಾಯಂಕಾಲ 5:30 ಗಂಟೆಯವರೆಗೆ ಸೀಮಿತಗೊಳಿಸಿದೆ. ಪ್ರತಿ ಪ್ರಕರಣದಲ್ಲಿ ದತ್ತಾಂಶ ಆರೋಹಿಸಲು 15-20 ನಿಮಿಷಗಳ ಕಾಲಾವಕಾಶ ಬೇಕಾದ್ದರಿಂದ ಅವಧಿಯನ್ನು ವಿಸ್ತರಿಸಲು ಬಹಳ ಜಿಲ್ಲೆಗಳಿಂದ ಬೇಡಿಕೆ ಇರುತ್ತದೆ. ಆದಕಾರಣ ದತ್ತಾಂಶವನ್ನು ಆರೋಹಿಸಲು ಹೆಚ್ಚು ಕಾಲಾವಕಾಶ ಲಭ್ಯಗೊಳಿಸಲು ಗಣಕ ವ್ಯವಸ್ಥೆ ಅವಧಿಯನ್ನು ಬೆಳಿಗ್ಗೆ 9.00 ಗಂಟೆಯಿಂದ ಸಾಯಂಕಾಲ 07.30 ಗಂಟೆಯವರೆಗೆ ಮಾತ್ರ ವಿಸ್ತರಿಸಬೇಕು. ಆದರೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ತಮ್ಮ ಅನುಮೋದನೆಯನ್ನು ಕಚೇರಿ ವೇಳೆಯಲ್ಲಿಯೇ ಅಂದರೆ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆ ಅವಧಿಯೊಳಗೆ ನೀಡುವಂತಾಗಬೇಕು.

(3) ಜನಪ್ರತಿನಿಧಿಗಳಿಂದ ಪ್ರಮುಖವಾಗಿ ಬೀದರ್ ಜಿಲ್ಲಾ ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳಿಂದ ನರೇಗಾ ಹಣ ಪಾವತಿಗೆ ಪಂಚಾಯಿತಿ ಅಧ್ಯಕ್ಷರ ಅನುಮೋದನೆ ಪಡೆಯುವಂತೆ ಇ-ಸ್ವತ್ತು ಖಾತೆಗೆ ಅಂತಿಮ ಅನುಮೋದನೆ ನೀಡುವ ಪೂರ್ವದಲ್ಲಿ ಪಂಚಾಯಿತಿ ಅಧ್ಯಕ್ಷರ ಲಾಗಿನ್‌ಗೂ ಪ್ರಸ್ತಾವನೆ ಹೋಗಿ ಸಮ್ಮತಿ ಪಡೆಯಬೇಕೆಂಬ ಒತ್ತಾಯ ಬಂದಿತು. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಅಧ್ಯಕ್ಷರಲ್ಲಿ ಈ ಬಗ್ಗೆ ಬಹುತೇಕ ಜಿಲ್ಲೆಗಳಲ್ಲಿ ಸಹಮತವಿರಲಿಲ್ಲ. ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ವಿಷಯವನ್ನು ಮಂಡಿಸಿ ಅನುಮೋದನೆ ಪಡೆದ

ನಂತರವೇ ಇ-ಸ್ವತ್ತು ಖಾತೆ ದಾಖಲೆ ನೀಡಬೇಕೆಂದು ಮತ್ತೊಮ್ಮೆ ಅಧ್ಯಕ್ಷರ ಅನುಮತಿ ಅನಾವಶ್ಯಕ ಎಂಬುದು ಅಧಿಕಾರಿಗಳ ಅಭಿಮತ. ಆದರೆ ಎಲ್ಲಾ ಪ್ರಕರಣಗಳನ್ನು ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಮಂಡಿಸಿ, ನಿರ್ಣಯ ಕೈಗೊಂಡು ಇ-ಸ್ವತ್ತು ದಾಖಲೆ ನೀಡಲಾಗುತ್ತಿದೆ ಎಂಬುದು ನಿಜವಲ್ಲ. ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಪಂಚಾಯಿತಿ ನಿರ್ಣಯ ಮಾಡದೆಯೇ ಇ-ಸ್ವತ್ತು ಖಾತಾ ಮಾಡಿರುವುದು, ಅದು ಅಧ್ಯಕ್ಷರಿಗೆ ತಿಳಿಯದಿದ್ದುದು ಸಮಿತಿಯ ಗಮನಕ್ಕೆ ಬಂದಿದೆ. ಅಲ್ಲದೇ ಇ-ಸ್ವತ್ತು ಖಾತಾ ಪ್ರಕರಣಗಳನ್ನು ಎಲ್ಲವನ್ನು ಪ್ರತಿ ತಿಂಗಳಿಗೊಮ್ಮೆ ನಡೆಯುವ ಸಾಮಾನ್ಯ ಸಭೆಯಲ್ಲಿ ಮಂಡಿಸಿ ನಿರ್ಣಯ ಕೈಗೊಳ್ಳುವುದಕ್ಕೆ ಸಾಕಷ್ಟು ಕಾಲವ್ಯಯವಾಗಿ, ಸರ್ಕಾರದ ನಿಗದಿತ ಕಾಲಮಿತಿ 45 ದಿನಗಳಲ್ಲಿ ಅರ್ಜಿ ಇತ್ಯರ್ಥ ಸಾಧ್ಯವಾಗದೆ ಪ್ರಕರಣಗಳು ಬಾಕಿ ಉಳಿಯುವ ಸಾಧ್ಯತೆ ಹೆಚ್ಚು. ಸಾಮಾನ್ಯವಾದ ಇ-ಸ್ವತ್ತು ಪ್ರಕರಣಗಳನ್ನು ನಿಯಮಾನುಸಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಪರಿಶೀಲಿಸಿ ಅಧ್ಯಕ್ಷರ ಲಾಗಿನ್‌ಗೆ ಕಳುಹಿಸಿ ಸಹಮತಿ ಪಡೆದು ಅನುಮೋದಿಸಿದ ನಂತರ ಇ-ಖಾತಾ ದಾಖಲೆ ನೀಡಿ ಅನಂತರ ನಡೆಯುವ ಮಾಸಿಕ ಸಾಮಾನ್ಯ ಸಭೆಯಲ್ಲಿ ವಿಷಯವನ್ನು ಮಾಹಿತಿಗಾಗಿ ಮಂಡಿಸಿ ಸಭೆಯ ಗಮನ ಸೆಳೆಯುವುದು ಸೂಕ್ತ. ಗಂಭೀರ, ವಿವಾದಿತ ಪ್ರಕರಣಗಳನ್ನು ಸಾಮಾನ್ಯ ಸಭೆಯಲ್ಲಿಯೇ ನಿರ್ಣಯ ಕೈಗೊಳ್ಳುವುದು ಅನಿವಾರ್ಯ. ಇದರಿಂದ ಸಕಾಲ ಕಾಲಮಿತಿಯಲ್ಲಿ ಬಹುತೇಕ ನಾಗರಿಕರಿಗೆ ಇ-ಸ್ವತ್ತು ದಾಖಲೆ ದೊರಕುವಂತಾಗುತ್ತದೆ. ಆದ್ದರಿಂದ ಇ-ಸ್ವತ್ತು ಪ್ರಕರಣಗಳು ಪಂಚಾಯಿತಿ ಅಧ್ಯಕ್ಷರ ಲಾಗಿನ್‌ಗೂ ಹೋಗಿ ಸಹಮತಿ ಪಡೆಯುವಂತೆ ತಂತ್ರಾಂಶದಲ್ಲಿ ವ್ಯವಸ್ಥೆಯಾಗಬೇಕು. ಆದರೆ ಅಧ್ಯಕ್ಷರು 7 ದಿನಗಳಲ್ಲಿ ಸಹಮತಿ ನೀಡದಿದ್ದರೆ ಪ್ರಕರಣ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಲಾಗಿನ್‌ಗೆ ವಾಪಸ್ಸು ಬಂದು ಅವರು ನಿರ್ಣಯ ಕೈಗೊಳ್ಳುವಂತಾಗಬೇಕು. ತಂತ್ರಾಂಶದಲ್ಲಿ ಈ ಬದಲಾವಣೆ ತರಬೇಕು.

(4) ಬಹಳಷ್ಟು ಪ್ರಕರಣಗಳು ಭೂಮಾಪಕರ ವರದಿಗಾಗಿ ತಡವಾಗುತ್ತಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಭೂಮಾಪಕರು ವರದಿ ಕೊಡುವುದು ಅದು ಗ್ರಾಮಠಾಣಾ ವ್ಯಾಪ್ತಿಯಲ್ಲಿ ಬರುತ್ತದೆಯೇ ಅಥವಾ ಇಲ್ಲವೇ ಎಂದು ಮಾತ್ರ. ಗ್ರಾಮಠಾಣಾ ಪಟ್ಟಿಯು ಗ್ರಾಮಪಂಚಾಯಿತಿಯಲ್ಲಿ ಲಭ್ಯವಿದ್ದಲ್ಲಿ ಪಟ್ಟಿ ಹಾಗೂ ಸ್ಥಳ ಪರಿಶೀಲಿಸಿ ಗ್ರಾಮ ಪಂಚಾಯಿತಿಯೇ ಈ ಬಗ್ಗೆ ನಿರ್ಣಯ ಕೈಗೊಳ್ಳಲು ಸಾಧ್ಯ. ಅದಕ್ಕೆ ವಿಶೇಷ ಭೂಮಾಪಕರ ಅವಶ್ಯಕತೆ ಇಲ್ಲ. ಆದ್ದರಿಂದ ಯಾವ ಇ-ಸ್ವತ್ತು ಖಾತಾ ಪ್ರಕರಣವನ್ನು ಭೂ ಮಾಪಕರಿಗೆ ಕಳುಹಿಸುವ ಪ್ರಮೇಯ ಉದ್ಭವಿಸುವುದಿಲ್ಲ. ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೇ ಸ್ಥಳ ಪರಿಶೀಲಿಸಿ ಅಭಿಪ್ರಾಯ ದಾಖಲಿಸಿದರೆ ಸಾಕು. ಎಲ್ಲಾ ಪ್ರಕರಣಗಳನ್ನು ಭೂ ಮಾಪಕರಿಗೆ ಕಳುಹಿಸುವುದನ್ನು

ನಿರ್ಧರಿಸಬೇಕು. ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕೈಗೊಂಡ ನಿರ್ಣಯದಂತೆ ಅಥವಾ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯ ಠರಾವಿನಂತೆ ಬದಲಾವಣೆಯಾಗಬೇಕು.

(5) ಪ್ರಮುಖವಾಗಿ ಇ-ಸ್ವತ್ತು ಖಾತಾ ದಾಖಲೆ ವಿತರಿಸುವಲ್ಲಿ ಗ್ರಾಮ ಪಂಚಾಯಿತಿ ನಿರ್ಣಯಕ್ಕೆ ಮಾನ್ಯತೆ ದೊರೆಯಬೇಕು. ಯಾವ ದಾಖಲೆ ಇಲ್ಲದೆ ಅನಾದಿಕಾಲದಿಂದ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವ ಪ್ರಕರಣಗಳಲ್ಲಿ, ಹಕ್ಕುಪತ್ರ ಇಲ್ಲದ/ನೀಡದ/ಕಳೆದುಹೋದ ಪ್ರಕರಣಗಳಲ್ಲಿ, ಸರ್ಕಾರದ ವಸತಿ ಯೋಜನೆಗಳಲ್ಲಿ ನಿವೇಶನ, ಮನೆ ಪಡೆದು ವಾಸಿಸುತ್ತಿದ್ದು ಹಕ್ಕು ಪತ್ರ ಕಳೆದುಕೊಂಡ, ಹಕ್ಕು ಪತ್ರ ವಿತರಿಸದೇ ಇರುವ ಪ್ರಕರಣಗಳಲ್ಲಿ ವಾಸ್ತವಾಂಶಗಳನ್ನು ಆಧರಿಸಿ ಆಸ್ತಿಯ ಸ್ಥಳ ಪರಿಶೀಲಿಸಿ ಗ್ರಾಮ ಪಂಚಾಯಿತಿಯು ಕೈಗೊಂಡ ನಿರ್ಣಯವೇ ಅಂತಿಮವಾಗಬೇಕು. ಅದರ ಪ್ರಕಾರವೇ ಖಾತೆ ಬದಲಾವಣೆಯಾಗಬೇಕು. ಈ ಅಂಶ ತಂತ್ರಾಂಶದಲ್ಲಿ ಅಡಕವಾಗುವಂತಹ ಬದಲಾವಣೆಯಾಗಬೇಕು. ಹೇಗಿದ್ದರೂ ಪಂಚಾಯಿತಿ ನಿರ್ಣಯದಿಂದ ತೊಂದರೆಗೊಳಗಾದವರು ಮೇಲ್ಮನವಿ ಸಲ್ಲಿಸಿ ನಿರ್ಣಯವನ್ನು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗಳ ಎದುರು ಪ್ರಶ್ನಿಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಕಲಂ 269 ಅಡಿಯಲ್ಲಿ ಅವಕಾಶ ಇದ್ದೇ ಇದೆ. ಅಲ್ಲದೇ ಪಂಚಾಯಿತಿ ದಾಖಲೆಗಳಲ್ಲಿ ಮಾಡುವ ಹಕ್ಕು ನಮೂದು, ಉಲ್ಲೇಖಗಳು ಆಸ್ತಿ ಹಕ್ಕಿನ ಅಂತಿಮ ನಿರ್ವಿವಾದ ಧೃಢೀಕರಣ ಪ್ರಮಾಣ ಪತ್ರ ಅಲ್ಲ. ಆದ್ದರಿಂದ ಹಕ್ಕು ನಮೂದು ದಾಖಲೆಗಳಲ್ಲಿ ನಮೂನೆ-11, ನಮೂನೆ-11ಬಿ ಇತ್ಯಾದಿ ವರ್ಗೀಕರಣ ಸಲ್ಲದು.

(6) ರಾಜ್ಯದಲ್ಲಿ ದಿನಾಂಕ: 14.06.2013 ರಿಂದ ಇ-ಸ್ವತ್ತು ಜಾರಿಗೆ ಬಂದ ನಂತರ ಗ್ರಾಮ ಪಂಚಾಯಿತಿಗಳು ಗ್ರಾಮ ವ್ಯಾಪ್ತಿಯಲ್ಲಿನ ಎಲ್ಲಾ ಕಟ್ಟಡ/ನಿವೇಶನಗಳಿಗೆ ಖಾತೆ ಮಾಡಿಕೊಡದೇ ತೆರಿಗೆ ವಸೂಲಾತಿ ಸಾಧ್ಯವಿಲ್ಲದಂತಾಗಿದೆ. ಅದೇ ರೀತಿ ಕೃಷಿ ಜಮೀನುಗಳಲ್ಲಿ ಕಟ್ಟಿಕೊಂಡ ಫಾರ್ಮ್‌ಹೌಸ್/ಗೋದಾಮ್/ಮೋಜುದಾಣ/ಕಲ್ಯಾಣ ಮಂಟಪ/ಉಪಹಾರ ಗೃಹ/ತಂಗುದಾಣ ಮುಂತಾದ ಕಟ್ಟಡಗಳಿಗೂ ಸಹ ಕೃಷಿಯೇತರ ಜಮೀನಾಗಿ ಪರಿವರ್ತನೆಗೊಂಡು ಖಾತಾ ಆಗದೇ ತೆರಿಗೆ ವಸೂಲಾತಿ ಸಾಧ್ಯವಿಲ್ಲದಂತಾಗಿದೆ. ವ್ಯಾಪ್ತಿಯಲ್ಲಿನ ಹಲವಾರು ಕಟ್ಟಡಗಳಿಗೆ ಅಗತ್ಯವಿದ್ದ ನೀರು ಪೂರೈಕೆ, ಬೀದಿ ದೀಪ, ಒಳಚರಂಡಿ ವ್ಯವಸ್ಥೆ, ನೈರ್ಮಲ್ಯ ಕಾಪಾಡುವ ವ್ಯವಸ್ಥೆ ಇತ್ಯಾದಿಗಳ ವೆಚ್ಚ ಭರಿಸಿ ಗ್ರಾಮ ಪಂಚಾಯಿತಿಗಳು ಸೌಲಭ್ಯಗಳನ್ನು ಕಲ್ಪಿಸಿದಾಗ್ಯೂ ತೆರಿಗೆ ವಸೂಲಾತಿ ಸಾಧ್ಯವಾಗುತ್ತಿಲ್ಲ. ನಮೂನೆ-11ಎ ಮತ್ತು ನಮೂನೆ-11ಬಿ ಜಾರಿಗೆ ಬಂದ ನಂತರ ಮತ್ತು ಈ ನಮೂನೆಗಳಲ್ಲಿ ಖಾತಾ ನೀಡಲು ಹಲವಾರು ನಿರ್ಬಂಧಗಳನ್ನು ವಿಧಿಸಿದ ಕಾರಣದಿಂದಾಗಿ ಗ್ರಾಮ ಪಂಚಾಯಿತಿಗಳ ಆರ್ಥಿಕ ಸ್ಥಿತಿಯಲ್ಲಿ ಕುಸಿತವಾಗಿರುವುದು ವಾಸ್ತವಾಂಶವಾಗಿದೆ. ಕೆಲವು ಗ್ರಾಮ

ಪಂಚಾಯಿತಿಗಳು ತಮ್ಮ ನಿಧಿಯಿಂದ ಮಾಸಿಕ ಸಂಬಳ ಪಾವತಿಸಲೂ ಸಹ ಪರದಾಡುವಂತಾಗಿದೆ. ಈ ಹಿನ್ನೆಲೆಯಲ್ಲಿ ಹಿಂದೆ ಕರ್ನಾಟಕ ಜಿಲ್ಲಾ ಪರಿಷತ್ತುಗಳ, ತಾಲ್ಲೂಕ ಪಂಚಾಯಿತಿ ಸಮಿತಿಗಳ, ಮಂಡಲ ಪಂಚಾಯಿತಿಗಳ ಮತ್ತು ನ್ಯಾಯ ಪಂಚಾಯಿತಿಗಳ ಅಧಿನಿಯಮ, 1983 ರ ಕಲಂ 116(1) ರಲ್ಲಿ (ಅನುಬಂಧ-ಎ) ಸ್ಪಷ್ಟವಾಗಿದ್ದ ಕೃಷಿ ಅಥವಾ ಕೃಷಿಯೇತರ ಜಮೀನುಗಳಲ್ಲಿ ನಿರ್ಮಿಸಿದ ಕಟ್ಟಡಗಳಿಗೆ ಯಾವುದೇ ತಾರತಮ್ಯವಿಲ್ಲದೆ ತೆರಿಗೆ/ಕರ ವಿಧಿಸಲು ಪಂಚಾಯಿತಿಗೆ ದತ್ತವಾಗಿದ್ದ ಅಧಿಕಾರವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಕಲಂ 199(1) ರಲ್ಲಿಯೂ (ಅನುಬಂಧ-ಬಿ) ಪ್ರಾಪ್ತ ಮಾಡುವ ನಿಬಂಧನೆ ಅಳವಡಿಸುವುದು ಸೂಕ್ತವೆಂದು ಅಭಿಪ್ರಾಯ ಪಡಲಾಗಿದೆ. ಈ ಕ್ರಮದಿಂದಾಗಿ ರಾಜ್ಯದಲ್ಲಿನ ಗ್ರಾಮ ಪಂಚಾಯಿತಿಗಳ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆಯಾಗಿ ಸಶಕ್ತಗೊಳ್ಳಲು ಸಹಕಾರಿಯಾಗುವುದು.

************

# ಭಾಗ-V

## ಈ ಸಮಸ್ಯೆಗಳಿಗೆ ಅಂತಿಮವಾದ ದೀರ್ಘಕಾಲದ ಪರಿಹಾರ ಮಾರ್ಗಗಳು :

- ಗ್ರಾಮ ಪಂಚಾಯಿತಿಗಳಿಗೆ ಆದಾಯದ ಮೂಲವಾದ ಮತ್ತು ಅನೇಕ ಸರ್ಕಾರಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ, ಫಲಾನುಭವಿಗಳ ಆಯ್ಕೆಗೆ ಆಧಾರವಾದ ಗ್ರಾಮಠಾಣಾ ವ್ಯಾಪ್ತಿಯ ಹಾಗೂ ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿತವಾದ ಕೃಷಿ ಜಮೀನುಗಳಲ್ಲಿ ನಿರ್ಮಾಣವಾಗುವ ಆಸ್ತಿಗಳ ಮಾಲೀಕತ್ವ/ಅನುಭೋಗದಾರಿಕೆಯ ವಾಸ್ತವ ಪರಿಸ್ಥಿತಿಯನ್ನು ಪ್ರತಿಫಲಿಸುವಂತೆ ದಾಖಲೆಗಳ ನಿರ್ವಹಣೆ ಮಾಡುವ ಜವಾಬ್ದಾರಿ, ಅಂತಹ ಆಸ್ತಿಗಳ ಗಡಿಗುರುತು ವಿಸ್ತೀರ್ಣದ, ಅನುಭೋಗದಾರಿಕೆಯ ಬಗ್ಗೆ ಉದ್ಭವವಾಗುವ ಸಣ್ಣ ವಿವಾದ/ವ್ಯಾಜ್ಯಗಳನ್ನು ಸ್ಥಳೀಯವಾಗಿ ಇತ್ಯರ್ಥಪಡಿಸುವ ಅಧಿಕಾರವನ್ನು ಗ್ರಾಮ ಪಂಚಾಯಿತಿಗಳಿಗೆ ಗ್ರಾಮ ಸ್ವರಾಜ್ಯ ಕಾಯಿದೆಯ ಕಲಂ 199 ಅಡಿಯಲ್ಲಿ ಸೇರ್ಪಡೆ ಮಾಡಿ ಪ್ರಾಪ್ತಗೊಳಿಸಬೇಕು (ಅನುಬಂಧ-೫). ನಂತರ ಈ ಜವಾಬ್ದಾರಿಯ ನಿರ್ವಹಣೆಗಾಗಿ ನಿಯಮಗಳನ್ನು ರಚಿಸಿ ಪ್ರಕಟಿಸಬೇಕು.

- ಗ್ರಾಮೀಣ ಸೊಗಡನ್ನು ಕಳೆದುಕೊಂಡು ವೇಗವಾಗಿ ನಗರೀಕರಣಗೊಳ್ಳುತ್ತಿರುವ, ಪಂಚಾಯತ್ ರಾಜ್ ಕಾಯಿದೆಯ ಜನಸಂಖ್ಯೆ ಮಿತಿ ಮೀರಿದ ಪಂಚಾಯಿತಿಗಳನ್ನು ಹತ್ತಿರದ ನಗರ/ ಪಟ್ಟಣ ಸ್ಥಳೀಯ ಸಂಸ್ಥೆಯ ವ್ಯಾಪ್ತಿಗೆ ವಿಲೀನಗೊಳಿಸುವ ಅಥವಾ ಸ್ವತಂತ್ರ ಪಟ್ಟಣ/ನಗರ ಸ್ಥಳೀಯ ಸಂಸ್ಥೆಗಳನ್ನಾಗಿ ಘೋಷಿಸುವ ಕೆಲಸ ಮೊದಲು ಆಗಬೇಕು. ಆಗ ನಗರ/ಪಟ್ಟಣ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳ ಹಕ್ಕು ದಾಖಲೆಗಳ ನಿರ್ವಹಣೆಯನ್ನು ಸಂಬಂಧಿಸಿದ ನಗರ/ಪಟ್ಟಣ ಸ್ಥಳೀಯ ಸಂಸ್ಥೆಗೆ ಅನ್ವಯವಾಗುವ ಕಾನೂನು ಅಡಿಯಲ್ಲಿ ಪಟ್ಟಣ ಭೂಮಾಪಕರ ನೆರವಿನಿಂದ ಸ್ಥಳೀಯ ಸಂಸ್ಥೆ ಸಿಬ್ಬಂದಿ ಮುಖಾಂತರ ಮಾಡುವಂತಾಗುವುದು. ಈ ಪ್ರಕ್ರಿಯೆಗೆ ಪಂಚಾಯತ್ ರಾಜ್ ಇಲಾಖೆ ಹಾಗೂ ಪೌರಾಡಳಿತ ಇಲಾಖೆಗಳು ಕೂಡಲೇ ಕೈಜೋಡಿಸುವ ಅಗತ್ಯವಿದೆ.

- ಬೃಹತ್ ನೀರಾವರಿ, ವಿದ್ಯುತ್ ಯೋಜನೆಗಳ ಅನುಷ್ಠಾನದಿಂದ ಸ್ಥಳಾಂತರಗೊಂಡ ಜನರ ಪುನರ್ವಸತಿ ಕೇಂದ್ರಗಳು, ಅನಾದಿ ಕಾಲದಿಂದ ಇರುವ ಲಂಬಾಣಿ ತಾಂಡಾ, ನಾಯಕರ ಹಟ್ಟಿ, ಗೊಲ್ಲರ ದೊಡ್ಡಿಗಳನ್ನು, ತುಂಗಭದ್ರಾ ಯೋಜನೆಯ ಅಚ್ಚುಕಟ್ಟು ಪ್ರದೇಶದಲ್ಲಿ ನಿರ್ಮಾಣಗೊಂಡಿರುವ ಕ್ಯಾಂಪ್‌ಗಳನ್ನು ಸ್ವತಂತ್ರ ಗ್ರಾಮಗಳನ್ನಾಗಿ ಘೋಷಿಸಿ ಈವರೆಗೆ ಆಗಿರುವ ಅಭಿವೃದ್ಧಿಯ ಕ್ಷೇತ್ರವನ್ನು ಪರಿಗಣಿಸಿ ಗ್ರಾಮದ ಗಡಿ ನಿಗದಿಪಡಿಸಿ ಗ್ರಾಮಠಾಣಾ ನಕ್ಷೆ ತಯಾರಿಸಿ, ರಾಜ್ಯ ಸರ್ಕಾರದ ಕಂದಾಯ ಇಲಾಖೆಯ ಮುಖಾಂತರ ಪ್ರಕಟಿಸುವ ಕ್ರಮ ಕೂಡಲೇ ಆಗಬೇಕು. ನಂತರ

ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ಗ್ರಾಮಠಾಣಾ ನಕ್ಷೆಗಳನ್ನು ಒದಗಿಸುವ ವ್ಯವಸ್ಥೆಯಾಗಬೇಕು. ಈ ಪ್ರಕ್ರಿಯೆ ಕಂದಾಯ ಇಲಾಖೆಯಲ್ಲಿ ಕೆಲಸದಲ್ಲಿದ್ದುಳ್ಳ ಇದರ ವೇಗವನ್ನು ಹೆಚ್ಚಿಸಿಕೊಳ್ಳುವ ಅವಶ್ಯಕತೆಯಿದೆ.

- 1930ರಲ್ಲಿ ಗ್ರಾಮಠಾಣಾಗಳನ್ನು ಅಳತೆ ಮಾಡಿ ನಕ್ಷೆಗಳನ್ನು ತಯಾರಿಸಲಾಗಿದ್ದು, ನಂತರದ ಕಾಲದಲ್ಲಿ ಜನಸಂಖ್ಯೆ ಹೆಚ್ಚಳ, ಅಭಿವೃದ್ಧಿ ಕಾರ್ಯಗಳ ಅನುಷ್ಠಾನ ಇತ್ಯಾದಿ ಕಾರಣಗಳಿಂದ ಕಟ್ಟಡಗಳು ಹಿಂದಿನ ಗ್ರಾಮಠಾಣಾ ವ್ಯಾಪ್ತಿಯ ಜೊತೆಗೆ ಅನ್ಯಾಕ್ರಾಂತವಾಗಿರುವ/ ಅನ್ಯಾಕ್ರಾಂತವಾಗದ ಕೃಷಿ ಜಮೀನುಗಳಲ್ಲಿ ನಿರ್ಮಾಣಗೊಂಡಿದ್ದು ಜನರು ವಾಸ ಮಾಡುತ್ತಿದ್ದು, ಕೈಗಾರಿಕೋದ್ಯಮ, ಶಾಲಾ ಕಾಲೇಜು, ಮಳಿಗೆ, ಸಂಸ್ಥೆಗಳು ಇವೆ ಎತ್ತಿದ್ದು ಅವುಗಳನ್ನು ಒಳಗೊಂಡಂತೆ ಇತ್ತೀಚಿನವರೆಗೆ ಆಗಿರುವ ಬದಲಾವಣೆಯ ವಾಸ್ತವಾಂಶಗಳನ್ನು ಬಿಂಬಿಸುವಂತೆ ಗ್ರಾಮಠಾಣಾ ವ್ಯಾಪ್ತಿಯನ್ನು ವಿಸ್ತರಿಸಿ, ನವೀನ ಗ್ರಾಮಠಾಣಾ ನಕ್ಷೆಗಳನ್ನು ತಯಾರಿಸಿ, ಪ್ರಕಟಿಸಿ, ಪಂಚಾಯಿತಿಗಳಿಗೆ ವಿತರಿಸುವ ವ್ಯವಸ್ಥೆ ಮಾಡಬೇಕಾಗಿದೆ.. ಸರ್ಕಾರದಿಂದ ಈ ಬಗ್ಗೆ ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಗಳ ಜಂಟಿ ಸುತ್ತೋಲೆಯನ್ನು (ಅನುಬಂಧ-೧೮)ಹೊರಡಿಸಿ ಒಂದು ವರ್ಷವಾಗಿದ್ದರೂ ಕ್ಷೇತ್ರಮಟ್ಟದಲ್ಲಿ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲದಿರುವುದು ಆಘಾತಕರ. ಇನ್ನಾದರೂ ತಡ ಮಾಡದೇ ಈ ಕಾರ್ಯವನ್ನು ಆದ್ಯತೆ ಮೇರೆಗೆ ಕೈಗೆತ್ತಿಕೊಳ್ಳಬೇಕು. ವಿಸ್ತೃತ ಗ್ರಾಮಠಾಣಾ ವ್ಯಾಪ್ತಿಯನ್ನು ಘೋಷಿಸಿ ವಲಯವೆಂದು ಪರಿಗಣಿಸಬೇಕು. ಈ ಪ್ರಕ್ರಿಯೆಗೆ ಎರಡೂ ಇಲಾಖೆಗಳೂ ಕ್ಷೇತ್ರಮಟ್ಟದಲ್ಲಿ ಸಮನ್ವಯ ಸಾಧಿಸಿ ಸಮಯೋಚಿತವಾಗಿಯಲ್ಲಿ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರ ಕಾಲಾವಧಿಯನ್ನು ನಿಗದಿಪಡಿಸಿ ಪ್ರಕಟಿಸಬೇಕು.

- ಗ್ರಾಮಠಾಣಾ ವಿಸ್ತರಣೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಗ್ರಾಮಠಾಣಾ ವ್ಯಾಪ್ತಿಯಲ್ಲಿನ ಆಸ್ತಿಗಳನ್ನು ಅಳತೆಮಾಡಿ ಪ್ರತಿ ಆಸ್ತಿಗೆ ಬೆಂಗಳೂರು ನಗರದಲ್ಲಿರುವಂತೆ (PIN) ಆಸ್ತಿ ಗುರುತಿನ ಕ್ರಮಸಂಖ್ಯೆಯನ್ನು ನೀಡಬೇಕು. ಅಳತೆಯನ್ನು ವೇಗವಾಗಿ ಮಾಡುವ ತಂತ್ರಜ್ಞಾನವನ್ನು ಅಳವಡಿಸಿಕೊಂಡು ನಿರ್ದಿಷ್ಟ ಕಾಲಮಿತಿಯಲ್ಲಿ ಈ ಕಾರ್ಯವನ್ನು ಸಮಯೋಚಿತವಾಗಿಯಲ್ಲಿ ಕೈಗೊಂಡು ಮುಗಿಸಬೇಕು. GPS/GIS/Satellite/Imagery/Remote Sensing ಇತ್ಯಾದಿ ಆಧುನಿಕ ತಂತ್ರಜ್ಞಾನವನ್ನು ಈ ಕಾರ್ಯದಲ್ಲಿ ವ್ಯಾಪಕವಾಗಿ ಬಳಸಿಕೊಳ್ಳಬೇಕು. ಇದಕ್ಕೆ ತಗಲುವ ವೆಚ್ಚ ಒಂದೇ ಬಾರಿಗೆ ಅತಿ ಹೆಚ್ಚು ಎಂದೆನಿಸಬಹುದು. ಆದರೆ ಗ್ರಾಮ ಪಂಚಾಯಿತಿಗಳ ಸಮರ್ಪಕ ನಿರ್ವಹಣೆ ದೀರ್ಘಾವಧಿಯಿಂದ ಗ್ರಾಮ ಪಂಚಾಯಿತಿಗಳ ಆರ್ಥಿಕ ಸದೃಢತೆ ಸಾಧಿಸಲು ಅವಶ್ಯಕ ದೂರ ದೃಷ್ಟಿಯಿಂದ ಯಾವ ವೆಚ್ಚವೂ ಅಧಿಕವಲ್ಲ.

- ಅಂತಹ ಆಸ್ತಿಗಳೆಲ್ಲವನ್ನು ಯಾರಿಂದಲೂ ಅರ್ಜಿ ಪಡೆಯದೇ ಇ-ಸ್ವತ್ತಿನಲ್ಲಿ ಹಾಗೂ ಪಂಚತಂತ್ರದಲ್ಲಿ ಕಡ್ಡಾಯವಾಗಿ ಉಲ್ಲೇಖಿಸಬೇಕು. ಪ್ರತಿವರ್ಷ ಕರ ಬೇಡಿಕೆ ನೋಟೀಸು ತಾನೇ ತಾನಾಗಿ ಉತ್ಪನ್ನವಾಗುವಂತೆ ತಂತ್ರಾಂಶವನ್ನು ಅಳವಡಿಸಿಕೊಳ್ಳಬೇಕು. ಪಂಚತಂತ್ರ-ಇ-ಸ್ವತ್ತು ದತ್ತಾಂಶ ಪರಸ್ಪರ ಪೂರಕವಾಗಬೇಕು. ಈ ದತ್ತಾಂಶದ ಆಧಾರದ ಮೇಲೆ ಬೇಡಿಕೆ, ವಸೂಲಿ, ಆಸ್ತಿ ವಹಿಗಳನ್ನು ಹಸ್ತ ಬರಹದಲ್ಲಿ ನಿರ್ವಹಿಸಬೇಕು.

- ಈ ಪ್ರಕ್ರಿಯೆಗಳು ಮುಗಿದ ನಂತರ ಸೃಷ್ಟಿಯಾಗುವ ಆಸ್ತಿಗಳ ಮಾಲೀಕರು, ಹಕ್ಕು/ಕ್ರಯ ಪಡೆದವರು ಗ್ರಾಮ ಪಂಚಾಯಿತಿಗೆ ಇ-ಸ್ವತ್ತು ಖಾತಾ ಕೋರಿ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು 'ಸಕಾಲ' ಅಡಿಯಲ್ಲಿ ಸಲ್ಲಿಸಲು ಅವಕಾಶ ಕಲ್ಪಿಸಿ, ಬಂದ ಅರ್ಜಿಗಳಿಗೆ ಕೂಡಲೇ ಸ್ವೀಕೃತಿ ನೀಡಿ ಕಾಲಮಿತಿಯೊಳಗೆ ಇತ್ಯರ್ಥಪಡಿಸಿ ಪಕ್ಕಾ ದಾಖಲೆ ವಿತರಿಸಲು ಸಾಧ್ಯವಾಗುವಂತೆ ತಂತ್ರಾಂಶವನ್ನು ಅಳವಡಿಸಬೇಕು. ಆ ಬಗ್ಗೆ ಸ್ಪಷ್ಟ ನಿಯಮಗಳನ್ನು ರಚಿಸಿ ಪ್ರಕಟಿಸಬೇಕು.

- ಹಕ್ಕು ದಾಖಲಿಸಲು, ಖಾತಾ ಬದಲಾವಣೆ, ಕರ ಆಕರಣೆ ವಿಷಯಗಳಲ್ಲಿ ಪಂಚಾಯಿತಿ ಸಾಮಾನ್ಯ ಸಭೆಯ ನಿರ್ಣಯವೇ ಅಂತಿಮವಾಗಬೇಕು. ಅದರನ್ವಯವೇ ಖಾತೆ ದಾಖಲಾಗುವಂತೆ ತಂತ್ರಾಂಶದಲ್ಲಿ 'ಆಯ್ಕೆ' ಪ್ರತಿ ಸಂದರ್ಭದಲ್ಲಿಯೂ ಇರಬೇಕು. ಅದಕ್ಕೆ ಪೂರಕವಾಗಿ ಈ ವರೆಗೆ ಸರ್ಕಾರ ಹೊರಡಿಸಿರುವ ಸುತ್ತೋಲೆಗಳ ಸಮಗ್ರ ನಿರ್ದೇಶನಗಳನ್ನು ಪರಿಷ್ಕರಿಸಿ, ಕ್ರೋಢೀಕರಿಸಿ ಇ-ಸ್ವತ್ತು ಕೈಪಿಡಿಯನ್ನು ಪ್ರಕಟಿಸಬೇಕು.

ಅಂತಿಮವಾಗಿ ಪರಾಮರ್ಶೆಗೆ ವಹಿಸಿರುವ ಮುಖ್ಯ ಮೂರು ಅಂಶಗಳ ಬಗ್ಗೆ ಈ ಸಮಿತಿಯು ನಿರ್ದಿಷ್ಟವಾದ ಮಾರ್ಗೋಪಾಯಗಳನ್ನು ಶಿಫಾರಸ್ಸು ಮಾಡಬೇಕಾಗಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸರ್ಕಾರದ ಸೂಚನೆಗಳನ್ನು ಉಲ್ಲಂಘಿಸಿ ಅನ್ಯಕ್ರಾಂತವಾಗದ ಕೃಷಿ ಜಮೀನುಗಳಲ್ಲಿ ನಗರ ಯೋಜನಾ ಪ್ರಾಧಿಕಾರದ ಅನುಮೋದನೆ ಪಡೆಯದೆ ರಚಿಸಿದ ವಸತಿ ವಿನ್ಯಾಸಗಳಲ್ಲಿ ನಿವೇಶನಗಳನ್ನು ಕ್ರಯಕ್ಕೆ ಪಡೆದವರ ಹೆಸರಿಗೆ ಮಾಡಿರುವ 11ಬಿ ಖಾತೆಗಳನ್ನು ವೈಯಕ್ತಿಕ ಹಿತಾಸಕ್ತರಿಗೆ ಯಾವುದೇ ಪೂರ್ವಭಾವಿ ತಿಳುವಳಿಕೆ ನೀಡಿ ಅವರ ಅಹವಾಲನ್ನು ಆಲಿಸದೆ ಏಕಪಕ್ಷೀಯವಾಗಿ ಪೂರ್ತಿ ರದ್ದು ಮಾಡಿರುವುದು ಕಂಡು ಬಂದಿದೆ. ಅಂತಹ ಸ್ವಾಭಾವಿಕ ನ್ಯಾಯ ನಿಯಮದ ವಿರುದ್ಧವಾದ ಆದೇಶಗಳನ್ನು ಊರ್ಜಿತದಲ್ಲಿಡಲಾಗದು. ಅವುಗಳನ್ನು ರದ್ದು ಗೊಳಿಸಿ ಖಾತೆಗಳನ್ನು ಮರುಕಳಿಸುವುದು ಅನಿವಾರ್ಯ. ಬೆಂಗಳೂರು ನಗರ ಜಿಲ್ಲೆಯ ಉಳಿದ ಪಂಚಾಯಿತಿಗಳಲ್ಲಿ ಈ ಪ್ರಕ್ರಿಯೆಗೆ ಚಾಲನೆ ನೀಡಿದ್ದರೂ ಪೂರ್ಣವಾಗಿ ಅಂತಹ ಖಾತೆಗಳನ್ನು ರದ್ದು ಪಡಿಸಿಲ್ಲ. ಎರಡೂ ತರಹದ ಈ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಗ್ರಾಮಗಳಲ್ಲಿ ಹಸಿರು ಪಟ್ಟಿ

ಪ್ರದೇಶದಲ್ಲಿಯೇ ನಿವೇಶನಗಳ ಬೇಡಿಕೆಯಾಗಿದ್ದು ಕೆಲವರು ಮನೆಗಳನ್ನು ಕಟ್ಟುತ್ತಾರೆ. ಬ್ಯಾಂಕ್ ಸಾಲ ಪಡೆದು ಮನೆ ನಿರ್ಮಿಸಲು ಕೆಲವರು ಪಂಚಾಯಿತಿಯ ಅನುಮತಿಗಾಗಿ ಕಾಯುತ್ತಿದ್ದಾರೆ. ಈ ಗ್ರಾಮಗಳ ಗ್ರಾಮಠಾಣಾ ವ್ಯಾಪ್ತಿ ಪಡಸಾಲೆದ ಒಂದೆ ನಿಗದಿಯಾಗಿದ್ದು ಅನಂತರದ ಬೆಳವಣಿಗೆಯನ್ನು ಬೆಂಗಳೂರು ನಗರ ಹೊರವಲಯದಲ್ಲಿ ಹಸಿರು ಪಟ್ಟಿ ಘೋಷಣೆ ಮಾಡುವಾಗ ಪರಿಗಣಿಸಲಾಗಿಲ್ಲದಿರುವುದು ಸತ್ಯಾಂಶ. ಬೃಹತ್ ಮಹಾನಗರದ ಗಡಿ, ವಿಸ್ತರಿಸಿರುವುದರ ಬೆಳವಣಿಗೆಗಿಂತ ಅವರ ಸುತ್ತ ಕೆಲಸಗಳ/ಪಟ್ಟಣಗಳನ್ನು ಅಭಿವೃದ್ಧಿ ಪಡಿಸಿ ಸಂಪರ್ಕ ವ್ಯವಸ್ಥೆ ಸುಗಮಗೊಳಿಸುವುದು ನಗರ ನಿವಾಸಿಗಳ ಹಿತದೃಷ್ಟಿಯಿಂದ, ಹಾಗೆಯೇ, ಜನಸಂದಣಿ ನಿಯಂತ್ರಿಸಲು ಸಹಕಾರಿಯಾಗುವುದರಲ್ಲಿ ಅನುಮಾನವು ಸಂದೇಹವಿಲ್ಲ.

ಈ ಹಿನ್ನೆಲೆಯಲ್ಲಿ

(1) ಬಾಗಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬಾಗಲೂರು ಕಂದಾಯ ಗ್ರಾಮವೊಂದೇ ಬರುತ್ತಿದ್ದು, ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಈ ಗ್ರಾಮ ಒಳಪಟ್ಟಿದ್ದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಗಡಿಗೆ ಹೊಂದಿಕೊಂಡಿದ್ದು, ಜನಸಂಖ್ಯೆ, ಜನವಸತಿ ವೇಗವಾಗಿ ಬೆಳೆಯುತ್ತಿರುವ ಕೃಷಿ ಜಮೀನು ಕ್ಷೀಣಿಸುತ್ತಿರುವ ಕಾರಣ ಈ ಗ್ರಾಮ ಪಂಚಾಯಿತಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿಸುವುದು ಸೂಕ್ತ. ಹಾಗೆ ಮಾಡುವಾಗ ಈವರೆಗೆ ಗ್ರಾಮದ ಸುತ್ತ ಆಗಿರುವ ವಸತಿ, ಕೈಗಾರಿಕಾ ಉದ್ದೇಶದ ಅಭಿವೃದ್ಧಿಯನ್ನು, ಬರಗಾಲಿ ಅಭಿವೃದ್ಧಿಯಾಗಿರುವ ಪ್ರದೇಶವನ್ನು ಹಸಿರು ವಲಯದಿಂದ ಕೈಬಿಟ್ಟು ವಸತಿ ವಲಯವನ್ನಾಗಿ ಪರಿವರ್ತಿಸಬೇಕು. ನಂತರ ಅನಧಿಕೃತ ನಿವೇಶನ/ಕಟ್ಟಡದಾರರಿಂದ ಅನ್ಯಕ್ರಾಂತ ಶುಲ್ಕ, ಅಭಿವೃದ್ಧಿ ಶುಲ್ಕ, ದಂಡ ಇತ್ಯಾದಿ ವಸೂಲು ಮಾಡಿ ಅವುಗಳನ್ನು ಸಕ್ರಮಗೊಳಿಸುವ ಬಗ್ಗೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನ್ವಯವಾಗುವ ಕಾಯಿದೆ, ನಿಯಮಗಳಡಿಯಲ್ಲಿ ಕ್ರಮ ಕೈಗೊಳ್ಳುವುದು ಸೂಕ್ತ.

(2) ಹೆಸರಘಟ್ಟ ಗ್ರಾಮ ಪಂಚಾಯಿತಿಯನ್ನು ಸ್ವತಂತ್ರ ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಿ, ಅದರ ವ್ಯಾಪ್ತಿಯೊಳಗಿನ ಗ್ರಾಮಗಳ ಸುತ್ತ ಈಗಾಗಲೇ ಅಭಿವೃದ್ಧಿಯಾಗಿರುವ ವಸತಿ ಪ್ರದೇಶಗಳನ್ನು ಹಸಿರು ವಲಯದಿಂದ ಕೈಬಿಟ್ಟು ವಸತಿ ವಲಯವನ್ನಾಗಿ ಪರಿವರ್ತಿಸಿ ಪುರಸಭೆಯ ಗಡಿ ನಿರ್ಧರಿಸುವುದು. ನಂತರ ಪುರಸಭೆ ವ್ಯಾಪ್ತಿಯ ನಿವೇಶನ, ಕಟ್ಟಡಗಳ ಬಗ್ಗೆ ಕರ್ನಾಟಕ ಪುರಸಭೆಗಳ ಕಾಯಿದೆ ಅನ್ವಯ ಕ್ರಮ ಜರುಗಿಸುವುದು. ಅನಧಿಕೃತವೆಂದು ಈ ವರೆಗೆ ಘೋಷಿಸಲಾದ ಕಟ್ಟಡಗಳನ್ನು/ನಿವೇಶನಗಳನ್ನು, ಅನ್ಯಕ್ರಾಂತ ಶುಲ್ಕ, ಅಭಿವೃದ್ಧಿ ಶುಲ್ಕ, ದಂಡ ವಿಧಿಸಿ ಸಕ್ರಮಗೊಳಿಸಬಹುದು.

(3) ಅರಕೆರೆ, ಹುರಳಿಚಿಕ್ಕನಹಳ್ಳಿ, ಮಾರೇನಹಳ್ಳಿ ಈ ಮೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿನ ಗ್ರಾಮಗಳಲ್ಲಿ 01.01.2018 ರವರೆಗೆ ಆಗಿರುವ ಬೆಳವಣಿಗೆ/ ಅಭಿವೃದ್ಧಿಯನ್ನು ಪರಿಗಣಿಸಿ ಗ್ರಾಮಠಾಣಾ ವ್ಯಾಪ್ತಿಯನ್ನು ವಿಸ್ತರಿಸಿ ಅದಕ್ಕೆ ಹೊರಗಿನ ಕೃಷಿ ಜಮೀನುಗಳನ್ನು ಹಸಿರು ವಲಯವನ್ನಾಗಿ ಘೋಷಿಸುವುದು ಸದ್ಯ ಸಮಸ್ಯೆಗೆ ಕಂಡು ಬರುವ ಏಕೈಕ ಪರಿಹಾರ ಕ್ರಮ. ಇದರಿಂದ ಗ್ರಾಮಠಾಣಾ ವ್ಯಾಪ್ತಿಯ ನಿವೇಶನ/ಕಟ್ಟಡಗಳನ್ನು ನಿವೇಶನದಾರರಿಂದ ಗ್ರಾಮಪಂಚಾಯಿತಿಗೆ ಬರಬೇಕಾದ ಅಭಿವೃದ್ಧಿ ಶುಲ್ಕ, ಕಂದಾಯ ಇಲಾಖೆಗೆ ಸಂದಾಯವಾಗಬೇಕಾಗಿದ್ದ ಅನ್ಯಾಕ್ರಾಂತ ಶುಲ್ಕವನ್ನು ವಸೂಲು ಮಾಡುವ ಷರತ್ತಿಗೊಳಪಟ್ಟು ಕ್ರಮಬದ್ಧಗೊಳಿಸಿ ಒಂದು ಬಾರಿಗೆ ಮಾತ್ರ ಸಕ್ರಮಗೊಳಿಸಬಹುದು.

ಎರಡನೆಯದಾಗಿ, ಬೆಂಗಳೂರು ಮಹಾನಗರದ ಸುತ್ತಮುತ್ತಲಿನ ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ, ಮೈಸೂರು ಈ ನಾಲ್ಕು ಜಿಲ್ಲೆಗಳ ಬೆಂಗಳೂರು, ಮೈಸೂರು ನಗರಗಳ ಹೊರವಲಯದ ಗ್ರಾಮ ಪಂಚಾಯಿತಿಗಳಲ್ಲಿ ಮಾತ್ರ ನಮೂನೆ-11ಬಿ ಖಾತೆಗಳನ್ನು ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ ವಿತರಣೆ ಮಾಡಿರುವುದು ಕಂಡು ಬರುತ್ತದೆ. ಈ ಬಗ್ಗೆ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಮೈಸೂರು ನಗರ ಪಾಲಿಕೆ ಹೊರವಲಯಗಳಲ್ಲಿನ ಪಂಚಾಯಿತಿಗಳಲ್ಲಿ ಇ-ಸ್ವತ್ತು ನಮೂನೆ-11ಬಿ ಅನಧಿಕೃತವಾಗಿ ಅನುಮೋದಿಸಿ ವಿತರಿಸಿರುವ ಬಗ್ಗೆ ವಿಚಾರಣೆ ಮಾಡಲು ಇಬ್ಬರು ಪ್ರತ್ಯೇಕ ವಿಚಾರಣಾಧಿಕಾರಿಗಳನ್ನು ನೇಮಿಸಿ ಇದಕ್ಕೆ ಜವಾಬ್ದಾರರಾದ ಅಧಿಕಾರಿ, ಸಿಬ್ಬಂದಿಗಳನ್ನು ಪತ್ತೆ ಮಾಡಿ ಅವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳುವುದಲ್ಲದೆ ಖಾತಾ ವಿತರಣೆಯಿಂದ ಸರ್ಕಾರಕ್ಕೆ, ನಗರ ಪಾಲಿಕೆಗೆ, ಗ್ರಾಮ ಪಂಚಾಯಿತಿಗಳಿಗೆ ಆಗಿರುವ ಆರ್ಥಿಕ ನಷ್ಟವನ್ನು ಖಾತೆ ಪಡೆದ ಆಸ್ತಿಗಳ ಕ್ರಯದಾರರಿಂದ ವಸೂಲು ಮಾಡಲು ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಿದೆ. ಈ ಜಿಲ್ಲೆಗಳನ್ನು ಹೊರತುಪಡಿಸಿದರೆ ರಾಜ್ಯದ ಉಳಿದ ಜಿಲ್ಲೆಗಳ ಗ್ರಾಮೀಣ ಭಾಗದಲ್ಲಿ ಅಂತಹ ಅಕ್ರಮಗಳು ಹೆಚ್ಚಾಗಿ ಕಂಡುಬರುವುದಿಲ್ಲ. ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ನಮೂನೆ-11ಬಿ ಅಕ್ರಮಗಳ ದಾಖಲೆಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ಈ ಸಮಿತಿಗೆ ನೀಡಿರುವ ಕಾಲಾವಧಿಯಲ್ಲಿ ಸಾಧ್ಯವಾಗುವುದಿಲ್ಲ. ಆದರೆ ಈ ಬಗ್ಗೆ ಮೇಲ್ಕಂಡ ನಾಲ್ಕು ಜಿಲ್ಲೆಗಳನ್ನು ಹೊರತು ಪಡಿಸಿ ಉಳಿದ ಜಿಲ್ಲೆಗಳ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ವಿಚಾರಣಾಧಿಕಾರಿಗಳನ್ನು ನೇಮಿಸಿ ಕ್ರಮ ವಹಿಸಲು ಸ್ವತಂತ್ರರು. ಆದರೂ ಭವಿಷ್ಯದಲ್ಲಿ ಆ ಜಿಲ್ಲೆಗಳ ಜಿಲ್ಲಾ, ಉಪವಿಭಾಗ, ತಾಲ್ಲೂಕು ಕೇಂದ್ರಗಳ ಸುತ್ತ ವಸತಿ ಅಭಿವೃದ್ಧಿ ಚಟುವಟಿಕೆಗಳು ತೀವ್ರವಾಗುತ್ತಿರುವುದರಿಂದ ಸಂಬಂಧಿಸಿದ ನಗರ ಯೋಜನಾ ಪ್ರಾಧಿಕಾರಗಳು, ಗ್ರಾಮಾಂತರ ನಗರ ಯೋಜನಾ ಇಲಾಖೆ, ಕಂದಾಯ ಇಲಾಖೆಗಳು ಬೆಳವಣಿಗೆಯನ್ನು ನಿಯಂತ್ರಿಸಿ ಕ್ರಮಬದ್ಧಗೊಳಿಸಲು ಸೂಕ್ತ ಕ್ರಮವನ್ನು ಈಗಿನಿಂದಲೇ ಕೈಗೊಳ್ಳಬೇಕು.

ಮೂಲಭೂತವಾಗಿ ಇ-ಸ್ವತ್ತು ತಂತ್ರಾಂಶದಲ್ಲಿ ಸಂದರ್ಭಕ್ಕೆ ತಕ್ಕಂತೆ ಗ್ರಾಮ ಪಂಚಾಯಿತಿ ಕೈಗೊಳ್ಳುವ ತೀರ್ಮಾನಕ್ಕೆ ಮಾನ್ಯತೆ ನೀಡುವ ಮೊದಲಾಗಿ ಅಂಶಗಳನ್ನು ಪರಿಗಣಿಸಲಾಗಿದ್ದು ಆ ಬಗ್ಗೆ ವ್ಯಾಪಕವಾಗಿ ದೂರುಗಳು ಪಂಚಾಯಿತಿ ಅನುಷ್ಠಾನಾಧಿಕಾರಿಗಳು ಬಳಕೆದಾರರ ಜಿಲ್ಲೆಯಿಂದ ಬಂದಿದ್ದು ತಂತ್ರಾಂಶದ ಪರಿಷ್ಕರಣೆ ಭಾಗ-IV ರಲ್ಲಿ ಸೂಚಿಸಿರುವ ಸಂದರ್ಭಗಳಲ್ಲಿ ಅವಶ್ಯಕತೆಯಂತೆ ಭಾವಿಸಲಾಗಿದೆ.

(ಕೆ.ಹೆಚ್. ಗೋಪಾಲಕೃಷ್ಣೇಗೌಡ)
ಅಧ್ಯಕ್ಷರು

ಸ್ಥಳ: ಬೆಂಗಳೂರು
ದಿನಾಂಕ: 31.01.2018

(ಕೆ. ಸುಬ್ರಹ್ಮಣ್ಯ ಕಾಮತ್)
ಸದಸ್ಯರು

(ಎಸ್.ಎಸ್. ಪಟಗೇರಿ)
ಸದಸ್ಯರು

ಅನುಬಂಧ – ಅ

## ಭೇಟಿ ನೀಡಿದ ಜಿಲ್ಲಾ ಪಂಚಾಯಿತಿಗಳ ಹಾಗೂ ತಾಲ್ಲೂಕು ಪಂಚಾಯಿತಿಯ ವಿವರಗಳು

| ಕ್ರ. ಸಂ. | ದಿನಾಂಕ | ಜಿಲ್ಲಾ ಪಂಚಾಯಿತಿಗಳು | ಹಾಜರಿದ್ದ ಅಧಿಕಾರಿ ಹಾಗು ಚುನಾಯಿತ ಪ್ರತಿನಿಧಿಗಳು |
|---|---|---|---|
| 1. | 07.09.2017 | ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿ | ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 2. | 08.09.2017 | ಉಡುಪಿ ಜಿಲ್ಲಾ ಪಂಚಾಯಿತಿ, ಉಡುಪಿ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು. ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 3. | 12.09.2017 | ಉತ್ತರ ಕನ್ನಡ ಜಿಲ್ಲಾ ಪಂಚಾಯಿತಿ, ಕಾರವಾರ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 4. | 21.09.2017 | ಯಾದಗಿರಿ ಜಿಲ್ಲಾ ಪಂಚಾಯಿತಿ | ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 5. | 22.09.2017 | ಕಲಬುರಗಿ ಜಿಲ್ಲಾ ಪಂಚಾಯಿತಿ, ಕಲಬುರಗಿ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 6. | 23.09.2017 | ಬೀದರ ಜಿಲ್ಲಾ ಪಂಚಾಯಿತಿ, ಬೀದರ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |

| ಕ್ರ. ಸಂ. | ದಿನಾಂಕ | ಜಿಲ್ಲಾ ಪಂಚಾಯಿತಿಗಳು | ಹಾಜರಿದ್ದ ಅಧಿಕಾರಿ ಹಾಗು ಚುನಾಯಿತ ಪ್ರತಿನಿಧಿಗಳು |
|---|---|---|---|
| 7. | 26.10.2017 | ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ, ಬೆಂಗಳೂರು | ಅಧ್ಯಕ್ಷರು, ಜಿಲ್ಲಾ ಪಂಚಾಯತ್ ಬೆಂಗಳೂರು (ಗ್ರಾ), ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 8. | 27.10.2017 | ರಾಮನಗರ ಜಿಲ್ಲಾ ಪಂಚಾಯಿತಿ, ರಾಮನಗರ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 9. | 28.10.2017 | ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ, ಬೆಂಗಳೂರು | ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 10. | 31.10.2017 | ತುಮಕೂರು ಜಿಲ್ಲಾ ಪಂಚಾಯಿತಿ, ತುಮಕೂರು | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 11. | 03.11.2017 | ಕೊಡಗು ಜಿಲ್ಲಾ ಪಂಚಾಯಿತಿ, ಮಡಿಕೇರಿ | ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಯೋಜನ ನಿರ್ದೇಶಕರು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 12. | 04.11.2017 | ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು | ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 13. | 09.11.2017 | ಶಿವಮೊಗ್ಗ ಜಿಲ್ಲಾ ಪಂಚಾಯಿತಿ, ಶಿವಮೊಗ್ಗ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |

| ಕ್ರ. ಸಂ. | ದಿನಾಂಕ | ಜಿಲ್ಲಾ ಪಂಚಾಯಿತಿಗಳು | ಹಾಜರಿದ್ದ ಅಧಿಕಾರಿ ಹಾಗು ಚುನಾಯಿತ ಪ್ರತಿನಿಧಿಗಳು |
|---|---|---|---|
| 14. | 10.11.2017 | ಹಾಸನ ಜಿಲ್ಲಾ ಪಂಚಾಯಿತಿ, ಹಾಸನ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು. |
| 15. | 16.11.2017 | ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ | ಜಿಲ್ಲ ಪಂಚಾಯತ್ ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 16. | 21.11.2017 | ಚಿತ್ರದುರ್ಗ ಜಿಲ್ಲಾ ಪಂಚಾಯಿತಿ, ಚಿತ್ರದುರ್ಗ | ಜಿಲ್ಲಾ ಪಂಚಾಯತ್ ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 17. | 22.11.2017 | ಕೋಲಾರ ಜಿಲ್ಲಾ ಪಂಚಾಯಿತಿ, ಕೋಲಾರ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 18. | 24.11.2017 | ಬಳ್ಳಾರಿ ಜಿಲ್ಲಾ ಪಂಚಾಯಿತಿ, ಬಳ್ಳಾರಿ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 19. | 25.11.2017 | ರಾಯಚೂರು ಜಿಲ್ಲಾ ಪಂಚಾಯಿತಿ, ರಾಯಚೂರು | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 20. | 06.12.2017 | ಧಾರವಾಡ ಜಿಲ್ಲಾ ಪಂಚಾಯಿತಿ, ಧಾರವಾಡ | ಜಿಲ್ಲಾ ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |

| ಕ್ರ. ಸಂ. | ದಿನಾಂಕ | ಜಿಲ್ಲಾ ಪಂಚಾಯಿತಿಗಳು | ಹಾಜರಿದ್ದ ಅಧಿಕಾರಿ ಹಾಗು ಚುನಾಯಿತ ಪ್ರತಿನಿಧಿಗಳು |
|---|---|---|---|
| 21. | 07.12.2017 | ಬೆಳಗಾವಿ ಜಿಲ್ಲಾ ಪಂಚಾಯಿತಿ, ಬೆಳಗಾವಿ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು. |
| 22. | 08.12.2017 | ವಿಜಯಪುರ ಜಿಲ್ಲಾ ಪಂಚಾಯಿತಿ, ವಿಜಯಪುರ | ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 23. | 12.12.2017 | ಮೈಸೂರು ಜಿಲ್ಲಾ ಪಂಚಾಯಿತಿ, ಮೈಸೂರು | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 24. | 28.12.2017 | ಗದಗ ಜಿಲ್ಲಾ ಪಂಚಾಯಿತಿ, ಗದಗ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |

ತಾಲ್ಲೂಕು ಪಂಚಾಯಿತಿ

| | | | |
|---|---|---|---|
| 01. | 10.08.2017 | ಹೊಸಕೋಟೆ ತಾ. ಪಂ., ಬೆಂ.ಗ್ರಾ.ಜಿಲ್ಲೆ | ಅಧ್ಯಕ್ಷರು ತಾಲ್ಲೂಕು ಪಂಚಾಯಿತಿ, ಹೊಸಕೋಟೆ, ಪ್ರಭಾರ ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗು 09 ಗ್ರಾಮ ಪಂಚಾಯಿತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು. |

**ಅನುಬಂಧ – ಆ**

# ಭೇಟಿ ನೀಡಿದ ಗ್ರಾಮ ಪಂಚಾಯಿತಿಗಳ ವಿವರಗಳು

| ಅ. ಸಂ. | ದಿನಾಂಕ | ಗ್ರಾಮ ಪಂಚಾಯಿತಿಗಳು | ತಾಲ್ಲೂಕು | ಜಿಲ್ಲೆ | ಹಾಜರಿದ್ದ ಅಧಿಕಾರಿ ಹಾಗು ಚುನಾಯಿತ ಪ್ರತಿನಿಧಿಗಳು |
|---|---|---|---|---|---|
| 1. | 13.07.2017 | ಹುರುಳಿಚಿಕ್ಕನಹಳ್ಳಿ | ಬೆಂಗಳೂರು ಉತ್ತರ | ಬೆಂಗಳೂರು ನಗರ | ಗ್ರಾ.ಪಂ. ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 2. | 13.07.2017 | ಹೆಸರುಘಟ್ಟ | ಬೆಂಗಳೂರು ಉತ್ತರ | ಬೆಂಗಳೂರು ನಗರ | ಗ್ರಾ.ಪಂ. ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 3. | 14.07.2017 | ಮಾರೇನಹಳ್ಳಿ | ಬೆಂಗಳೂರು ಉತ್ತರ | ಬೆಂಗಳೂರು ನಗರ | ಗ್ರಾ.ಪಂ. ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 4. | 14.07.2017 | ಬಾಗಲೂರು | ಬೆಂಗಳೂರು ಉತ್ತರ | ಬೆಂಗಳೂರು ನಗರ | ಗ್ರಾ.ಪಂ. ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 5. | 15.07.2017 | ಅರಕೆರೆ | ಬೆಂಗಳೂರು ಉತ್ತರ | ಬೆಂಗಳೂರು ನಗರ | ಗ್ರಾ.ಪಂ. ಅಧ್ಯಕ್ಷರು, ಸದಸ್ಯರು, ಕಾರ್ಯದರ್ಶಿ, ಹಾಗೂ ಸಿಬ್ಬಂದಿ ವರ್ಗದವರು |
| 6. | 15.07.2017 | ಗೋಪಾಲಪುರ | ಬೆಂಗಳೂರು ಉತ್ತರ | ಬೆಂಗಳೂರು ನಗರ | ಗ್ರಾ.ಪಂ. ಅಧ್ಯಕ್ಷರು, ಸದಸ್ಯರು ಹಾಗೂಸಿಬ್ಬಂದಿ ವರ್ಗದವರು |
| 7. | 22.07.2017 | ಮಾದಿಹಳ್ಳಿ | ತುರುವೇಕೆರೆ | ತುಮಕೂರು | ಗ್ರಾಮ ಪಂಚಾಯಿತಿಯ ಲೆಕ್ಕ ಸಹಾಯಕರು ಹಾಗೂ ಸಿಬ್ಬಂದಿ ವರ್ಗದವರು |
| 8. | 02.08.2017 | ಉರಿಗಿಲಿ | ಕೋಲಾರ | ಕೋಲಾರ | ಗ್ರಾ.ಪಂ. ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 9. | 05.08.2017 | ಬನ್ನೇರುಘಟ್ಟ | ಬೆಂಗಳೂರು ಉತ್ತರ | ಬೆಂಗಳೂರು ನಗರ | ಗ್ರಾ.ಪಂ. ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 10. | 05.08.2017 | ಕಲ್ಲುಬಾಳು | ಆನೇಕಲ್ | ಬೆಂಗಳೂರು ನಗರ | ಗ್ರಾ.ಪಂ. ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |

| ಕ್ರ. ಸಂ. | ದಿನಾಂಕ | ಗ್ರಾಮ ಪಂಚಾಯಿತಿಗಳು | ತಾಲ್ಲೂಕು | ಜಿಲ್ಲೆ | ಸಂಬಂಧಪಟ್ಟ ಅಧಿಕಾರಿ ಹಾಗೂ ಚುನಾಯಿತ ಪ್ರತಿನಿಧಿಗಳು |
|---|---|---|---|---|---|
| 11. | 10.08.2017 | ಕಂಬಳೀಪುರ | ಹೊಸಕೋಟೆ | ಬೆಂಗಳೂರು ಗ್ರಾಮಾಂತರ | ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್, ಹೊಸಕೋಟೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 12. | 10.08.2017 | ಲಕ್ಕೊಂಡಹಳ್ಳಿ | ಹೊಸಕೋಟೆ | ಬೆಂಗಳೂರು ಗ್ರಾಮಾಂತರ | ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್, ಹೊಸಕೋಟೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 13. | 10.08.2017 | ದೊಡ್ಡಹುಲ್ಲೂರು | ಹೊಸಕೋಟೆ | ಬೆಂಗಳೂರು ಗ್ರಾಮಾಂತರ | ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್, ಹೊಸಕೋಟೆ |
| 14. | 11.08.2017 | ಸಮೇತನಹಳ್ಳಿ | ಹೊಸಕೋಟೆ | ಬೆಂಗಳೂರು ಗ್ರಾಮಾಂತರ | ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್, ಹೊಸಕೋಟೆ |
| 15. | 11.08.2017 | ಮುತ್ಸಂದ್ರ | ಹೊಸಕೋಟೆ | ಬೆಂಗಳೂರು ಗ್ರಾಮಾಂತರ | ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್, ಹೊಸಕೋಟೆ |
| 16. | 11.08.2017 | ದೊಡ್ಡಗಟ್ಟಿಗನಬ್ಬೆ | ಹೊಸಕೋಟೆ | ಬೆಂಗಳೂರು ಗ್ರಾಮಾಂತರ | ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್, ಹೊಸಕೋಟೆ |
| 17. | 31.08.2017 | ಮುಗ್ತಿಹಳ್ಳಿ ಹಾಗೂ ತೇಗೂರು | ಚಿಕ್ಕಮಗಳೂರು | ಚಿಕ್ಕಮಗಳೂರು | ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 18. | 07.09.2017 | ತಲಪಾಡಿ | ಮಂಗಳೂರು | ದಕ್ಷಿಣ ಕನ್ನಡ | ಉಪಾಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 19. | 07.09.2017 | ಸೋಮೇಶ್ವರ | ಮಂಗಳೂರು | ದಕ್ಷಿಣ ಕನ್ನಡ | ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 20. | 08.09.2017 | 48ನೇ ಕೊಡಿ-ಬೆಟ್ಟು | ಉಡುಪಿ | ಉಡುಪಿ | ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳು, ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |

| ಕ್ರ. ಸಂ. | ದಿನಾಂಕ | ಗ್ರಾಮ ಪಂಚಾಯಿತಿಗಳು | ತಾಲ್ಲೂಕು | ಜಿಲ್ಲೆ | ಹಾಜರಿದ್ದ ಅಧಿಕಾರಿ ಹಾಗು ಚುನಾಯಿತ ಪ್ರತಿನಿಧಿಗಳು |
|---|---|---|---|---|---|
| 21. | 08.09.2017 | ಉದ್ಯಾವರ | ಉಡುಪಿ | ಉಡುಪಿ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳು, ಕಾರ್ಯನಿರ್ವಾಹಕ ಅಧಿಕಾರಿಗಳು, ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 22. | 12.09.2017 | ಚೆಂಡಿಯ | ಕಾರವಾರ | ಉತ್ತರ ಕನ್ನಡ | ಗ್ರಾ. ಪಂ. ಅಧ್ಯಕ್ಷರು. ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 23. | 12.09.2017 | ಕಾನಗೋಡ | ಸಿರ್ಸಿ | ಉತ್ತರ ಕನ್ನಡ | ಕಾರ್ಯನಿರ್ವಾಹಕ ಅಧಿಕಾರಿಗಳು, ಸಿರ್ಸಿ ತಾಲ್ಲೂಕು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 24. | 14.09.2017 | ಕೆಸರಟ್ಟಿ | ಗಂಗಾವತಿ | ಕೊಪ್ಪಳ | ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 25. | 16.09.2017 | ಚಿಕ್ಕಾಲಗುಂಡಿ | ಬೀಳಗಿ | ಬಾಗಲಕೋಟೆ | ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 26. | 18.09.2017 | ಹಲಗಲಿ | ಮುಧೋಳ | ಬಾಗಲಕೋಟೆ | ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 27. | 21.09.2017 | ಗೋಗಿ (ಕೋನಾ) ಮತ್ತು ಗೋಗಿ(ಪೇಟಾ) | ಶಹಪುರ | ಯಾದಗಿರಿ | ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಶಹಪುರ, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 28. | 22.09.2017 | ಹಾಗರಗಾ | ಕಲಬುರ್ಗಿ | ಕಲಬುರ್ಗಿ | ಸಹಾಯಕ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಗ್ರಾಮ ಪಂಚಾಯಿತಿ ಅಧ್ಯಕ್ಷರು. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |

| ಕ್ರ. ಸಂ. | ದಿನಾಂಕ | ಗ್ರಾಮ ಪಂಚಾಯಿತಿಗಳು | ತಾಲ್ಲೂಕು | ಜಿಲ್ಲೆ | ಹಾಜರಿದ್ದ ಅಧಿಕಾರಿ ಹಾಗು ಚುನಾಯಿತ ಪ್ರತಿನಿಧಿಗಳು |
|---|---|---|---|---|---|
| 29. | 22.09.2017 | ಮಾಡಬೂಳ್ | ಚಿತ್ತಾಪುರ | ಕಲ್ಬುರ್ಗಿ | ಸಹಾಯಕ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 30. | 23.09.2017 | ಪ್ರತಾಪುರ | ಬಸವಕಲ್ಯಾಣ | ಬೀದರ್ | ಕಾರ್ಯನಿರ್ವಾಹಕ ಅಧಿಕಾರಿಗಳು, ಬಸವಕಲ್ಯಾಣ, ಗ್ರಾ. ಪಂ. ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 31. | 23.09.2017 | ಅಣದೂರ | ಬೀದರ್ | ಬೀದರ್ | ಕಾರ್ಯನಿರ್ವಾಹಕ ಅಧಿಕಾರಿಗಳು, ಬಸವಕಲ್ಯಾಣ, ಗ್ರಾ. ಪಂ. ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 32. | 31.10.2017 | ಹೆಬ್ಬಾಳ್ | ತುಮಕೂರು | ತುಮಕೂರು | ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 33. | 03.11.2017 | ಮುಳ್ಳುಸೋಗೆ | ಸೋಮವಾರಪೇಟೆ | ಕೊಡಗು | ಉಪಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತಿ, ಕಾರ್ಯನಿರ್ವಾಹಕ ಅಧಿಕಾರಿ/ಸಹಾಯಕ ನಿರ್ದೇಶಕರು, ಸೋಮವಾರಪೇಟೆ ತಾ ಪಂ. ಗ್ರಾ. ಪಂ. ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 34. | 09.11.2017 | [illegible] | ಸೊರಬ | ಶಿವಮೊಗ್ಗ | ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 35. | 24.11.2017 | [illegible] | ಶಿರಗುಪ್ಪ | ಬಳ್ಳಾರಿ | ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |

| ಕ್ರ. ಸಂ. | ದಿನಾಂಕ | ಗ್ರಾಮ ಪಂಚಾಯಿತಿಗಳು | ತಾಲ್ಲೂಕು | ಜಿಲ್ಲೆ | ಹಾಜರಿದ್ದ ಅಧಿಕಾರಿ ಹಾಗು ಚುನಾಯಿತ ಪ್ರತಿನಿಧಿಗಳು |
| --- | --- | --- | --- | --- | --- |
| 36. | 12.12.2017 | ರಮ್ಮನಹಳ್ಳಿ | ಮೈಸೂರು | ಮೈಸೂರು | ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಜಿಲ್ಲಾ ಪಂಚಾಯಿತಿ. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |

## ಕಂದಾಯ ಗ್ರಾಮ ರಚನೆ ವಿವರ (A)

| ಕ್ರ ಸಂ | ಜಿಲ್ಲೆಯ ಹೆಸರು | ಒಟ್ಟು ರಚಿಸ ಬೇಕಾಗಿದ್ದ ಕಂದಾಯ ಗ್ರಾಮಗಳ ಸಂಖ್ಯೆ | ಅಂತಿಮ ಅಧಿಸೂಚನೆ ಹೊರಡಿಸಿರುವ ಹೊಸ ಕಂದಾಯ ಗ್ರಾಮಗಳ ಸಂಖ್ಯೆ | ಅಂತಿಮ ಅಧಿಸೂಚನೆ ಹೊರಡಿಸಬೇಕಾದ ಹೊಸ ಕಂದಾಯ ಗ್ರಾಮಗಳ ಸಂಖ್ಯೆ |
|---|---|---|---|---|
| 1 | ಚಿತ್ರದುರ್ಗ | 346 | 75 | 271 |
| 2 | ತುಮಕೂರು | 540 | 41 | 499 |
| 3 | ಚಿಕ್ಕಬಳ್ಳಾಪುರ | 205 | 85 | 120 |
| 4 | ಮೈಸೂರು | 132 | 11 | 121 |
| 5 | ಕಲ್ಬುರ್ಗಿ | 151 | 0 | 151 |
| 6 | ವಿಜಯಪುರ | 174 | 12 | 162 |
| 7 | ಚಾಮರಾಜನಗರ | 69 | 22 | 47 |
| 8 | ಚಿಕ್ಕಮಗಳೂರು | 40 | 0 | 40 |
| 9 | ಬೀದರ್ | 97 | 12 | 85 |
| 10 | ಹಾಸನ | 33 | 0 | 33 |
| 11 | ಮಂಡ್ಯ | 77 | 0 | 77 |
| 12 | ರಾಮನಗರ | 47 | 9 | 38 |
| 13 | ಬೆಂಗಳೂರು ಗ್ರಾಮಾಂತರ | 72 | 28 | 44 |
| 14 | ಬಾಗಲಕೋಟೆ | 24 | 0 | 24 |
| 15 | ಧಾರವಾಡ | 24 | 9 | 15 |
| 16 | ಗದಗ | 31 | 11 | 20 |
| 17 | ದಾವಣಗೆರೆ | 64 | 0 | 64 |
| 18 | ಉತ್ತರ ಕನ್ನಡ | 6 | 2 | 4 |
| 19 | ಯಾದಗಿರಿ | 94 | 0 | 94 |
| 20 | ಕೊಪ್ಪಳ | 32 | 0 | 32 |
| 21 | ಶಿವಮೊಗ್ಗ | 35 | 10 | 25 |
| 22 | ಬೆಳಗಾವಿ | 164 | 42 | 122 |
| 23 | ಹಾವೇರಿ | 30 | 5 | 25 |
| 24 | ಬಳ್ಳಾರಿ | 157 | 42 | 115 |
| 25 | ರಾಯಚೂರು | 157 | 74 | 83 |
| 26 | ಬೆಂಗಳೂರು ನಗರ | 29 | 0 | 29 |
| 27 | ಕೋಲಾರ | 72 | 35 | 37 |
| 28 | ದಕ್ಷಿಣ ಕನ್ನಡ | 0 | 0 | 0 |
| 29 | ಕೊಡಗು | 0 | 0 | 0 |
| 30 | ಉಡುಪಿ | 0 | 0 | 0 |
| | ಒಟ್ಟು | 2902 | 525 | 2377 |

# 40 ಕ್ಕಿಂತ ಹೆಚ್ಚು ಸದಸ್ಯರು ಇರುವ ಗ್ರಾಮ ಪಂಚಾಯಿತಿಯ ವಿವರ

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಗ್ರಾಮ ಪಂಚಾಯಿತಿ ಹೆಸರು | ಒಟ್ಟು ಸದಸ್ಯರ ಸಂಖ್ಯೆ |
|---|---|---|---|---|
| 1 | ಮೈಸೂರು | ಮೈಸೂರು | ಕೂರ್ಗಳ್ಳಿ | 69 |
| 2 | ಬೆಂಗಳೂರು | ಬೆಂಗಳೂರು ದಕ್ಷಿಣ | ಕೋನಪ್ಪನ ಅಗ್ರಹಾರ | 65 |
| 3 | ಬೆಂಗಳೂರು | ಬೆಂಗಳೂರು ದಕ್ಷಿಣ | ದೊಡ್ಡತೋಗೂರು | 64 |
| 4 | ಬೆಂಗಳೂರು | ಆನೇಕಲ್ | ನೆರಳೂರು | 63 |
| 5 | ದಕ್ಷಿಣ ಕನ್ನಡ | ಮಂಗಳೂರು | ಸೋಮೇಶ್ವರ | 61 |
| 6 | ಮೈಸೂರು | ಮೈಸೂರು | ಹಿನಕಲ್ | 58 |
| 7 | ರಾಯಚೂರು | ರಾಯಚೂರು | ದೇವಸೂಗೂರ | 58 |
| 8 | ಬೆಳಗಾವಿ | ಅಥಣಿ | ಅಥಣಿ (ಗ್ರಾಮೀಣ) | 56 |
| 9 | ಬೆಂಗಳೂರು | ಬೆಂಗಳೂರು ದಕ್ಷಿಣ | ಕುಂಬಳಗೋಡು | 50 |
| 10 | ಬೆಂಗಳೂರು | ಆನೇಕಲ್ | ಹೆನ್ನಾಗರ | 48 |
| 11 | ಬೆಂಗಳೂರು ಗ್ರಾಮಾಂತರ | ದೊಡ್ಡಬಳ್ಳಾಪುರ | ಬಾಶೆಟ್ಟಿಹಳ್ಳಿ | 47 |
| 12 | ಬೆಳಗಾವಿ | ಬೆಳಗಾವಿ | ಮಚ್ಚೆ | 47 |
| 13 | ಮೈಸೂರು | ಮೈಸೂರು | ಶ್ರೀರಾಂಪುರ | 47 |
| 14 | ಮೈಸೂರು | ಮೈಸೂರು | ಸಿದ್ದಲಿಂಗಪುರ | 46 |
| 15 | ಬೆಳಗಾವಿ | ಬೆಳಗಾವಿ | ಹಿರೇಬಾಗೇವಾಡಿ | 45 |
| 16 | ಹಾಸನ | ಹಾಸನ | ಸತ್ಯಮಂಗಲ | 45 |
| 17 | ಬೆಂಗಳೂರು | ಆನೇಕಲ್ | ಹುಲಿಮಂಗಲ | 44 |
| 18 | ಉಡುಪಿ | ಕುಂದಾಪುರ | ಬಿಜೂರು | 44 |
| 19 | ಕಲಬುರಗಿ | ಸೇಡಂ | ಮಳಖೇಡ(ಬಿ) | 43 |
| 20 | ಬೆಂಗಳೂರು | ಆನೇಕಲ್ | ಬನ್ನೇರುಘಟ್ಟ | 42 |
| 21 | ಬೆಂಗಳೂರು | ಆನೇಕಲ್ | ಹಾರಗದ್ದೆ | 41 |
| 22 | ಬೆಳಗಾವಿ | ಚಿಕ್ಕೋಡಿ | ಕೇರೂರ | 41 |
| 23 | ಬೆಳಗಾವಿ | ರಾಯಬಾಗ | ಕುಡಚಿ (ಗ್ರಾಮೀಣ) | 41 |
| 24 | ರಾಯಚೂರು | ಲಿಂಗಸೂಗೂರ | ಹಟ್ಟಿ | 41 |
| 25 | ಬೆಳಗಾವಿ | ಅಥಣಿ | ಮಂಗಸೂಳಿ | 40 |

# 94 'ಸಿ' ರಡಿ ಸ್ವೀಕರಿಸಿದ ಅರ್ಜಿಗಳ ವಿಲೇವಾರಿ ವಿವರ

| ಕ್ರ ಸಂ | ಜಿಲ್ಲೆಯ ಹೆಸರು | 94 'ಸಿ' | | |
|---|---|---|---|---|
| | | ಸ್ವೀಕೃತ ಅರ್ಜಿಗಳು | ವಿಲೇವಾರಿ | ಬಾಕಿ |
| 1 | ಚಿಕ್ಕಮಗಳೂರು | 44006 | 5181 | 38825 |
| 2 | ಹಾಸನ | 31086 | 6023 | 25063 |
| 3 | ಬೆಳಗಾವಿ | 48729 | 33629 | 15100 |
| 4 | ಶಿವಮೊಗ್ಗ | 69825 | 57031 | 12794 |
| 5 | ಬೀದರ್ | 17359 | 5620 | 11739 |
| 6 | ಉಡುಪಿ | 28930 | 17209 | 11721 |
| 7 | ಕೊಡಗು | 18236 | 10524 | 7712 |
| 8 | ದಕ್ಷಿಣ ಕನ್ನಡ | 82834 | 75455 | 7379 |
| 9 | ಬೆಂಗಳೂರು ನಗರ | 10853 | 3690 | 7163 |
| 10 | ಹಾವೇರಿ | 12114 | 6488 | 5626 |
| 11 | ತುಮಕೂರು | 9619 | 4377 | 5242 |
| 12 | ಕಲ್ಬುರ್ಗಿ | 13869 | 8964 | 4905 |
| 13 | ಧಾರವಾಡ | 13340 | 8850 | 4490 |
| 14 | ರಾಯಚೂರು | 10104 | 6064 | 4040 |
| 15 | ಚಿತ್ರದುರ್ಗ | 5740 | 1729 | 4011 |
| 16 | ಯಾದಗಿರಿ | 5719 | 2264 | 3455 |
| 17 | ಚಿಕ್ಕಬಳ್ಳಾಪುರ | 6633 | 3321 | 3312 |
| 18 | ಕೊಪ್ಪಳ | 14937 | 11997 | 2940 |
| 19 | ಮೈಸೂರು | 5781 | 2966 | 2815 |
| 20 | ಬೆಂಗಳೂರು ಗ್ರಾಮಾಂತರ | 14454 | 11644 | 2810 |
| 21 | ರಾಮನಗರ | 4390 | 2630 | 1760 |
| 22 | ಉತ್ತರ ಕನ್ನಡ | 50344 | 48624 | 1720 |
| 23 | ಕೋಲಾರ | 3962 | 2841 | 1121 |
| 24 | ಮಂಡ್ಯ | 3066 | 2255 | 811 |
| 25 | ಬಾಗಲಕೋಟೆ | 14026 | 13302 | 724 |
| 26 | ದಾವಣಗೆರೆ | 10852 | 10282 | 570 |
| 27 | ಚಾಮರಾಜನಗರ | 953 | 921 | 32 |
| 28 | ಬಳ್ಳಾರಿ | 20634 | 20634 | 0 |
| 29 | ಗದಗ | 1558 | 1559 | 0 |
| 30 | ವಿಜಯಪುರ | 22664 | 22664 | 0 |
| | ಒಟ್ಟು | 596618 | 408738 | 187880 |

ಮೂಲ:- ಕಂದಾಯ ಇಲಾಖೆ

# ಅರಣ್ಯ ಹಕ್ಕು ಕಾಯ್ದೆಯಡಿ ಬಾಕಿ ಇರುವ ಅರ್ಜಿಗಳು

| ಕ್ರ ಸಂ | ಜಿಲ್ಲೆಯ ಹೆಸರು | ಸ್ವೀಕೃತ ಅರ್ಜಿಗಳ ಸಂಖ್ಯೆ | ಹಕ್ಕುಪತ್ರ ವಿತರಿಸಿದ ಸಂಖ್ಯೆ | ತಿರಸ್ಕೃತ ಅರ್ಜಿಗಳ ಸಂಖ್ಯೆ | ಬಾಕಿ ಅರ್ಜಿಗಳ ಸಂಖ್ಯೆ |
|---|---|---|---|---|---|
| 1 | ಉತ್ತರ ಕನ್ನಡ | 88095 | 6565 | 41379 | 40151 |
| 2 | ಶಿವಮೊಗ್ಗ | 85518 | 2506 | 43042 | 39970 |
| 3 | ರಾಮನಗರ | 4582 | 374 | 798 | 3410 |
| 4 | ಹಾವೇರಿ | 2844 | 25 | 1002 | 1817 |
| 5 | ಚಿತ್ರದುರ್ಗ | 5602 | 347 | 4634 | 621 |
| 6 | ಕಲಬುರ್ಗಿ | 95 | 0 | 0 | 95 |
| 7 | ಬೆಂಗಳೂರು ನಗರ | 328 | 0 | 241 | 87 |
| 8 | ಬಳ್ಳಾರಿ | 5272 | 0 | 5196 | 76 |
| 9 | ಬೆಂಗಳೂರು ಗ್ರಾಮಾಂತರ | 465 | 56 | 341 | 68 |
| 10 | ಮೈಸೂರು | 7026 | 766 | 6199 | 61 |
| 11 | ಚಾಮರಾಜನಗರ | 2512 | 2016 | 436 | 60 |
| 12 | ಧಾರವಾಡ | 1348 | 45 | 1248 | 55 |
| 13 | ಮಂಡ್ಯ | 103 | 0 | 53 | 50 |
| 14 | ಕೊಡಗು | 3623 | 1637 | 1973 | 13 |
| 15 | ಕೊಪ್ಪಳ | 106 | 4 | 97 | 5 |
| 16 | ಚಿಕ್ಕಮಗಳೂರು | 24659 | 1897 | 22759 | 3 |
| 17 | ಬಾಗಲಕೋಟೆ | 12479 | 87 | 12392 | 0 |
| 18 | ದಾವಣಗೆರೆ | 12059 | 527 | 11532 | 0 |
| 19 | ತುಮಕೂರು | 1502 | 0 | 1502 | 0 |
| 20 | ಗದಗ | 1440 | 1300 | 140 | 0 |
| 21 | ಹಾಸನ | 492 | 1 | 491 | 0 |
| 22 | ಕೋಲಾರ | 0 | 0 | 0 | 0 |
| 23 | ಚಿಕ್ಕಬಳ್ಳಾಪುರ | 0 | 0 | 0 | 0 |
| 24 | ದಕ್ಷಿಣ ಕನ್ನಡ | 2382 | 125 | 2257 | 0 |
| 25 | ಉಡುಪಿ | 2118 | 529 | 1589 | 0 |
| 26 | ಬೆಳಗಾವಿ | 17424 | 447 | 16977 | 0 |
| 27 | ವಿಜಯಪುರ | 0 | 0 | 0 | 0 |
| 28 | ಯಾದಗಿರಿ | 0 | 0 | 0 | 0 |
| 29 | ಬೀದರ್ | 0 | 0 | 0 | 0 |
| 30 | ರಾಯಚೂರು | 0 | 0 | 0 | 0 |
| | ಒಟ್ಟು | 282074 | 19254 | 176278 | 86542 |

# KARNATAKA

# GRAMA SWARAJ AND PANCHAYATH RAJ ACT, 1993

## [AMENDED UNDER 17 AND 44 OF 2015 KARNATAKA ACT]

## CHAPTER XIII

### TAXES AND FEES

**199. Levy of taxes, rates, etc., by Grama Panchayats.-** (1) Every Grama Panchayat shall in such manner and subject to such exemptions as may be prescribed and not exceeding the maximum rate specified in Schedule IV levy tax upon buildings and lands which are not subject to agricultural assessment, within the limits of the panchayat area:

Provided that where an owner of the building or land has left the Panchayat area or cannot otherwise be found, the occupier of such building or land shall be liable for the tax leviable on such owner.

(2) A Grama Panchayat may levy water rate for supply of water for drinking and other purposes.

(3) A Grama Panchayat may also levy all or any of the following taxes and fee at such rates as the Grama panchayat may by bye-laws determine but not exceeding the maximum specified in Schedule IV and in such manner and subject to such exemptions as may be prescribed, namely:-

(a) tax on entertainment other than cinematograph shows;

(b) tax on vehicles, other than motor vehicles;

(c) tax on advertisement and hoardings;

(d) pilgrim fee on person attending the jatras, festivals, etc., where necessary arrangements for water supply, health and sanitation are made by the Grama Panchayats;

(e) market fee on persons who expose their goods for sale in any market place;

(f) fee on the registration of cattle brought for sale in any market place;

(g) fee on buses and taxies and auto-stands provided adequate facilities for the travellers by the Grama panchayat; and

(h) fee on grazing cattle in the grazing lands.

**200. Recovery of taxes and other dues.-** (1) When any tax, cess, rate or fee becomes due, Grama Panchayat shall, with the least practicable delay, cause to be presented to the person liable for the payment thereof a bill for the amount due from him, specifying the date on or before which amount shall be paid.

(2) If any person fails to pay any tax or fee or any other sum due to the Grama Panchayat under this Act or the rules or bye-laws on or before the specified date of payment the Grama Panchayat shall cause a notice of demand in the prescribed form to be served on the defaulter.

(3) The presentation of every bill under sub-section (1) and the service of every notice of demand under sub-section (2), shall be effected by the Secretary or an officer duly authorised by him in this behalf,-

(a) by giving or tendering the bill or notice to the person to whom it is addressed; or

(b) if such person is not found, by leaving the bill or notice at his last known place of abode, if within the limits of the panchayat area or by giving or tendering the bill or notice to some adult member or servant of his family; or

(c) if such person does not reside within the limits of the panchayat area and his address elsewhere is known to the person directing the issue of the bill or notice, then by forwarding the bill or notice to such person by registered post, under cover bearing the said address; or

(d) if none of the means aforesaid be available then by causing the bill or notice to be affixed on some conspicuous part of the building or land, if any, to which the bill or notice relates.

(4) If the tax, rate, fee or other amounts for which a notice of demand has been served is not paid within thirty days from the date of such service, the Grama Panchayat may recover the amount due along with a penalty of ten percent of the sum due, by the distraint and sale of the movable property of the defaulter in the prescribed manner.

(5) Fees for,-

(a) every distraint made under sub-section (4);

(b) every notice of demand issued under sub-section (2);

(c) the cost of maintaining any live-stock seized under sub-section (4), shall be chargeable at such rates as may be prescribed.

(6) Notwithstanding anything contained in the foregoing sub-sections, any tax ,rate or fee payable to a Grama panchayat shall be recoverable as an arrears of land revenue.

**201. Appeal against assessment, etc.-** Subject to such rules as may be prescribed, any person aggrieved by the assessment, levy or imposition of any tax, rate or fee under section 199 may appeal to the prescribed authority, whose decision shall be final.

**202. Composition of taxes in factory areas.-** (1) Subject to such rules as may be prescribed, when the owner of any industry or factory established in any panchayat area provides sanitary and other amenities for the buildings and land used for the industry or as factory quarters for employees and for other purposes connected with the undertaking the Grama Panchayat may in lieu of the taxes, rates or fees, payable under this Act in respect of such buildings and lands receive such amount annually as may be agreed upon between the Grama panchayat and such owner.

(2) Where no such agreement as is referred to in sub-section (1) can be reached, the matter may be referred to the [1][Chief Executive Officer][1] and the [1][Chief Executive Officer][1] may, after giving to the Grama panchayat and the owner concerned an opportunity of being heard, determine the amount payable by such owner and such determination shall be binding on the Grama Panchayat and such owner. [2][The Chief Executive Officer shall settle the matter within three months from the date of receipt of such reference and before making such reference such owners shall pay compulsorily fifty percent of the rates or tax or fee in question to the Grama Panchayath and the Chief Executive Officer shall accept the reference only after such payment of fifty percent of rates or tax or fees][2]

(3) The [1][Government][1] may by notification direct that the provisions of sub-section (1) shall be applicable to such other establishments as may be specified in such notification.

ಅನುಬಂಧ-ಐದು

**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ/441/ಗ್ರಾಪಂಅ/2016 (ಭಾಗ-3)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 28-10-2016.

**ಸುತ್ತೋಲೆ**

ವಿಷಯ: ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಗ್ರಾಮಠಾಣಾ ಗಡಿ ಬಹಳ ಹಿಂದೆ ನಿಗದಿಪಡಿಸಿದ್ದು, ಪ್ರಸ್ತುತ ವಿಸ್ತರಣೆಯಾಗಿರುವ ಪ್ರದೇಶ ಒಳಗೊಂಡಂತೆ ಹೊಸದಾಗಿ ಸರ್ವೆ ಮಾಡಿಸಿ ಗ್ರಾಮಠಾಣಾವನ್ನು ಪುನರ್ ನಿಗದಿಪಡಿಸುವ ಬಗ್ಗೆ.

ಉಲ್ಲೇಖ: ದಿನಾಂಕ 21.09.2016 ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮತ್ತು ಕಂದಾಯ ಸಚಿವರ ಜಂಟಿ ಅಧ್ಯಕ್ಷತೆಯಲ್ಲಿ ಇ-ಸ್ವತ್ತು ಯೋಜನೆ ಅನುಷ್ಠಾನದ ಬಗೆಗಿನ ಸಮಸ್ಯೆಗಳ ಬಗ್ಗೆ ನಡೆದ ಸಭೆಯ ನಡವಳಿಗಳು.

---

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ರ ನಿಯಮ 28 ರಂತೆ ರಾಜ್ಯದ ಗ್ರಾಮ ಪಂಚಾಯತಿಗಳ ಗ್ರಾಮಠಾಣಾ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳ ತೆರಿಗೆ ನಿರ್ಧಾರಣೆ ಪಟ್ಟಿಯನ್ನು ನಮೂನೆ-9 ರಲ್ಲಿ ಮತ್ತು ನಿಯಮ 30 ರಂತೆ ಭೂಮಿ ಮತ್ತು ಕಟ್ಟಡದ ತೆರಿಗೆಗಳ ಬೇಡಿಕೆ ಮತ್ತು ವಸೂಲಾತಿ ರಿಜಿಸ್ಟರ್ ಅನ್ನು ನಮೂನೆ-11ಎ ರಲ್ಲಿ ಗ್ರಾಮ ಪಂಚಾಯತಿಗಳು ನಿರ್ವಹಿಸುತ್ತಿವೆ.

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ ಪ್ರಕರಣ 148 ಮತ್ತು ಕರ್ನಾಟಕ ಭೂ ಕಂದಾಯ ನಿಯಮಾವಳಿ 1966 ರ ನಿಯಮ 82 ರಂತೆ ಕೃಷಿಯೇತರ ಜಮೀನಿನಲ್ಲಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ ಭೂ ಮಾಪನ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯು ಪಟ್ಟಣಗಳಲ್ಲಾಗಲಿ, ನಗರಗಳಲ್ಲಾಗಲಿ ಅಥವಾ ಹಳ್ಳಿಗಳಲ್ಲಾಗಲಿ ದಾಖಲೆಗಳನ್ನು ನಿರ್ವಹಿಸುವ ಜವಾಬ್ದಾರಿ ಹೊಂದಿರುತ್ತದೆ.

ಪ್ರಸ್ತುತ ಇರುವ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಠಾಣಾವು ಜೊತೆಗೆ ಗ್ರಾಮಗಳಲ್ಲಿ ಗ್ರಾಮಠಾಣಾಕ್ಕೆ ಹೊಂದಿಕೊಂಡಂತೆ ಗ್ರಾಮಗಳ ಬೆಳವಣಿಗೆಯಾಗಿದ್ದು, ಗ್ರಾಮಠಾಣಾದ ಅಕ್ಕಪಕ್ಕದಲ್ಲಿ ವಿವಿಧ ವಸತಿ ಯೋಜನೆಗಳಡಿ ಹಕ್ಕುಪತ್ರ ವಿತರಿಸಿ ಮನೆ ನಿರ್ಮಾಣ ಮಾಡಿಕೊಂಡಿರುತ್ತಾರೆ. ಇದಲ್ಲದೆ ಕೃಷಿ ಭೂಮಿಯಲ್ಲಿ ಮನೆಗಳನ್ನು ನಿರ್ಮಾಣ ಮಾಡಿಕೊಂಡಿದ್ದು, ಅವು ಸಕ್ರಮಗೊಂಡಿರುತ್ತವೆ. ಈ ಪ್ರದೇಶಗಳು ಗ್ರಾಮಠಾಣಾ ವ್ಯಾಪ್ತಿಗೆ ಒಳಪಡದಿರುವುದರಿಂದ ನಾಗರೀಕರು ಆಸ್ತಿಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಗಳಿಂದ ನಮೂನೆ-9 ಮತ್ತು 11ಎ ಪಡೆಯಲು ಬಹಳ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ ದಿನಾಂಕ:21-09-2016 ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮತ್ತು ಕಂದಾಯ ಸಚಿವರ ಸಮಕ್ಷಮ ಇ-ಸ್ವತ್ತು ಯೋಜನೆ ಅನುಷ್ಠಾನದ ಬಗೆಗಿನ ಸಮಸ್ಯೆಗಳ ಬಗ್ಗೆ ನಡೆದ ಸಭೆಯಲ್ಲಿ ಈ ವಿಷಯದ ಬಗ್ಗೆ ಸವಿವರವಾಗಿ ಚರ್ಚಿಸಲಾಗಿದ್ದು, ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳ ಗ್ರಾಮಠಾಣಾ ಗಡಿ ಬಹಳ ಹಿಂದೆ ನಿಗದಿಪಡಿಸಿದ್ದು, ಪ್ರಸ್ತುತ ವಿಸ್ತರಣೆಯಾಗಿರುವ ಪ್ರದೇಶ ಒಳಗೊಂಡಂತೆ ಹೊಸದಾಗಿ ಸರ್ವೆ ಮಾಡಿಸಿ ಗ್ರಾಮಠಾಣಾವನ್ನು ಪುನರ್ ನಿಗದಿಪಡಿಸುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳ ಗ್ರಾಮಠಾಣಾ ಗಡಿಯನ್ನು ಪ್ರಸ್ತುತ ವಿಸ್ತರಣೆಯಾಗಿರುವ ಪ್ರದೇಶವನ್ನು ಒಳಗೊಂಡಂತೆ ಹೊಸದಾಗಿ ಸರ್ವೆ ಮಾಡಿಸಿ ಪುನರ್ ನಿಗದಿಪಡಿಸುವ ಬಗ್ಗೆ ಕಂದಾಯ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಈ ಕೆಳಗಿನಂತೆ ಕ್ರಮ ವಹಿಸುವಂತೆ ಆದೇಶಿಸಿದೆ.

1) ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳ ಗ್ರಾಮ ಠಾಣಾ ಗಡಿ ಬಹಳ ಹಿಂದೆ ನಿಗದಿಪಡಿಸಿದ್ದು, ಹಾಲಿ ಗ್ರಾಮಠಾಣಾದ ಜೊತೆಗೆ ಹೊಂದಿಕೊಂಡಂತೆ ಪ್ರಸ್ತುತ ವಿಸ್ತರಣೆಯಾಗಿರುವ ಪ್ರದೇಶ ಒಳಗೊಂಡಂತೆ ಹೊಸದಾಗಿ ಸರ್ವೆ ಮಾಡಲು ಕ್ರಮ ವಹಿಸುವುದು.

2) ಸರ್ವೆಯರ್‌ಗೆ ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಸಹಕಾರ ನೀಡುವುದು.
3) ಗ್ರಾಮಠಾಣಾ ಜೊತೆಗೆ ಹೊಂದಿಕೊಂಡಂತೆ ಸೃಷ್ಟಿ ವಿಸ್ತರಿಸಬಹುದಾಗಿರುವ ಪ್ರದೇಶದ ಬಗ್ಗೆ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳಲ್ಲಿ ಕಂದಾಯ ಇಲಾಖೆಯ ಗ್ರಾಮ ಲೆಕ್ಕಿಗರು, ಪಾಲ್ಗೊಂಡು ... ಈ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವುದು.
4) ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ವಾರ್ಡ್ ಸಭೆ ಮತ್ತು ಗ್ರಾಮ ಸಭೆ ಹಾಗೂ ಸಾಮಾನ್ಯ ಸಭೆಗೆ ಕಂದಾಯ ಇಲಾಖೆಯ ಅಧಿಕಾರಿ / ನೌಕರರುಗಳನ್ನು ಆಹ್ವಾನಿಸುವುದು.
5) ಗುರುತು ಮಾಡಿದ ಗ್ರಾಮಠಾಣಾ ವಿಸ್ತರಣೆಯ ಬಗ್ಗೆ ಗ್ರಾಮ ಪಂಚಾಯತಿ ಸಭೆಯಲ್ಲಿ ಸವಿವರವಾಗಿ ಚರ್ಚಿಸಿ ನಿರ್ಣಯ ತೆಗೆದುಕೊಂಡು, ತದನಂತರ ಸಂಬಂಧಿಸಿದ ತಹಶೀಲ್ದಾರ್ ಮತ್ತು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವುದು.
6) ತಹಶೀಲ್ದಾರ್ ರವರು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು, ಈ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ಗ್ರಾಮಠಾಣಾ ವಿಸ್ತರಣೆ ಪ್ರದೇಶ ವಿಸ್ತರಣೆಯಾಗಿರುವ ಬಗ್ಗೆ ಕ್ರಮಬದ್ಧಗೊಳಿಸಿಕೊಂಡು ತದನಂತರ ಉಪವಿಭಾಗಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವುದು.
7) ಉಪವಿಭಾಗಾಧಿಕಾರಿಗಳು ಪ್ರಸ್ತಾವನೆಯನ್ನು ಪರಿಶೀಲಿಸಿ ಕ್ರಮಬದ್ಧವಾಗಿರುವುದನ್ನು ಖಚಿತಪಡಿಸಿಕೊಂಡು ಭೂ ಮಾಪನ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯ ಉಪನಿರ್ದೇಶಕರಿಗೆ ಸಲ್ಲಿಸುವುದು.
8) ಭೂ ದಾಖಲೆಗಳ ಉಪನಿರ್ದೇಶಕರು ಗ್ರಾಮಠಾಣಾ ವಿಸ್ತರಣೆಯ ಪ್ರಸ್ತಾವನೆಯನ್ನು ಪರಿಶೀಲಿಸಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವುದು.
9) ತದನಂತರ ಪ್ರಸ್ತಾವನೆಯನ್ನು ಪರಿಶೀಲಿಸಿ ಜಿಲ್ಲಾಧಿಕಾರಿಗಳು ಗ್ರಾಮಠಾಣಾ ವಿಸ್ತರಣೆ ಬಗ್ಗೆ ಆದೇಶ ಹೊರಡಿಸಲು ಕ್ರಮ ವಹಿಸುವುದು.
10) ಒಂದು ವೇಳೆ ಸರ್ವೆಯರ್‌ಗಳ ಲಭ್ಯತೆ ಇಲ್ಲದಿದ್ದಲ್ಲಿ ಖಾಸಗಿ ಸರ್ವೆಯರ್‌ಗಳನ್ನು ನೇಮಿಸಿಕೊಳ್ಳುವುದು.

(ಡಾ: ಎಸ್. [illegible])
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

(ಡಾ ಇ.ವಿ. ರಮಣರೆಡ್ಡಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಕಂದಾಯ ಇಲಾಖೆ.

ಗೆ:
1) ಆಯುಕ್ತರು, ಭೂ ಮಾಪನ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು
2) ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು.
3) ಎಲ್ಲಾ ಪ್ರಾದೇಶಿಕ ಆಯುಕ್ತರು.
4) ಎಲ್ಲಾ ಜಿಲ್ಲಾಧಿಕಾರಿಗಳು.
5) ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
6) ಎಲ್ಲಾ ಉಪವಿಭಾಗಾಧಿಕಾರಿಗಳು,
7) ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು,
8) ಎಲ್ಲಾ ತಹಶೀಲ್ದಾರ್‌ಗಳು
9) ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.

ಪ್ರತಿ:
1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು.
2. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಯವರು
3. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ, ಗ್ರಾಅಪ ಇಲಾಖೆ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ.
5. ಎಲ್ಲಾ ಸರ್ಕಾರದ ಅಧೀನ/ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ.
6. ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ/ವೆಬ್‌ಸೈಟ್, ಗ್ರಾಅಪ ಮತ್ತು ಪಂ.ರಾಜ್ ಇಲಾಖೆ.
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

# KARNATAKA ACT NO.20 OF 1985

## THE KARNATAKA ZILLA PARISHADS, TALUK PANCHAYAT SAMITHIS, MANDAL PANCHAYATS AND NYAYA PANCHAYATS ACT, 1983

## AND

## VARIOUS RULES FRAMED UNDER THE KARNATAKA ZILLA PARISHADS, TALUK PANCHAYATS SAMITHIS, MANDAL PANCHAYATS AND NYAYA PANCHAYATS ACT, 1983

1987

**116. Taxes and Fees** – (1) Every Mandal Panchayat shall in such manner and subject to such exemptions as may be prescribed and not exceeding the maximum rate specified in Schedule 1, levy a tax upon buildings whether or not the lands on which the buildings are constructed are subject to payment of agricultural assessment, and upon lands which are not subject to payment of agricultural assessment within the limits of the mandal.

(2) Where an owner of the building or land has left the Mandal or cannot otherwise be found, the occupier of such building or land shall be liable for the tax leviable under sub-section (1) on such owner.

(3) A Mandal Panchayat may levy all or any of the following taxes or fees at such rates as the Mandal Panchayat may by bye-laws determine not exceeding the maximum specified in schedule I and in such manner and subject to exemptions as may be prescribed, namely:-

(i) a tax on entertainments other than cinematograph shows;

(ii) a tax on vehicles other than motor vehicles;

(iii) a fee on bus stands;

(iv) a fee on markets;

(v) a tax on mineral rights;

Provided that no fee on bus stands shall be levied unless a bus-stand with adequate facilities for travellers is established and the previous sanction of the Zilla Parishad for such levy is obtained.

(4) A Mandal Panchayat may levy. -

(a) a water rate for supply of water by the Mandal Panchayat ; and

(b) a fee for grazing cattle on the grazing land belonging to or vested in the Mandal Panchayat, at such rates, in such manner and subject to such exemptions as the Mandal Panchayat may by bye-laws determine.

(5) (a) A Mandal Panchayat may levy a duty on transfers of immovable property (hereinafter in this section referred to as transfer duty). Such duty shall be levied in the form of a surcharge on the duty imposed by the Karnataka Stamp Act, 1957, on instruments of

sale, gift, mortgage, exchange and lease in perpetuity of immovable property situated within the limits of Mandal Panchayats at a rate not exceeding three per cent on, as the case may be, the amount of the consideration for the sale, the value of the property in the case of a gift, or the amount secured by the mortgage, the value of the property of the greater value in the case of exchange, or the value of the rent for the first ten years in the case of a lease, as set forth in the instruments.

Provided that no such duty is leviable in respect of mortgage where the amount secured by a mortgage does not exceed rupees two thousand :

Provided further that no transfer duty shall be chargeable. –

(i) in respect of any instrument executed by or on behalf of or in favour of the Government in cases where but for this exemption the Government would be liable to pay the transfer duty under this sub-section in respect of such instrument, or

(ii) in respect of any instrument exempt from stamp duty under the Karnataka Stamp Act, 1957.

(b) On the introduction of the transfer duty, section-26 of the Karnataka Stamp Act, 1957 shall be read as if it specifically required the particulars to be set forth separately in respect of the property situated within and without the area under the jurisdiction of the Mandal Panchayat and section-61 of the said Act shall be read as if it referred to the Mandal Panchayat as well as the Government.

(c) The Government may make rules for regulating the collection of transfer duty, the payment thereof to the Mandal Panchayat and the deduction of any expenses incurred by the Government in the collection thereof.

(6) The Zilla Parishad may, after giving an opportunity to the Mandal Panchayat to be heard, by notification suspend the levy or imposition of any tax or fees under the preceding sub-sections or reduce the rate at which any such tax or fee is levied or imposed and may at any time rescind such suspension or reduction.

***********

# ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿ

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

2ನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 70

ಸಂಖ್ಯೆ : ಇ-ಸ್ವತ್ತು/ಸುಸಸ/ವರದಿ/2017-18 ದಿನಾಂಕ: 05.02.2018

ರವರಿಗೆ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001.

ಮಾನ್ಯರೆ,

ವಿಷಯ : ಬೆಂಗಳೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಗ್ರಾಮ ಪಂಚಾಯಿತಿಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಸರ್ಕಾರದ ನಿಯಮಗಳನ್ನು ಪಾಲಿಸದೆ ಸ್ವತ್ತುಗಳಿಗೆ ನಮೂನೆ-9 ಮತ್ತು ನಮೂನೆ-11ಬಿ ವಿತರಿಸಿರುವ ಬಗ್ಗೆ – ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿಯು ವರದಿ ಸಲ್ಲಿಸುವ ಕುರಿತು.

ಉಲ್ಲೇಖ :
1. ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 690 ಗ್ರಾಪಂಅ 2015 ಬೆಂಗಳೂರು, ದಿನಾಂಕ : 05-04-2017.
2. ಈ ಸಮಿತಿ ಕಚೇರಿ ಪತ್ರ ಸಂಖ್ಯೆ : ಇ-ಸ್ವತ್ತು/ಸುಸಸ/21/2017-18 ದಿನಾಂಕ : 31.08.2017.
3. ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 690 ಗ್ರಾಪಂಅ 2015 ಬೆಂಗಳೂರು, ದಿನಾಂಕ : 12-10-2017.

***

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ-1ರಲ್ಲಿ ನಮೂದಿಸಲಾದ ಸರ್ಕಾರದ ಆದೇಶದ ಮೂಲಕ ಶ್ರೀ ಕೆ.ಎಚ್.ಗೋಪಾಲಕೃಷ್ಣೇಗೌಡ, ಭಾ.ಆ.ಸೇ(ನಿವೃತ್ತ) ಇವರ ಅಧ್ಯಕ್ಷತೆಯಲ್ಲಿ ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿಯನ್ನು ರಚಿಸಿ ಸರ್ಕಾರದ ಆದೇಶವಾದ 03 ತಿಂಗಳಲ್ಲಿ ವರದಿ ನೀಡಲು ಸೂಚಿಸಲಾಗಿತ್ತು. ಅನಂತರ ಆಡಳಿತಾತ್ಮಕ ಕಾರಣಗಳಿಂದಾಗಿ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಲು ನೀಡಲಾದ ಕಾಲಾವಧಿಯನ್ನು ದಿನಾಂಕ: 31.12.2017 ರವರೆಗೆ ವಿಸ್ತರಿಸಿ ಉಲ್ಲೇಖ-3 ರಲ್ಲಿನ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶದಲ್ಲಿ ಸೂಚಿಸಿದ ಪ್ರಕಾರ ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿಯು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ, ಆಯ್ದ ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ ಕರ್ನಾಟಕ ರಾಜ್ಯದಲ್ಲಿನ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಕಾನೂನು ಬಾಹಿರವಾಗಿ ನಮೂನೆ-11ಬಿ ವಿತರಿಸಿ ಅನಂತರ ರದ್ದುಪಡಿಸಿದ ಸರ್ಕಾರಿ ಆದೇಶದಿಂದ ಬಾಧಿತರಾದವರಿಗೆ ನ್ಯಾಯ ದೊರಕಿಸಲು ಇರುವ ಮಾರ್ಗೋಪಾಯಗಳು ಮತ್ತು ಇ-ಸ್ವತ್ತು ಅನುಷ್ಠಾನಕ್ಕೆ ಹೊರಡಿಸಲಾಗಿರುವ ಮಾರ್ಗಸೂಚಿ ಕ್ಷೇತ್ರದ ಮಟ್ಟದಲ್ಲಿ ಅನುಷ್ಠಾನಗೊಳ್ಳುವ ಹಂತದಲ್ಲಿ ಸಮಸ್ಯೆಗಳ ಅಧ್ಯಯನ ನಡೆಸಿ ವರದಿಯನ್ನು ಸಿದ್ಧಪಡಿಸಿದೆ. ಸದರಿ ವರದಿಯ 9 ಪ್ರತಿಗಳನ್ನು ಈ ಪತ್ರದೊಂದಿಗೆ ತಮಗೆ ಸಲ್ಲಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,

(ರಮೇಶ್.ಡಿ.ಬಿ.)
ಸಮನ್ವಯ ಅಧಿಕಾರಿ
ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿ
ಹಾಗೂ ಸಹಾಯಕ ನಿರ್ದೇಶಕರು
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

ಪ್ರತಿಯನ್ನು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ ಕಳುಹಿಸುತ್ತಾ ವರದಿಯನ್ನು ಮಾನ್ಯ ಸಚಿವರ ಗಮನಕ್ಕೆ ತರುವಂತೆ ಕೋರಲಾಗಿದೆ.

# ಕರ್ನಾಟಕ ರಾಜ್ಯದ ಗ್ರಾಮ ಪಂಚಾಯಿತಿಗಳ

# ವ್ಯಾಪ್ತಿಯಲ್ಲಿ ಇ-ಸ್ವತ್ತು ಮಾರ್ಗಸೂಚಿ

# ಅನುಷ್ಠಾನ ಹಂತದ ಸಮಸ್ಯೆಗಳ

# ಅಧ್ಯಯನಕ್ಕಾಗಿ ರಚಿಸಲಾದ

# ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿ

# ವರದಿ

**2018**

# ವಿಷಯ ಸೂಚಿ


| ಕ್ರ. ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 01. | ಭಾಗ – I : ಪೀಠಿಕೆ | 01–02 |
| 02. | ಭಾಗ – II : ರಾಜ್ಯದ ವಿವಿಧ ಪಂಚಾಯಿತಿ ವ್ಯಾಪ್ತಿಯಲ್ಲಿ ಕಂಡುಬಂದ ಹತ್ತು ಹಲವು ಆಡಳಿತಾತ್ಮಕ ನ್ಯೂನತೆ/ತೊಡಕುಗಳು/ಸಮಸ್ಯೆಗಳು | 03–05 |
| 03. | ಭಾಗ – III : ಸಮಸ್ಯೆಗಳ ಸ್ವರೂಪ, ವ್ಯಾಪ್ತಿ, ಸ್ಥೂಲ ಪರಿಚಯ | 06–15 |
| 04. | ಭಾಗ – IV : ತಕ್ಷಣ ಆಗಬೇಕಾದ ಆಡಳಿತಾತ್ಮಕ ಹಾಗೂ ತಾಂತ್ರಿಕ ಸುಧಾರಣೆಗಳು | 16–19 |
| 05. | ಭಾಗ – V : ಈ ಸಮಸ್ಯೆಗಳಿಗೆ ಅಂತಿಮವಾದ ದೀರ್ಘಕಾಲದ ಪರಿಹಾರ ಮಾರ್ಗಗಳು | 20–25 |
| 06. | ಅನುಬಂಧ – ಅ : ಭೇಟಿ ನೀಡಿದ ಜಿಲ್ಲಾ ಪಂಚಾಯಿತಿಗಳ ಹಾಗೂ ತಾಲ್ಲೂಕು ಪಂಚಾಯಿತಿಯ ವಿವರಗಳು | 26–29 |
| 07. | ಅನುಬಂಧ – ಆ : ಭೇಟಿ ನೀಡಿದ ಗ್ರಾಮ ಪಂಚಾಯಿತಿಗಳ ವಿವರಗಳು | 30–34 |
| 08. | ಅನುಬಂಧ – ಇ : ಕಂದಾಯ ಗ್ರಾಮ ರಚನೆ ವಿವರ | 35 |
| 09. | ಅನುಬಂಧ – ಈ : 40 ಕ್ಕಿಂತ ಹೆಚ್ಚು ಸದಸ್ಯರು ಇರುವ ಗ್ರಾಮ ಪಂಚಾಯಿತಿಯ ವಿವರ | 36 |
| 10. | ಅನುಬಂಧ – ಉ : 94 'ಸಿ' ರಡಿ ಸ್ವೀಕರಿಸಿದ ಅರ್ಜಿಗಳ ವಿಲೇವಾರಿ ವಿವರ | 37 |
| 11. | ಅನುಬಂಧ – ಊ : ಅರಣ್ಯ ಹಕ್ಕು ಕಾಯ್ದೆಯಡಿ ಬಾಕಿ ಇರುವ ಅರ್ಜಿಗಳು | 38 |
| 12. | ಅನುಬಂಧ – ಋ : The Karnataka Gram Swaraj and Panchayat Raj Act, 1993, Section-199 | 39–41 |
| 13. | ಅನುಬಂಧ – ೠ : ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಮತ್ತು ಕಂದಾಯ ಇಲಾಖೆ ಜಂಟಿಯಾಗಿ ಹೊರಡಿಸಿರುವ ಸುತ್ತೋಲೆ ಸಂಖ್ಯೆ : ಗ್ರಾಅಪ : 441 : ಗ್ರಾಪಂಅ : 2016(ಭಾಗ-3) ದಿನಾಂಕ : 28.10.2016. | 42–43 |
| 14. | ಅನುಬಂಧ – ಎ : The Karnataka Zilla parishad, Taluk panchayat samithis, Mandal Panchayats and Nyaya Panchayats Act, 1983 Section-116 | 44–46 |

# ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿ

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ

2ನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 70

## ಭಾಗ – I

### ಪೀಠಿಕೆ

ದಿನಾಂಕ 14.06.2013 ರಿಂದ ಜಾರಿಗೆ ಬರುವಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು-2006ಕ್ಕೆ ತಿದ್ದುಪಡಿಯನ್ನು ತಂದು ಇ-ಸ್ವತ್ತು ತಂತ್ರಾಂಶ ರೂಪಿಸಲಾಗಿರುತ್ತದೆ. ಈ ತಂತ್ರಾಂಶದ ಅನುಷ್ಠಾನದಲ್ಲಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ, ದೋಷ ಹಾಗೂ ಅನಾನುಕೂಲತೆಗಳ ಕುರಿತು ಇ-ಸ್ವತ್ತು ನಿರ್ವಹಣೆಗೆ ಹೊರಡಿಸಲಾಗಿರುವ ಮಾರ್ಗಸೂಚಿಗಳನ್ನು, ಕ್ಷೇತ್ರ ಮಟ್ಟದಲ್ಲಿ ಅನುಷ್ಠಾನಗೊಳಿಸುವ ಹಂತದಲ್ಲಿ ಎದುರಾಗುವ ವಾಸ್ತವಿಕ ಸಮಸ್ಯೆಗಳನ್ನು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಅಲ್ಲದೆ ರಾಜ್ಯದ ವಿವಿಧ ಅನ್ಯ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಕ್ಷೇತ್ರ ಮಟ್ಟದ ಸಮಸ್ಯೆಗಳನ್ನು ಅಧ್ಯಯನ ಮಾಡಿ ಅವಶ್ಯವಿರುವ ಪರಿಹಾರಗಳ ಬಗ್ಗೆ ಸಲಹೆ ನೀಡುವ ಉದ್ದೇಶಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ:690:ಗ್ರಾಪಂಅ:2015 ಬೆಂಗಳೂರು ದಿನಾಂಕ 05.04.2017 ರ ಅನ್ವಯದಲ್ಲಿ ಈ ಸಮಿತಿಯು ರಚನೆಗೊಂಡಿರುತ್ತದೆ. ಸಮಿತಿಗೆ ಅವಶ್ಯಕ ಕಚೇರಿ, ಕಟ್ಟಡ ಮತ್ತು ಸಿಬ್ಬಂದಿಗಳನ್ನು ಒದಗಿಸುವುದು ತಡವಾದ ಕಾರಣ ದಿನಾಂಕ: 12.10.2017 ರ ಸಮ ಸಂಖ್ಯೆಯ ಸರ್ಕಾರದ ಆದೇಶದಲ್ಲಿ ಸಮಿತಿಯ ಅವಧಿಯನ್ನು ದಿನಾಂಕ : 31.12.2017 ರವರೆಗೆ ವಿಸ್ತರಿಸಲಾಗಿದೆ. ಅಂತೆಯೇ ದಿನಾಂಕ : 09.06.2017ರಿಂದ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ಕಾರ್ಯನಿರ್ವಹಿಸಲು ಈ ಸಮಿತಿಯು ಆರಂಭಿಸಿರುತ್ತದೆ.

ಸಮಿತಿಯು ಪರಿಶೀಲಿಸಿ, ವರದಿ ಸಲ್ಲಿಸಬೇಕಾದ ಅಂಶಗಳು ಈ ಕೆಳಕಂಡಂತಿವೆ:

1. ನಿವೃತ್ತ IAS ಅಧಿಕಾರಿ ಶ್ರೀ ಆರ್.ಬಿ. ಅಗವಾನೆ ರವರ ನೇತೃತ್ವದ ಸಮಿತಿಯು ವರದಿ ನೀಡಿದಂತೆ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕಿನ 05 (ಐದು) ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾನೂನುಬಾಹಿರವಾಗಿ ನಮೂನೆ-11(ಬಿ) ವಿತರಿಸಿರುವುದಾಗಿ ವರದಿ ಮಾಡಿರುವ ಹಿನ್ನೆಲೆಯಲ್ಲಿ ಅಕ್ರಮಗಳನ್ನೆಲ್ಲಾ ಪತ್ತೆಹಚ್ಚಿ ಈ ಅಕ್ರಮದಿಂದ ಭಾದಿತರಾದವರಿಗೆ ನ್ಯಾಯ ದೊರಕಿಸಲು ಅವಶ್ಯ ಮಾರ್ಗೋಪಾಯಗಳನ್ನು ಸೂಚಿಸುವುದು.

2. ಇ-ಸ್ವತ್ತು ಅನುಷ್ಠಾನಕ್ಕೆ ಹೊರಡಿಸಲಾಗಿರುವ ಮಾರ್ಗಸೂಚಿಗಳು ಕ್ಷೇತ್ರ ಮಟ್ಟದಲ್ಲಿ ಅನುಷ್ಠಾನಗೊಳ್ಳುವ ಹಂತದಲ್ಲಿ ಎದುರಾಗುವ ವಾಸ್ತವಿಕ ಸಮಸ್ಯೆಗಳನ್ನು ಅಧ್ಯಯನಮಾಡಿ ಅವಶ್ಯವಿರುವ ಮಾರ್ಪಾಟುಗಳಿಗೆ ಸಲಹೆ ನೀಡುವುದು. ಇದಕ್ಕೆ ಪೂರಕವಾಗಿ ಆಯ್ದ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಕ್ಷೇತ್ರ ಮಟ್ಟದ ಸಮಸ್ಯೆಗಳನ್ನು ಅಧ್ಯಯನ ಮಾಡುವುದು.
3. ಇ-ಸ್ವತ್ತು ಅನುಷ್ಠಾನದಲ್ಲಿ ಮಾರ್ಗಸೂಚಿ ಉಲ್ಲಂಘನೆ ಮಾಡಿ ಅಕ್ರಮವೆಸಗುವ ಪ್ರಕರಣಗಳು ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ ಹಾಗು ಮೈಸೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ನಡೆದಿವೆ ಹಾಗೂ ರಾಜ್ಯದ ಎಲ್ಲಾ ಜಿಲ್ಲೆಗಳ ಆಯ್ದ ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ಪರಿಶೀಲಿಸಿ, ವರದಿ ನೀಡುವುದು.

ಸರ್ಕಾರದ ಆದೇಶಾನುಸಾರ ಸಮಿತಿಯು ರಾಜ್ಯದ ಕರಾವಳಿ, ಮಲೆನಾಡು, ಮುಂಬೈ ಕರ್ನಾಟಕ, ಹೈದರಾಬಾದ್ ಕರ್ನಾಟಕ ಮತ್ತು ಹಳೆ ಮೈಸೂರು ಭಾಗಗಳಲ್ಲಿ ವ್ಯಾಪಕವಾಗಿ ಸಂಚರಿಸಿ 24-ಜಿಲ್ಲೆಗಳಲ್ಲಿ (ವಿವರ ಅನುಬಂಧ-ಅ) ಆಯ್ದ ಪ್ರತಿನಿಧಿಕ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಗ್ರಾಮ ಪಂಚಾಯಿತಿಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ/ಡಾಟಾ ಎಂಟ್ರಿ ಆಪರೇಟರ್/ವಿಷಯ ನಿರ್ವಾಹಕರು ಅಲ್ಲದೆ ತಾಲ್ಲೂಕು ಪಂಚಾಯಿತಿಗಳ ಸಹಾಯಕ ನಿರ್ದೇಶಕರು ಹಾಗೂ ಕಾರ್ಯನಿರ್ವಹಣಾ ಅಧಿಕಾರಿ ಮತ್ತು ಜಿಲ್ಲಾ ಪಂಚಾಯಿತಿಗಳ ಡಿಪಿಎಂಯು / ಉಪಕಾರ್ಯದರ್ಶಿ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆಗಳನ್ನು ಆಯೋಜಿಸಿ ಅಭಿಪ್ರಾಯ ಸಂಗ್ರಹಣೆ ಮಾಡಲಾಗಿರುತ್ತದೆ. ವಿವಿಧ ಜಿಲ್ಲೆಗಳಲ್ಲಿ ಇ-ಸ್ವತ್ತು ತಂತ್ರಾಂಶದ ಅಳವಡಿಕೆಯಲ್ಲಿ ಆಗುತ್ತಿರುವ ಆಡಳಿತಾತ್ಮಕ ಹಾಗೂ ತಾಂತ್ರಿಕ ಸಮಸ್ಯೆಗಳನ್ನು ಅರಿಯಲು ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ಗ್ರಾಮ ಪಂಚಾಯತಿಯ ಅಧ್ಯಕ್ಷರು/ಸದಸ್ಯರು/ಸಿಬ್ಬಂದಿಗಳನ್ನು ಸಂಪರ್ಕಿಸಿ ಅಭಿಪ್ರಾಯ ಪಡೆದು ಅವರು ಸೂಚಿಸಿರುವ ಪರಿಹಾರ ಮಾರ್ಗೋಪಾಯಗಳನ್ನು ದಾಖಲಿಸಿಕೊಳ್ಳಲಾಗಿದೆ.

ಅಲ್ಲದೆ ಸರ್ಕಾರದ ಆದೇಶದಲ್ಲಿ ಅಡಕವಾಗಿರುವ ಬೆಂಗಳೂರು ನಗರ ಜಿಲ್ಲೆಯ ಐದೂ ಗ್ರಾಮ ಪಂಚಾಯಿತಿಗಳಿಗೆ ಪೂರ್ವಭಾವಿ ತಿಳುವಳಿಕೆ ನೀಡಿ ಖಾತೆ ರದ್ದುಪಡಿಕೆಯಿಂದ ಬಾಧಿತರಾದವರು ಸಮಿತಿಯ ಮುಂದೆ ಹಾಜರಾಗಿ ತಮ್ಮ ಅಹವಾಲನ್ನು ಸಲ್ಲಿಸಲು ಅವಕಾಶ ನೀಡಿ ಸಾರ್ವತ್ರಿಕ ನೋಟೀಸನ್ನು ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ಪ್ರಕಟಿಸಿ ನಿಗದಿತ ದಿನಾಂಕದಂದು ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಗ್ರಾಮ ಪಂಚಾಯಿತಿ ಪದಾಧಿಕಾರಿಗಳ/ಸಿಬ್ಬಂದಿ ಸಮ್ಮುಖದಲ್ಲಿ ಸಂತ್ರಸ್ತ ಸಾರ್ವಜನಿಕರ ಅಹವಾಲುಗಳನ್ನು ಆಲಿಸಿ, ಮನವಿಗಳನ್ನು ಸ್ವೀಕರಿಸಿದೆ. ಒಟ್ಟಾರೆ ಸಮಿತಿಯು 36 ಗ್ರಾಮಪಂಚಾಯಿತಿಗಳಿಗೆ (ವಿವರ ಅನುಬಂಧ-ಆ) ಭೇಟಿ ನೀಡಿ ಸ್ಥಳೀಯ ಸಮಸ್ಯೆಗಳ ಕುರಿತು ಸಾರ್ವಜನಿಕರೂ ಸೇರಿದಂತೆ ಗ್ರಾಮ ಪಂಚಾಯಿತಿಯ ಪದಾಧಿಕಾರಿಗಳ/ಸದಸ್ಯರ/ಸಿಬ್ಬಂದಿಗಳಿಂದ ಅಭಿಪ್ರಾಯ ಸಂಗ್ರಹ ಮಾಡಲಾಗಿರುತ್ತದೆ.

************

# ಭಾಗ –II

ರಾಜ್ಯದ ವಿವಿಧ ಜಿಲ್ಲಾ ಪಂಚಾಯಿತಿಗಳ ಅಧೀನದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಂಡು ಬಂದ ಆಡಳಿತಾತ್ಮಕ ನ್ಯೂನತೆ/ತೊಡಕುಗಳು/ಸಮಸ್ಯೆಗಳು ಈ ಕೆಳಗಿನಂತಿವೆ :

1. ಕೆಲವು ದಶಕಗಳಿಂದ ಜನವಸತಿ ಇರುವ ನೆಲೆಗಳನ್ನು ಇನ್ನೂ ಕಂದಾಯ ಗ್ರಾಮಗಳೆಂದು ಘೋಷಿಸಿ ಗ್ರಾಮಠಾಣಾ ವ್ಯಾಪ್ತಿಯನ್ನು ನಿಗದಿಪಡಿಸದಿರುವ ಅನೇಕ ಪ್ರಕರಣಗಳು ಬಾಕಿ ಇರುವುದು ಕಂಡು ಬಂದಿದೆ. ಉದಾ :- ಲಂಬಾಣಿ ತಾಂಡಾ, ಗೊಲ್ಲರಹಟ್ಟಿ, ನಾಯಕರ ದೊಡ್ಡಿ, ಕ್ಯಾಂಪ್, ಪುನರ್ವಸತಿ ಕೇಂದ್ರಗಳು. (ವಿವರ ಅನುಬಂಧ–ಅ).
2. ಕರ್ನಾಟಕ ಗ್ರಾಮ ಸ್ವರಾಜ್ಯ ಕಾಯಿದೆಯಲ್ಲಿ ನಿಗದಿ ಪಡಿಸಿರುವ ಜನಸಂಖ್ಯಾ ಮಿತಿಮೀರಿದ ಅನೇಕ ಗ್ರಾಮ ಪಂಚಾಯಿತಿಗಳನ್ನು (ವಿವರ ಅನುಬಂಧ–ಆ) ಪಟ್ಟಣ/ನಗರ ಸ್ಥಳೀಯ ಸಂಸ್ಥೆಗಳನ್ನಾಗಿ ಪರಿವರ್ತಿಸದೆ ಗ್ರಾಮ ಪಂಚಾಯಿತಿಗಳನ್ನಾಗಿ ಉಳಿಸಿಕೊಂಡಿರುವುದು ಉದಾ :- ಕೂರ್ಗಳ್ಳಿ, ಹಿನಕಲ್, ಮೈಸೂರು ತಾಲ್ಲೂಕು. ಮೈಸೂರು ಜಿಲ್ಲೆ. ಸದಸ್ಯರ ಸಂಖ್ಯೆ 69, 61. ಜನಸಂಖ್ಯೆ 50,000 ಮೀರಿದೆ. ಕೃಷಿ ಜಮೀನು ಪೂರ್ಣ ಭೂ ಸ್ವಾಧೀನ ಅಥವಾ ಪರಿವರ್ತನೆಯಾಗಿದೆ.
3. ದೊಡ್ಡ ಗ್ರಾಮವನ್ನು ವಿಭಜಿಸಿ ಎರಡು ಪಂಚಾಯಿತಿಗಳನ್ನು ರಚಿಸಿ ಜನಸಂಖ್ಯೆ ಮಿತಿಮೀರಿದ್ದರೂ ಎರಡೂ ಪಂಚಾಯಿತಿಗಳನ್ನು ಗ್ರಾಮ ಪಂಚಾಯಿತಿಗಳನ್ನಾಗಿ ಮುಂದುವರಿಸಿರುವುದು. ಉದಾ :- ಗೋಗಿ (ಪೇಠ), ಗೋಗಿ (ಕೊಂಡಾ) ಗ್ರಾಮ ಪಂಚಾಯಿತಿಗಳು, ಶಹಾಪೂರ್ ತಾಲ್ಲೂಕು, ಯಾದಗಿರಿ ಜಿಲ್ಲೆ.
4. ಗ್ರಾಮಠಾಣಾ ಆಸ್ತಿಗಳನ್ನು ಗ್ರಾಮ ಪಂಚಾಯಿತಿಗಳು ಭೂಮಾಪನಾ ಇಲಾಖೆಯಿಂದ ಸರ್ವೆ ಅಳತೆಯಾಗಿ ಸಂರಕ್ಷಿಸಿಕೊಳ್ಳದಿರುವುದು.
5. ಈ ಹಿಂದೆ ಅಸ್ತಿತ್ವದಲ್ಲಿದ್ದ ಪಟ್ಟಣ ಪಂಚಾಯಿತಿ/ಅಧಿಸೂಚಿತ ಪಟ್ಟಣ ಪ್ರದೇಶಗಳನ್ನು ಪುನಃ ಗ್ರಾಮ ಪಂಚಾಯಿತಿಗಳನ್ನಾಗಿ ಪರಿವರ್ತಿಸಿರುವುದು. ಉದಾ :- ಕೊಡಗು ಜಿಲ್ಲೆಯ ಕುಶಾಲನಗರ, ಪೊನ್ನಂಪೇಟೆ. ಸುಂಟಿಕೊಪ್ಪ, ಗೋಣಿಕೊಪ್ಪಲು. ಶನಿವಾರ ಸಂತೆ ಇತ್ಯಾದಿ.
6. ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ಮನೆಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿರುವವರು ಕಂದಾಯ ಇಲಾಖೆಗೆ ಸಕ್ರಮ ಕೋರಿ ಭೂ ಕಂದಾಯ ಕಾಯಿದೆಯ ಕಲಂ 94ಸಿ ಅಡಿಯಲ್ಲಿ ಸಲ್ಲಿಸಿರುವ ಸಾವಿರಾರು ಅರ್ಜಿಗಳು ಈ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬಾಕಿ ಇರುವುದು. (ವಿವರ ಅನುಬಂಧ–ಇ).

7. ಕಾಯ್ದಿರಿಸಿದ ಅರಣ್ಯ ಜಮೀನಿನಲ್ಲಿ ದಶಕಗಳಿಂದ ಮನೆ ಕಟ್ಟಿಕೊಂಡು ವಾಸಿಸುತ್ತಿರುವ ಬುಡಕಟ್ಟು ಜನಾಂಗ, ಇತರರು ವಸತಿ ಹಕ್ಕು ಕೋರಿ ಅರಣ್ಯ ಹಕ್ಕು ಕಾಯಿದೆ ಅಡಿಯಲ್ಲಿ ಸಲ್ಲಿಸಿರುವ ನೂರಾರು ಅರ್ಜಿಗಳು ವಿವಿಧ ಜಿಲ್ಲೆಗಳಲ್ಲಿ ಬಾಕಿ ಇರುವುದು.

(ವಿವರ ಅನುಬಂಧ–ಉ)

8. ಮಲೆನಾಡು/ಪಶ್ಚಿಮ ಘಟ್ಟ ಪ್ರದೇಶದಲ್ಲಿ ಜನವಸತಿಗೆಂದು ಗ್ರಾಮಠಾಣಾಕ್ಕಾಗಿ ಆಯ್ಕೆ ಮಾಡಿ ಮೀಸಲಿರಿಸಿರುವ ಖಾನೇಷುಮಾರಿ ಜಮೀನಿನಲ್ಲಿ ನಿವೇಶನಗಳನ್ನು ವಿಂಗಡಿಸಿ ಅಳತೆ ಮಾಡಿ ವಾಸಿಸಲು ಅನುವು ಮಾಡಿ ಕೊಟ್ಟಿದ್ದರೂ ಹಕ್ಕು ಪತ್ರಗಳನ್ನು ಹಂಚಿಕೆ ಮಾಡದೆ ಹೋದದ್ದು.

9. ಕಾನು, ಸೊಪ್ಪಿನ ಬೆಟ್ಟ, ದೇವರಕಾಡು, ಜುಮ್ಮಾ, ಖಾನೆ ಇತ್ಯಾದಿ ಜಮೀನುಗಳಲ್ಲಿ ದಶಕಗಳಿಂದ ಮನೆ ಕಟ್ಟಿಕೊಂಡು ವಾಸಿಸುತ್ತಿರುವವರಿಗೆ ಸಕ್ರಮಗೊಳಿಸಲು ಯಾವುದೇ ಕಾಯಿದೆಯಲ್ಲಿ ಅವಕಾಶ ಕಲ್ಪಿಸದೇ ಇರುವುದು.

10. ಇ–ಸ್ವತ್ತು ದಾಖಲಿಸಲು ಪಂಚಾಯಿತಿಯಿಂದ ರವಾನೆಯಾದ ಪ್ರಕರಣಗಳನ್ನು ಕಂದಾಯ ಇಲಾಖೆಯ ಭೂ ಮಾಪಕರು ನೆಪ ಹುಡುಕಿ ವಿಳಂಬ ಮಾಡುತ್ತಿರುವುದು.

11. ಇ–ಸ್ವತ್ತು ತಂತ್ರಾಂಶ ಬಳಕೆ/ಅನುಷ್ಠಾನದ ಬಗ್ಗೆ ಎಲ್ಲಾ ಗ್ರಾಮ ಪಂಚಾಯಿತಿಗಳ ವಿವಿಧ ಹಂತದ ಸಿಬ್ಬಂದಿಗೆ ಪೂರ್ಣವಾಗಿ ತರಬೇತಿ ನೀಡದಿರುವುದು.

12. ಇ–ಸ್ವತ್ತು ತಂತ್ರಾಂಶದಲ್ಲಿ ದತ್ತಾಂಶ ಅಪ್ಲೋಡಿಸಲು ಈ ಹಿಂದೆ ಲಭ್ಯವಿದ್ದ ಅನಿರ್ದಿಷ್ಟ ಕಾಲಾವಧಿಯನ್ನು ತೀರಾ ಮಿತಿಗೊಳಿಸಿರುವುದು.

13. ಈ ಹಿಂದೆ ಪಂಚತಂತ್ರಕ್ಕೆ ದಾಖಲಾಗದ ಆಸ್ತಿಗಳನ್ನು ದಾಖಲೆಗೆ ತರಲು ಕಾಲಾವಕಾಶ ನೀಡದೆ ಹೋಗಿರುವುದು.

14. ಇ–ಸ್ವತ್ತು ತಂತ್ರಾಂಶದಲ್ಲಿ ಹೆಚ್ಚುಹೆಚ್ಚಾಗಿ ಅಪ್ಲೋಡಿಸಿದ ದತ್ತಾಂಶ ಉಳಿಸಿಕೊಳ್ಳುವಂತೆ **'Save'** ಆಯ್ಕೆಯನ್ನು ಒದಗಿಸದಿರುವುದು.

15. ಕೆಲವು ದತ್ತಾಂಶ ಅಪ್ಲೋಡಿಸಲು ಕ್ಷೇತ್ರ ಸ್ಥಳಾವಕಾಶ ಕಡಿಮೆ ಇರುವುದು. ಉದಾ :- ವಸಂತ ನರಸಾಪುರ ಕೈಗಾರಿಕಾ ಪ್ರದೇಶ ತುಮಕೂರು ಜಿಲ್ಲೆಯಲ್ಲಿ ಕೈಗಾರಿಕಾ ನಿವೇಶನದ ವಿಸ್ತೀರ್ಣ ಚ.ಮೀ.ಗಳಲ್ಲಿ ಅಪ್ಲೋಡಿಸಲು ಸಾಕಷ್ಟು ಸ್ಥಳಾವಕಾಶ ತಂತ್ರಾಂಶದಲ್ಲಿ ನೀಡಿಲ್ಲದಿರುವುದು.

16. ಇ–ಸ್ವತ್ತು ಖಾತಾ ದಾಖಲಿಸಲು ಸಲ್ಲಿಸಿದ ಅರ್ಜಿಗಳನ್ನು ಸಕಾಲ ಶೀರ್ಷಿಕೆಯಲ್ಲಿ ಸ್ವೀಕರಿಸಿ ಸ್ವೀಕೃತಿಯನ್ನು ಅರ್ಜಿದಾರರಿಗೆ ತಕ್ಷಣ ನೀಡಲು ಸಾಧ್ಯವಾಗದಿರುವುದು.

17. ಇ–ಸ್ವತ್ತು – ಸಕಾಲ – ಪಂಚತಂತ್ರಗಳಿಗೆ ಪರಸ್ಪರ ಸಂಪರ್ಕ **(link)** ಕಲ್ಪಿಸದಿರುವುದು.

18. ಸೆಕ್ಷ ಮತ್ತು ವಿವಾದಗಳನ್ನು ಇತ್ಯರ್ಥಪಡಿಸಿ ಇ-ಖಾತಾ ದಾಖಲಿಸುವ ಅಂತಿಮ ಅಧಿಕಾರವನ್ನು ಗ್ರಾಮ ಪಂಚಾಯಿತಿಗೆ ನೀಡದಿರುವುದು.

19. ಖಾತೆ ಮಾಡುವಾಗ ಹಕ್ಕು ಹಾಗೂ ಇತರ ಋಣಗಳನ್ನು ದಾಖಲಿಸಲು ಹಾಗೂ ಸಾಲ ನೀಡಿದ ಬ್ಯಾಂಕ್ ಪರವಾಗಿ ಸ್ವತ್ತಿನ ಮೇಲೆ ಖಾತೆದಾರರ ಮಾಲೀಕತ್ವ ಉಳಿಸಿಕೊಂಡು ಭೋಜಾ ಸೃಷ್ಟಿಸಲು ತಂತ್ರಾಂಶದಲ್ಲಿ ಅವಕಾಶವಿಲ್ಲದೇ ಇರುವುದು.

20. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ ಹೊಂದಿದಂತಿರುವ ಅದರದೇ ಒಂದು ಭಾಗದಂತೆ ಕಾಣುವ ಗುಡ್ಡಗಳ ಮೇಲೆ ಅತೀ ವಿಸ್ತಾರದ 1 ಎಕರೆ/2 ಎಕರೆ ಜಮೀನಿನಲ್ಲಿ ಮೋಜುದಾಣ, ಒಂಟಿ ವಾಸದ ಮನೆಗಳನ್ನು ಕಟ್ಟಿರುವುದು ಒಂಟಿ ನಿವೇಶನಗಳನ್ನು ವಿಂಗಡಿಸಿ ಖಾತೆ ಮಾಡಿರುವುದು ಕಂಡು ಬಂದಿದೆ. ಈ ಜಮೀನುಗಳೆಲ್ಲಾ ಬಹುತೇಕ ಅರಣ್ಯ ಪ್ರದೇಶಕ್ಕೆ ಸೇರಿದ ಅಥವಾ ಸರ್ಕಾರಿ ಗೋಮಾಳ, ಖರಾಬು ಇತ್ಯಾದಿ ವರ್ಗೀಕರಣದ ರಾಜ್ಯ ಒಡೆತನದ ಸಾರ್ವಜನಿಕ ಸೊತ್ತುಗಳಾಗಿದ್ದು ಹೇಗೆ ಖಾಸಗಿ ವ್ಯಕ್ತಿಗಳ ಕೈವಶವಾಗಿದೆ ಎಂಬುದರ ಬಗ್ಗೆ ರಾಜ್ಯ ಸರ್ಕಾರ ಕೂಲಂಕಷವಾಗಿ ವಿಚಾರಣೆ ಮಾಡುವ ಅಗತ್ಯವಿದೆ. ವಿಚಾರಣೆಯಲ್ಲಿ ಈ ಆಸ್ತಿಗಳು ಮೂಲತಃ ಅರಣ್ಯ, ಖರಾಬು ಇತ್ಯಾದಿ ರಾಜ್ಯ ಸರ್ಕಾರಕ್ಕೆ ಸೇರಿದ ಆಸ್ತಿಗಳೆಂದು ಕಂಡು ಬಂದಲ್ಲಿ ಸರ್ಕಾರ ಅವುಗಳನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು. ವಿಚಾರಣೆಯಲ್ಲಿ ಖಾಸಗಿಯವರ ಹಕ್ಕು ಸ್ವಾಮ್ಯ ಸಾಬೀತಾದರೂ ಆ ಪ್ರದೇಶದಲ್ಲಿ ಜನವಸತಿ ಸಾಧ್ಯವಿಲ್ಲ. ಅಲ್ಲದೇ ರಾಷ್ಟ್ರೀಯ ಉದ್ಯಾನದ ಪ್ರದೇಶದಲ್ಲಿ ಜನವಸತಿಗೆ ಅವಕಾಶವೂ ಇಲ್ಲ. ಈ ಪ್ರದೇಶಗಳಲ್ಲಿ ವನ್ಯ ಜೀವಿ ಮಾನವ ಸಂಘರ್ಷ ಪ್ರಕರಣಗಳು ಹೆಚ್ಚುತ್ತಿದ್ದು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಸುತ್ತಾ ಇಂತಹ ಬಹು ವಿಸ್ತೀರ್ಣದ ಖಾಸಗಿ ಆಸ್ತಿಗಳನ್ನು ರಾಜ್ಯ ಸರ್ಕಾರ ಭೂ ಸ್ವಾಧೀನಪಡಿಸಿಕೊಂಡು ರಾಷ್ಟ್ರೀಯ ಉದ್ಯಾನ ಹಾಗೂ ಸಾಮಾನ್ಯ ಜನವಸತಿ ಪ್ರದೇಶದ ಮಧ್ಯೆ ಸಂಘರ್ಷ ತಡೆ ಪ್ರದೇಶವನ್ನಾಗಿ ಕಾಯ್ದಿರಿಸುವ ಅವಶ್ಯಕತೆ ಇದೆ.

************

# ಭಾಗ-III

## 1. ಸಮಸ್ಯೆಗಳ ಸ್ವರೂಪ, ವ್ಯಾಪ್ತಿ, ಸ್ಥೂಲ ಪರಿಚಯ

ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿಯು ರಾಜ್ಯದ ಕರಾವಳಿ, ಮಲೆನಾಡು, ಬಯಲುಸೀಮೆ, ಮುಂಬಯಿ ಕರ್ನಾಟಕ, ಹೈದರಾಬಾದ್-ಕರ್ನಾಟಕದ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಸಭೆಗಳನ್ನು ಕರೆದು ಅಭಿಪ್ರಾಯ ಸಂಗ್ರಹಿಸಿದಾಗ ಹೊರ ಹೊಮ್ಮಿದ ಪ್ರಮುಖ ಸಮಸ್ಯಾತ್ಮಕ ಅಂಶಗಳು ಈ ಮುಂದಿನಂತಿವೆ.

1. ಕರಾವಳಿ ಜಿಲ್ಲೆಗಳಲ್ಲಿ ಇತ್ತೀಚೆಗೆ ಜಾರಿಗೆ ಬಂದಿರುವ ಕೇಂದ್ರದ ಸಿಆರ್‌ಝಡ್ (CRZ) ಕರಾವಳಿ ನಿಷೇಧಿತ ವಲಯದ ಕಾನೂನು. ಈಗಾಗಲೇ ಸಮುದ್ರ ತೀರದಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಿರುವವರಿಗೆ ಪ್ರಮುಖವಾಗಿ ಮೀನುಗಾರಿಕೆ ಉದ್ಯೋಗ ಅವಲಂಬಿಸಿರುವ ಕುಟುಂಬಗಳಿಗೆ ವಾಸದ ಮನೆ ಹಕ್ಕನ್ನು ದಾಖಲಿಸಲು ಅಡ್ಡ ಬರುತ್ತಿದೆ ಎಂಬುದು ಗ್ರಾಮ ಪಂಚಾಯಿತಿಗಳ ಅಭಿಪ್ರಾಯ. ಅಂತೆಯೇ ಅರಣ್ಯ ಪ್ರದೇಶದಲ್ಲಿ/ಸರ್ಕಾರಿ ಖರಾಬಿನಲ್ಲಿ ಅನಾದಿಕಾಲದಿಂದ ಮನೆ ಕಟ್ಟಿಕೊಂಡು ವಾಸಿಸುತ್ತಿರುವ ಕುಟುಂಬಗಳಿಗೂ ಹಕ್ಕು ಪತ್ರ ದಾಖಲೆಯಿಲ್ಲದೆ ಇ-ಸ್ವತ್ತು ಖಾತಾ ಮಾಡಲು ಸಾಧ್ಯವಾಗುತ್ತಿಲ್ಲ. ಮನೆಗಳು ಶಿಥಿಲವಾಗಿದ್ದರೂ, ಬಿದ್ದುಹೋದರೂ ಪುನರ್‌ನಿರ್ಮಾಣಕ್ಕೆ ಗ್ರಾಮ ಪಂಚಾಯಿತಿಯಿಂದ ಪರವಾನಗಿ ನೀಡಲಾಗುತ್ತಿಲ್ಲ. ಅಪ್ಪ ಸತ್ತರೆ ಅಣ್ಣ ತಮ್ಮಂದಿರಲ್ಲಿ ಆಸ್ತಿ ಪಾಲು ಮಾಡಲು ಸಾಧ್ಯವಿಲ್ಲ. ಇದೇ ಪರಿಸ್ಥಿತಿ ಪಶ್ಚಿಮ ಘಟ್ಟ ಪ್ರದೇಶ ಅಂದರೆ ಮಲೆನಾಡು ಜಿಲ್ಲೆಗಳಲ್ಲಿಯೂ ಇದೆ.

2. ಮಲೆನಾಡು ಜಿಲ್ಲೆಗಳಲ್ಲಿ ಮುಖ್ಯ ರಸ್ತೆಗಳ ಬದಿಯ ದೊಡ್ಡಗ್ರಾಮಗಳ ಬಗ್ಗೆ ಗ್ರಾಮಠಾಣಾ ನಕ್ಷೆಗಳು ಲಭ್ಯವಿದ್ದರೂ ಬಹುತೇಕ ಸಣ್ಣ ಸಣ್ಣ ಗ್ರಾಮಗಳಿಗೆ ಹಾಗೂ ಅರಣ್ಯ ಪ್ರದೇಶ ಹಾಗೂ ತೋಟ ಮತ್ತು ಕೃಷಿ ಜಮೀನುಗಳಲ್ಲಿ ಚದುರಿಹೋಗಿರುವ ವಾಸದ ಮನೆಗಳ ಬಗ್ಗೆ ಗ್ರಾಮಠಾಣಾ ನಕ್ಷೆಗಳು ಲಭ್ಯವಿಲ್ಲ. ಅಂತಹ ಚದುರಿದಂತಿರುವ ಬಿಡಿ ವಾಸದ ಮನೆಗಳ ಬಗ್ಗೆ ಹಕ್ಕು ಪತ್ರ ದಾಖಲೆಗಳು ಲಭ್ಯವಿಲ್ಲದ ಕಾರಣ ಇ-ಖಾತೆ ನೀಡಲಾಗುತ್ತಿಲ್ಲ. ಈ ಹಿಂದೆ ಸರ್ಕಾರದ ವಿವಿಧ ವಸತಿ ಯೋಜನೆಗಳಲ್ಲಿ ರಚಿಸಿ ವಿತರಿಸಲಾದ ನಿವೇಶನಗಳಿಗೂ, ನಿರ್ಮಿಸಿರುವ ಮನೆಗಳಿಗೂ ಹಕ್ಕು ಪತ್ರ, ಇತರೆ ದಾಖಲೆಗಳು ತಹಸೀಲ್ದಾರ್ ಕಚೇರಿಯಲ್ಲಾಗಲೀ, ಗ್ರಾಮ ಪಂಚಾಯಿತಿಗಳಲ್ಲಾಗಲೀ ಲಭ್ಯವಿಲ್ಲ. ಅಲ್ಲದೇ ಸರ್ಕಾರದ ಗುಂಡುತೋಪು, ಗೋಮಾಳ, ಖರಾಬು, ಕಾನು ಜಮೀನಿನಲ್ಲಿ ಅನಧಿಕೃತವಾಗಿ ಮನೆಗಳನ್ನು ನಿರ್ಮಿಸಿ ವಾಸಿಸುತ್ತಿರುವವರೂ ಬಹಳಷ್ಟು ಸಂಖ್ಯೆಯಲ್ಲಿದ್ದಾರೆ. ಅರಣ್ಯ ಪ್ರದೇಶ, ಸೊಪ್ಪಿನ ಬೆಟ್ಟ, ಕಾನು, ರಕ್ಷಿತ ಪ್ರದೇಶಗಳಲ್ಲಿಯೂ ದೀರ್ಘ ಕಾಲದಿಂದ ಮನೆ ಕಟ್ಟಿಕೊಂಡು ವಾಸಿಸುತ್ತಿರುವ ಜನರಿದ್ದಾರೆ. ಇಂತಹ ಕುಟುಂಬಗಳು,



Ane;

ಕಂದಾಯ ಇಲಾಖೆಗೆ ಭೂ ಕಂದಾಯ ಕಾಯಿದೆ 1964 ರ ಕಲಂ 94ಸಿ ಅನ್ವಯ ಅಥವಾ ಅರಣ್ಯ ಇಲಾಖೆಗೆ ಅರಣ್ಯ ಹಕ್ಕು ಕಾಯಿದೆ 2002 ಅಡಿಯಲ್ಲಿ ಅರ್ಜಿಗಳನ್ನು ಸಲ್ಲಿಸಿದ್ದರೂ ಅವುಗಳು ಇತ್ಯರ್ಥವಾಗದೇ ಸಹಸ್ರಾರು ಸಂಖ್ಯೆಯಲ್ಲಿ ಬಾಕಿ ಇರುವುದು ಇ-ಖಾತಾ ದಾಖಲೆಗೆ ಅಡಚಣೆಯಾಗಿದೆ. ಇನ್ನು ಬಹಳ ಹಿಂದೆಯೇ ಸರ್ಕಾರ ಜನವಸತಿಗಾಗಿ ಖಾನೇಷುಮಾರಿ ಜಮೀನನ್ನು ಗುರುತಿಸಿ ಅಳತೆ ಮಾಡಿ ಗಡಿ ಗುರುತಿಸಿ ನಿಲುಸಿಗಳ ಆಸ್ತಿಯನ್ನು ವಿಂಗಡಿಸಿ ನಕ್ಷೆಗಳನ್ನು ತಯಾರಿಸಿದ್ದರೂ ಹಕ್ಕು ಪತ್ರ ನೀಡದೆ ಹೋದ ಪ್ರಕರಣಗಳಲ್ಲಿ ಅವಿಭಕ್ತ ಕುಟುಂಬಗಳು ಆ ಜಮೀನಿನಲ್ಲಿ ಪೂರ್ವಕಾಲದಿಂದಲೂ ಮನೆ, ಕಣ, ಕೈ ತೋಟ, ದನದ ಕೊಟ್ಟಿಗೆ, ಉದ್ಯಾನ ಅಭಿವೃದ್ಧಿ ಪಡಿಸಿ ವಾಸವಾಗಿದ್ದರೂ ಅವರಿಗೆ ಅನುಭವದಲ್ಲಿರುವ ವಿಸ್ತೀರ್ಣದ ಖಾತೆ ಮಾಡಲು ಗ್ರಾಮ ಪಂಚಾಯಿತಿಗಳು ಕ್ರಮ ಕೈಗೊಳ್ಳಲು ಅಧಿಕಾರ ವ್ಯಾಪ್ತಿ ಇಲ್ಲ, ಅನುಭವದಲ್ಲಿರುವ ವಿಸ್ತೀರ್ಣ 50' x 80' ನಿವೇಶನಕ್ಕಿಂತ ದೊಡ್ಡದು ಇತ್ಯಾದಿ ಸಬೂಬು ತೆಗೆದು ಆ ಕುಟುಂಬಗಳಲ್ಲಿ ಗೊಂದಲ ಹುಟ್ಟಿಸಿರುವ ಪ್ರಕರಣಗಳು ಅನೇಕ. ಪಶ್ಚಿಮ ಘಟ್ಟದ ನೆತ್ತಿ ಹಾಗೂ ಕಣಿವೆಗಳಲ್ಲಿರುವ ಇಂತಹ ಜನವಸತಿ ಪ್ರದೇಶದಲ್ಲಿ ಅನಾದಿಕಾಲದಿಂದ ವಾಸಿಸುತ್ತಿರುವ ಕುಟುಂಬಗಳಿಗೆ ವಾಸದ ಮನೆ, ಕಣ, ದನದ ದೊಡ್ಡಿ ಹೊರತುಪಡಿಸಿ ಉಳಿದ ಅನುಭವದಲ್ಲಿರುವ ಭಾಗವನ್ನು ಗಿಡ, ತೋಟ ಮಾಡಿ ಫಸಲಾಗಿರುವ ಪರವತ್ತು ವಿಧಿಸಿ ಅನುಭೋಗದಲ್ಲಿರುವ ಒಟ್ಟು ವಿಸ್ತೀರ್ಣಕ್ಕೆ ಅವಿಭಕ್ತ ಕುಟುಂಬದ ವ್ಯವಸ್ಥಾಪಕರ ಹೆಸರಲ್ಲಿ ಖಾತೆ ಮಾಡಿಕೊಡುವುದೇ ಸೂಕ್ತ ಪರಿಹಾರವಾಗಬಲ್ಲುದು ಎಂಬುದು ಸರ್ವಸಮ್ಮತ ಅಭಿಪ್ರಾಯ.

3. ಕಾಫಿ ಬೆಳೆಯುವ ಕೊಡಗು, ಚಿಕ್ಕಮಗಳೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಕಾಫಿ ತೋಟದಲ್ಲಿಯೇ ವಾಸದ ಮನೆ, ಕಣ, ದನದ ದೊಡ್ಡಿ, ಕಾಫಿ ಬೀಜ ಸಂಸ್ಕರಣಾ ಘಟಕ ಇತ್ಯಾದಿ ವ್ಯವಸ್ಥೆ ಜೊತೆಗೆ ವಸತಿ ಸಮುಚ್ಚಯವನ್ನು ನಿರ್ಮಿಸಿಕೊಂಡು ಬಿಡಿಬಿಡಿಯಾಗಿ ಮನೆಗಳು ಕಾಫಿ ತೋಟಗಳಲ್ಲಿ ಚದುರಿ ಹೋಗಿರುವ ಪ್ರಕರಣಗಳು ಬಹಳ. ಅಲ್ಲದೇ ಇತ್ತೀಚೆಗೆ ಅಂತಹ ಹಳೆಯ ವಾಸದ ಮನೆಗಳನ್ನು ಪ್ರವಾಸಿಗರ ತಂಗುದಾಣಗಳನ್ನಾಗಿ ಅಥವಾ ರೆಸಾರ್ಟ್ (ಹೋಂಸ್ಟೇಗಳನ್ನಾಗಿ) ಬಳಕೆ ಮಾಡುತ್ತಿರುವ ಪ್ರಕರಣಗಳೂ ಹೆಚ್ಚುತ್ತಿವೆ. ಅಂತಹ ಆಸ್ತಿ ಕಟ್ಟಡಗಳನ್ನು ಇ-ಸ್ವತ್ತು ವ್ಯಾಪ್ತಿಗೆ ತಂದು ತೆರಿಗೆ ನಿರ್ಧರಣೆ ಮಾಡಬೇಕಾಗಿರುವುದು ಗ್ರಾಮ ಪಂಚಾಯಿತಿಯ ಸಂಪನ್ಮೂಲ ಕ್ರೋಢೀಕರಣ ದೃಷ್ಟಿಯಿಂದ ಅಗತ್ಯವಾದ ಕ್ರಮ.

4. ಗ್ರಾಮಠಾಣಾ ಸಮೀಪದ, ಸಂಪರ್ಕ ರಸ್ತೆ ಪಕ್ಕದ ಕೃಷಿ ಜಮೀನುಗಳಲ್ಲಿ ಅನ್ಯಕ್ರಾಂತ ಮಾಡದೇ ನಗರ ಯೋಜನೆ ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ ನಾಗರೀಕ ಸೌಲಭ್ಯಗಳಿಗೆ ಜಮೀನನ್ನು ಮೀಸಲಿಡದೇ ರಸ್ತೆ, ಚರಂಡಿ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಒದಗಿಸದೇ ವಸತಿ ವಿನ್ಯಾಸಗಳನ್ನು ರಚಿಸಿ ನಿವೇಶನಗಳನ್ನು ವಿಂಗಡಿಸಿ ಒಪ್ಪಂದ ಪತ್ರ/ಕ್ರಯ ಪತ್ರ/ನೋಂದಾಯಿಸದ ಕ್ರಯ ಪತ್ರಗಳ ಮುಖಾಂತರ ಪರಭಾರೆ ಮಾಡಿದ್ದು ಕ್ರಯಕ್ಕೆ

ಪಡೆದವರು ನಿವೇಶನಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ದೀರ್ಘಕಾಲದಿಂದ ವಾಸಿಸುತ್ತಿರುವುದು ಬಹುತೇಕ ಎಲ್ಲಾ ಜಿಲ್ಲೆಗಳ ಗ್ರಾಮಾಂತರ ಪ್ರದೇಶದಲ್ಲಿನ ಸಾಮಾನ್ಯವಾದ ಬೆಳವಣಿಗೆ. ಅನ್ಯಾಕ್ರಾಂತ ಆದೇಶ ಪಡೆದು ನಗರ ಯೋಜನಾ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ವಸತಿ ವಿನ್ಯಾಸದಲ್ಲಿ ವಿಂಗಡಿಸಿದ ನಿವೇಶನಗಳನ್ನು ನೋಂದಾಯಿಸಿದ ಕ್ರಯ ಪತ್ರ ಮುಖಾಂತರ ಖರೀದಿಸಿ ಮನೆ ನಿರ್ಮಿಸಿರುವ ಪ್ರಕರಣಗಳಲ್ಲಿ ಮಾತ್ರ ಇ-ಸ್ವತ್ತು ತಂತ್ರಾಂಶದಂತೆ ಖಾತೆ ಮಾಡಿ ನಮೂನೆ-9, ನಮೂನೆ-11 ವಿತರಿಸಲು ಸಾಧ್ಯ. ಉಳಿದ ಪ್ರಕರಣಗಳಲ್ಲಿ ಅದು ಸಾಧ್ಯವೇ ಇಲ್ಲ. ಇದರಿಂದ ಜನ ವಾಸಿಸುತ್ತಿರುವ ಗ್ರಾಮಠಾಣಾ ಸಮೀಪದ ಮನೆ/ಕಟ್ಟಡಗಳಿಗೆ ಕರಾಕರಣೆ ಮಾಡಲು ಸಾಧ್ಯವಾಗುತ್ತಿಲ್ಲ. ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ ಜಿಲ್ಲೆಗಳಲ್ಲಿ ಕೃಷಿ ಜಮೀನನ್ನು ಭೂ-ಮಾಲೀಕರು ಒಪ್ಪಂದ ಪತ್ರದ ಮುಖಾಂತರ 1 ಗುಂಟೆ, 2 ಗುಂಟೆ ವಿಸ್ತೀರ್ಣದ ನಿವೇಶನಗಳನ್ನಾಗಿ ಪರಭಾರೆ ಮಾಡಿರುವ ಪ್ರಕರಣಗಳೇ ಹೆಚ್ಚು. ಅಲ್ಲಿ ಮನೆ ನಿರ್ಮಿಸಿ ವಾಸಿಸುತ್ತಿರುವವರನ್ನು ತೆರವುಗೊಳಿಸುವುದು ಸಾಧ್ಯವೇ ಇಲ್ಲ. ಅದು ಅನಾವಶ್ಯಕ ಕೂಡ.

5. ರಾಷ್ಟ್ರೀಯ/ರಾಜ್ಯ ಹೆದ್ದಾರಿ/ಪ್ರವಾಸಿ ತಾಣಗಳ ಪಕ್ಕದಲ್ಲಿ ಹೋಟೆಲ್, ಅಂಗಡಿ, ತಂಗುದಾಣ, ರೆಸಾರ್ಟ್ ಇತ್ಯಾದಿಗಳನ್ನು ಯಾತ್ರಿಕರ ಅನುಕೂಲಕ್ಕಾಗಿ ನಿರ್ಮಿಸುವ ಬೆಳವಣಿಗೆ ಪ್ರವಾಸಿ ತಾಣಗಳು, ದೇವಾಲಯಗಳು ಹೆಚ್ಚಿರುವ ಜಿಲ್ಲಾ ವ್ಯಾಪ್ತಿಗಳಲ್ಲಿ ವ್ಯಾಪಕವಾಗಿ ಪ್ರಸರಿಸುತ್ತಿದೆ. ಮಂಡ್ಯ, ರಾಮನಗರ, ಚಿಕ್ಕಮಗಳೂರು, ಕೊಡಗು, ಹಾಸನ, ಮೈಸೂರು, ಕೊಪ್ಪಳ, ಬಳ್ಳಾರಿ, ಧಾರವಾಡ, ಚಾಮರಾಜನಗರ, ವಿಜಯಪುರ, ಬೀದರ್ ಜಿಲ್ಲೆಗಳು ಕೇವಲ ಉದಾಹರಣೆಗಳಷ್ಟೇ. ಈ ರೀತಿಯ ವಾಣಿಜ್ಯ ಕಟ್ಟಡಗಳನ್ನು, ಅವುಗಳು ಗ್ರಾಮ ವ್ಯಾಪ್ತಿಯಿಂದ ಬಹುದೂರವಿದ್ದರೂ ಅನ್ಯಾಕ್ರಾಂತವಾಗದ ಕೃಷಿ ಜಮೀನುಗಳಲ್ಲಿದ್ದರೂ ಗ್ರಾಮ ಪಂಚಾಯಿತಿಯ ಇ-ಖಾತೆಗೆ ತಂದು ಕರವಿಧಿಸುವ ಪ್ರಕ್ರಿಯೆಗೆ ಚಾಲನೆ ಕೊಡದಿದ್ದರೆ ನಷ್ಟವಾಗುವುದು ಗ್ರಾಮ ಪಂಚಾಯಿತಿಗಳಿಗೆ ಹೊರತು ಕಾನೂನು ಉಲ್ಲಂಘಿಸಿ ವಾಣಿಜ್ಯ ಕಟ್ಟಡಗಳನ್ನು ನಿರ್ಮಿಸಿದವರಿಗಲ್ಲ. ಇದೇ ತರ್ಕ ಗ್ರಾಮೀಣ ಪ್ರದೇಶದಲ್ಲಿ ಅಲ್ಲಲ್ಲಿ ನಾಯಿಕೊಡೆಗಳಂತೆ ಏಳುತ್ತಿರುವ ಮದುವೆ ಮಂಟಪ, ಛತ್ರ, ಭೋಜನದಾಣ (ರೆಸಾರ್ಟ್)ಗಳಿಗೂ ಅನ್ವಯಿಸುತ್ತದೆ.

6. ಉದ್ಯೋಗನಿಮಿತ್ತ ನಗರಗಳಿಗೆ ಯುವ ಸಮೂಹ ವಲಸೆ ಹೋಗುತ್ತಿರುವ ಪ್ರಕ್ರಿಯೆ ವ್ಯಾಪಕವಾಗುತ್ತಿರುವ ಕಾರಣ ಜಿಲ್ಲಾ ಕೇಂದ್ರಸ್ಥಾನಗಳು ವೇಗವಾಗಿ ನಗರೀಕರಣಗೊಳ್ಳುತ್ತಿರುವ ಈ ದಶಕದಲ್ಲಿ ಸ್ವಾಭಾವಿಕವಾಗಿ ವಸತಿ ವ್ಯವಸ್ಥೆಗೆ ಬೇಡಿಕೆ ಹೆಚ್ಚು. ಜಿಲ್ಲಾ ಕೇಂದ್ರಗಳ ಸುತ್ತ ಮುತ್ತಣ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ನಿವೇಶನ ವಿಂಗಡಣೆ, ಮಾರಾಟ ಪ್ರಕರಣಗಳು ಹೆಚ್ಚುತ್ತಿದ್ದು, ಈ ಬದಲಾವಣೆ ವ್ಯಾಪಕವಾಗಿದ್ದು ಅದನ್ನು ನಿರ್ವಹಿಸುವಲ್ಲಿ ಕಂದಾಯ, ನಗರ ಯೋಜನೆ ಇಲಾಖೆಗಳು ಸೋಲುತ್ತಿರುವ ಕಾರಣ ಕಾನೂನು ಉಲ್ಲಂಘನೆಯಾಗಿ ಅನಧಿಕೃತ ವಸತಿ ವಿನ್ಯಾಸಗಳು, ಕಟ್ಟಡಗಳ ನಿರ್ಮಾಣ ಅಡೆತಡೆ ಇಲ್ಲದೇ ಸಾಗಿದೆ. ಆದ್ದರಿಂದ ಅಂತಹ ಗ್ರಾಮಗಳನ್ನು,

ಹತ್ತಿರದ ನಗರ / ಪಟ್ಟಣ ಪ್ರದೇಶಗಳಲ್ಲಿ ವಿಲೀನಗೊಳಿಸಿ ನಗರ ಸಭೆ, ನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ತಂದು ಬೆಳವಣಿಗೆಯನ್ನು ಕ್ರಮಬದ್ಧಗೊಳಿಸಿ ಸುಧಾರಿಸಬಹುದೆಂದು ತೋರುತ್ತದೆ. ಜನಸಂಖ್ಯೆ ಮಿತಿ ಮೀರಿದ ಗ್ರಾಮ ಪಂಚಾಯಿತಿಗಳನ್ನು ಅವು ಜಿಲ್ಲಾ, ತಾಲ್ಲೂಕು ಕೇಂದ್ರಗಳಿಂದ ಬಹುದೂರವಿದ್ದು ವಿಲೀನಗೊಳಿಸಲು ಸಾಧ್ಯವಾಗದಿದ್ದಲ್ಲಿ ಪ್ರತ್ಯೇಕ ಪಟ್ಟಣ, ಸ್ಥಳೀಯ ಸಂಸ್ಥೆಯನ್ನಾಗಿಯಾದರೂ ಘೋಷಿಸುವುದು ಅನಿವಾರ್ಯವಾಗುತ್ತದೆ.

7. ಅಂತಿಮವಾಗಿ ಸಮಸ್ಯೆಗಳ ಆಗರವಾಗಿರುವ ಬೃಹತ್ ಬೆಂಗಳೂರು ಮಹಾನಗರದ ಸುತ್ತಮುತ್ತಣ ಗ್ರಾಮ ಪಂಚಾಯಿತಿಗಳ ಬೆಳವಣಿಗೆಯ ವೇಗ ಅಗಾಧ, ಬದಲಾವಣೆ ಕ್ಷಿಪ್ರ. ಈ ಬದಲಾವಣೆಯ ವೇಗಕ್ಕೆ ಹೋಗಿ ಸುಧಾರಣೆ ತರಲು ಈಗಿನ ಆಡಳಿತ ವ್ಯವಸ್ಥೆಗೆ ಸಾಧ್ಯವಾಗದ ಪರಿಸ್ಥಿತಿ ಸೃಷ್ಟಿಯಾಗಿದೆ. ಬೆಂಗಳೂರಿಗೆ ವಿವಿಧ ಕಾರಣಗಳಿಗಾಗಿ ವಲಸೆ ಬರುತ್ತಿರುವವರ ಸಂಖ್ಯೆ ಅಪಾರ. ಅವರ ವಸತಿ ಸಮಸ್ಯೆ ಪರಿಹರಿಸುವ ಹೊರೆ ಸುತ್ತಮುತ್ತಣ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಮೇಲೆ ಬಿದ್ದು ಅವುಗಳು ವೇಗವಾಗಿ ಬೆಳೆಯುತ್ತಿವೆ. ಕಂದಾಯ ಇಲಾಖೆಯಾಗಲೀ, ನಗರ ಯೋಜನೆ ಇಲಾಖೆಯಾಗಲಿ ಈ ವೇಗದ ಬೆಳವಣಿಗೆಯ ಸುಧಾರಣೆಗೆ ಯತ್ನಿಸುತ್ತಿಲ್ಲ. ಒಂದು ಅಂದಾಜಿನ ಪ್ರಕಾರ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ನಾಲ್ಕು ವರ್ಷಗಳಲ್ಲಿ ವಿತರಿಸಿದ ನಿವೇಶನಗಳ ನೂರು ಪಟ್ಟು, ಬೆಂಗಳೂರು ನಗರದ ಸುತ್ತಣ ನಲವತ್ತು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಅಧಿಕೃತ/ಅನಧಿಕೃತ ನಿವೇಶನಗಳ ರಚನೆ, ಪರಭಾರೆಯಾಗಿರುವುದು! ಈ ಬೃಹತ್ ಸಮಸ್ಯೆಗೆ ಪರಿಹಾರ ಸುಲಭ ಸಾಧ್ಯವಲ್ಲ. ಬೆಂಗಳೂರು ನಗರದ ಮೂಲಭೂತ ಸೌಕರ್ಯಗಳ ಮೇಲೆ ಈ ಸುತ್ತಣ ಬೆಳವಣಿಗೆ ಅಗಾಧ ಹೊರೆಯಾಗುವುದರಲ್ಲಿ ಸಂದೇಹವಿಲ್ಲ. ವೇಗವಾಗಿ ನಗರೀಕರಣ ಗೊಳ್ಳುತ್ತಿರುವ ಹಾಗೂ ಜನಸಂಖ್ಯೆ ಮಿತಿಮೀರಿ ಬೆಳೆಯುತ್ತಿರುವ ಗ್ರಾಮೀಣ ಸೊಗಡು ಮರೆಯಾಗುತ್ತಿರುವ ಅಂತಹ ಗ್ರಾಮ ಪಂಚಾಯಿತಿಗಳಲ್ಲಿ ಕೆಲವನ್ನು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ತರಬಹುದು. ಕೆಲವು ಗ್ರಾಮ ಪಂಚಾಯಿತಿಗಳನ್ನು ಪ್ರತ್ಯೇಕವಾಗಿ ಅಥವಾ ಗುಂಪುಗೂಡಿಸಿ ನಗರ ಪಾಲಿಕೆ/ಪುರಸಭೆ/ಪಟ್ಟಣ ಪಂಚಾಯಿತಿಗಳನ್ನಾಗಿ ಪರಿವರ್ತಿಸಿ ಸಂಬಂಧಿಸಿದ ಪಟ್ಟಣ/ಸ್ಥಳೀಯ ಸಂಸ್ಥೆ ಯೋಜನಾ ಪ್ರಾಧಿಕಾರಗಳು ಅವುಗಳ ಬೆಳವಣಿಗೆಯನ್ನು ನಿಯಂತ್ರಿಸಿ ತಹಬಂದಿಗೆ ತರುವಂತೆ ಕ್ರಮ ಜರುಗಿಸುವುದು ಸೂಕ್ತ.

## II. ಸಾರ್ವಜನಿಕರ ಅಭಿಪ್ರಾಯ-ಸಮಸ್ಯೆಗಳ ವಿಶ್ಲೇಷಣೆ :

ನಮ್ಮ ಸಭೆಯೊಂದರಲ್ಲಿ ಜನ ಪ್ರತಿನಿಧಿಯೊಬ್ಬರು ರಾಜ್ಯ ಸರ್ಕಾರ ಇ-ಸ್ವತ್ತು ಎಂಬ ಭೂತವನ್ನು ಸೃಷ್ಟಿಸಿ ಎಲ್ಲರೂ ಗಾಬರಿಯಾಗುವಂತೆ ಪಂಚತಂತ್ರ ತತ್ರಾಂಶ ಉಪಯೋಗಕ್ಕೆ ಬಾರದಂತಹ ಪರಿಸ್ಥಿತಿಯನ್ನು ನಿರ್ಮಿಸಿದೆ ಎಂದು ಅಳವಡಿಸಿಕೊಂಡು ಇದು ಭ್ರಷ್ಟಾಚಾರವನ್ನು ಹೆಚ್ಚುಗೊಳಿಸಿದೆ ಎಂದು ಆರೋಪಿಸಿರುವುದರಲ್ಲಿ ಬಹಳ

ಸತ್ಯಾಂಶವಿರುವುದು ಕಂಡುಬರುತ್ತದೆ. ಇ-ಸ್ವತ್ತು ತಂತ್ರಾಂಶ ಸೃಷ್ಟಿಗೆ ಬೆಂಗಳೂರು ಮಹಾನಗರ ಸುತ್ತಣ ಪ್ರದೇಶದಲ್ಲಿ ಆಗಿರುವ ಅಕ್ರಮ ಭೂ ವ್ಯವಹಾರಗಳಿಗೆ ಸರ್ಕಾರ ಕಡಿವಾಣ ಹಾಕಬೇಕೆಂಬ ಗೌ|| ಉಚ್ಚ ನ್ಯಾಯಾಲಯದ ಅಪೂರ್ಣ ನಿರ್ದೇಶನವೇ ಕಾರಣ. ಬೆಂಗಳೂರು ನಗರ ಜಿಲ್ಲೆಯ ದಕ್ಷಿಣ ತಾಲ್ಲೂಕಿನ ಬಸವನಪುರ ಗ್ರಾಮ ಪಂಚಾಯಿತಿಯ ಕಮ್ಮನಹಳ್ಳಿ ಸ. ಸಂ. 74 ರ ಕೃಷಿ ಜಮೀನಿನಲ್ಲಿ ನಿವೇಶನದ ಖಾತೆ ಬದಲಾವಣೆಯನ್ನು ಗ್ರಾಮ ಪಂಚಾಯಿತಿ ಮಾಡಿದ್ದು ಅದರ ವಿರುದ್ಧ ಕೃಷಿ ಜಮೀನಿನ ಕ್ರಯದಾರ ಆರ್. ವೆಂಕಟೇಶ ರವರು ಸಲ್ಲಿಸಿದ್ದ ಮೇಲ್ಮನವಿಯನ್ನು ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಪುರಸ್ಕರಿಸಿ ವಿವಾದಗ್ರಸ್ತ ಆಸ್ತಿಯ ಮಾಲೀಕತ್ವದ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಬಾಕಿ ಇದೆ ಎಂಬ ಕಾರಣಕ್ಕೆ ಖಾತೆ ರದ್ದು ಪಡಿಸಿದ್ದರು. ಈ ಆದೇಶವನ್ನು ನಿವೇಶನದ ಕ್ರಯದಾರ ವಿ.ಜಿ.ಐಯ್ಯರ್ ರವರು ರಿಟ್ ಅರ್ಜಿ ಸಲ್ಲಿಸಿ ಗೌ|| ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು. ಅದು ವೈಯಕ್ತಿಕ ಆಸ್ತಿ ಹಕ್ಕಿನ ಬಗೆಗಿನ ರಿಟ್ ಪ್ರಕರಣವೇ ಹೊರತು ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯಾಗಿರಲಿಲ್ಲ. ಆದರೂ ಗೌ|| ಉಚ್ಚ ನ್ಯಾಯಾಲಯ ರಿಟ್ ಅರ್ಜಿಯನ್ನು ರಿಟ್ ಪ್ರಕರಣ ಸಂಖ್ಯೆ **12278/2007(LB-RES)** ರಲ್ಲಿ ದಿನಾಂಕ **07.07.2008** ರಂದು ಇತ್ಯರ್ಥಪಡಿಸಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ಆದೇಶವನ್ನು ಅಧಿಕಾರ ವ್ಯಾಪ್ತಿ ಇಲ್ಲದ ಕಾರಣ ನೀಡಿ ರದ್ದುಗೊಳಿಸಿದ ನಂತರವೂ ಸಾರ್ವಜನಿಕ ಹಿತಾಸಕ್ತಿಯ ಪ್ರಕರಣವೆಂದು ಪರಿಗಣಿಸಿ ರಾಜ್ಯದ ವಿವಿಧ ತಾಲ್ಲೂಕುಗಳ ತಹಶೀಲ್ದಾರರು ಖರಾಬು ಜಮೀನಿನ ರಕ್ಷಣೆ ಬಗ್ಗೆ ಪ್ರಮಾಣ ಪತ್ರಗಳನ್ನು ಸಲ್ಲಿಸಲು ನಿರ್ದೇಶಿಸಿ ಸಲ್ಲಿತವಾದ ಪ್ರಮಾಣ ಪತ್ರಗಳ ಆಧಾರದ ಮೇಲೆ ಕಾಲಕಾಲಕ್ಕೆ ಆದೇಶಗಳ ಸರಮಾಲೆಯನ್ನು ಹೊರಡಿಸಿದ್ದರು. ರಿಟ್ ಅರ್ಜಿ ಇತ್ಯರ್ಥವಾದ ನಂತರ ಹೊರಡಿಸಲಾದ ಈ ಯಾವುದೇ ಆದೇಶದಿಂದಲೂ ರಿಟ್ ಅರ್ಜಿದಾರರಿಗೆ ಯಾವ ರೀತಿಯ ಪರಿಹಾರ ದೊರೆತಿರಲಿಲ್ಲ. ರಿಟ್ ಪ್ರಕರಣ ಸಂಖ್ಯೆ : **12278/2007(LB-RES)** ರಲ್ಲಿ ಏಕ ನ್ಯಾಯಾಧೀಶ ಪೀಠದ ದಿನಾಂಕ: **07.07.2008** ದ ನಂತರದ ಆದೇಶಗಳನ್ನು ಪ್ರಶ್ನಿಸಿ ಶ್ರೀ ಕೆ.ಎಸ್. ಯತಿರಾಜ್ ಎಂಬುವವರು ಗೌ|| ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠಕ್ಕೆ ರಿಟ್ ಮೇಲ್ಮನವಿಗಳನ್ನು ಸಲ್ಲಿಸಿದ್ದು ಅವು ರಿಟ್ ಮೇಲ್ಮನವಿ ಕ್ರಮ ಸಂಖ್ಯೆ: **906-932/2015** ಗಳಲ್ಲಿ ನೋಂದಾಗಿದ್ದು ಇನ್ನೂ ಇತ್ಯರ್ಥವಾಗಿಲ್ಲ. ಗೌ|| ಉಚ್ಚ ನ್ಯಾಯಾಲಯದ ಏಕ ನ್ಯಾಯಾಧೀಶ ಪೀಠದ ಆದೇಶದಲ್ಲಿ ಗಮನಿಸಬೇಕಾದ ಅಂಶವೆಂದರೆ ಬಸವನಪುರ ಗ್ರಾಮ ಪಂಚಾಯಿತಿಯು ಸರ್ಕಾರದ ಆದೇಶದನ್ವಯ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನವಾಗಿದ್ದು ವಿವಾದಿತ ಆಸ್ತಿ ಬಗ್ಗೆ ಮೇಲ್ಮನವಿಯನ್ನು ಇತ್ಯರ್ಥ ಪಡಿಸುವ ಅಧಿಕಾರ ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ದತ್ತವಾಗಿಲ್ಲ ಎಂಬುದು. ಆದರೆ ರಿಟ್ ಅರ್ಜಿಯನ್ನು

ದಿನಾಂಕ: 07.07.2008 ರಂದು ಇತ್ಯರ್ಥಪಡಿಸಿದ ಸಂಕರವ್ವ ರಿಟ್ ಪ್ರಕರಣವನ್ನು ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆ ಎಂದು ಪರಿಭಾವಿಸಿ ಇಡೀ ರಾಜ್ಯದ ಸರ್ಕಾರಿ ಖರಾಬು ಜಮೀನುಗಳಿಗೆ ಸಂಬಂಧಿಸಿದಂತೆ ವಿಸ್ತರಿಸಿ ಆದೇಶಗಳ ಸರಮಾಲೆಯನ್ನು ಸೃಷ್ಟಿಸಿದ್ದು ವಿಶೇಷ ! ಸರ್ಕಾರದ ವಿವಿಧ ವಿವರಣೆಯ ಖರಾಬು ಜಮೀನುಗಳು ಸಾರ್ವಜನಿಕರ ಸಾಮಾನ್ಯ ಬಳಕೆ ಆಸ್ತಿಗಳಾಗಿದ್ದು ಅವುಗಳನ್ನು ಸಂರಕ್ಷಿಸುವುದು ಸರ್ಕಾರದ, ಅದರ ಅಧೀನ ಅಧಿಕಾರಿಗಳ ಆದ್ಯ ಕರ್ತವ್ಯವೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೆ ವಿಷಯಕ್ಕೆ ಸಂಬಂಧಿಸದ ವ್ಯಯಕ್ತಿಕ ಹಕ್ಕಿನ ಪ್ರಕರಣವೊಂದರಲ್ಲಿ ಈ ರೀತಿ ಒತ್ತಾಯದ ಪ್ರಮಾಣ ಪತ್ರಗಳನ್ನು ತಹಶೀಲ್ದಾರರಿಂದ ಪಡೆದು ಆದೇಶಗಳನ್ನು ಹೊರಡಿಸಿ ಕಡತದಲ್ಲಿಟ್ಟರೆ ಸರ್ಕಾರಿ ಖರಾಬು ಜಮೀನುಗಳ ಸಂರಕ್ಷಣೆಯಾಗುತ್ತದೆ ಎಂಬುದು ವಾಸ್ತವಾಂಶಕ್ಕೆ ತೀರಾ ದೂರವಾದ ಸಂಗತಿ. ಭೂಗಳ್ಳರು ಸರ್ಕಾರಿ ಖರಾಬು ಜಮೀನನ್ನು ಸುಳ್ಳು ದಾಖಲೆ ಸೃಷ್ಟಿಸಿ ಅಕ್ರಮವಾಗಿ ವಶಕ್ಕೆ ಪಡೆಯುವ ಪ್ರಕ್ರಿಯೆಯನ್ನು ಗ್ರಾಮ ಪಂಚಾಯಿತಿ ಸೇರಿದಂತೆ ಆಡಳಿತ ವ್ಯವಸ್ಥೆಯ ಎಲ್ಲಾ ಹಂತಗಳಲ್ಲಿಯೂ ವಿರೋಧಿಸಬೇಕೆಂಬುದರಲ್ಲಿ ಎರಡು ಮಾತಿಲ್ಲ. ಆದರೆ ಗ್ರಾಮ ಪಂಚಾಯಿತಿ ಸರ್ಕಾರದ ಖರಾಬು ಜಮೀನುಗಳ ಬಗ್ಗೆ ಮಾತ್ರವಾಗಲಿ ಅಂತಹ ಜಮೀನಿನಲ್ಲಿ ಅನಧಿಕೃತವಾಗಿ ವಿಂಗಡಣೆಯಾದ ನಿವೇಶನಗಳ, ಅವುಗಳಲ್ಲಿ ಅಕ್ರಮವಾಗಿ ನಿರ್ಮಾಣವಾಗುವ ಕಟ್ಟಡಗಳ ಬಗ್ಗೆ ಮಾತ್ರ ಖಾತೆ ದಾಖಲು/ಬದಲಾವಣೆ ಮಾಡುವುದಿಲ್ಲ. ಗ್ರಾಮಠಾಣಾ ವ್ಯಾಪ್ತಿಯ ಖಾಸಗಿ ಮನೆ, ನಿವೇಶನ/ಆಸ್ತಿ, ಅನ್ಯಾಕ್ರಾಂತವಾದ ಕೃಷಿ ಜಮೀನಿನಲ್ಲಿ ವಸತಿ ವಿನ್ಯಾಸಗಳು ರಚನೆಯಾಗಿ ಸಂಬಂಧಿಸಿದ ನಗರ ಯೋಜನಾ ಪ್ರಾಧಿಕಾರದ ಅನುಮೋದನೆ ಪಡೆದ ನಿವೇಶನಗಳು, ಅಂತಹ ನಿವೇಶನಗಳಲ್ಲಿ ನಿರ್ಮಾಣವಾಗುವ ಮನೆಗಳು/ಆಸ್ತಿಗಳಿಗೂ ಖಾತೆ ದಾಖಲು ಮಾಡಿ ಕರ ವಿಧಿಸುತ್ತಾರೆ. ಎಲ್ಲಾ ಆಸ್ತಿಗಳು ಸರ್ಕಾರಿ ಖರಾಬು ಜಮೀನಿನಲ್ಲಿ ತಲೆಗೊಂಡಿರುವುದಿಲ್ಲ. ಕೆಲವು ಇರಬಹುದು. ಅಂತಹ ಆಸ್ತಿಗಳ ಬಗ್ಗೆ ತೀವ್ರ ವಿಚಾರಣೆ ಮಾಡಿ ಗ್ರಾಮ ಪಂಚಾಯಿತಿಯು ನಿರ್ಣಯ ಕೈಗೊಂಡು ಖಾತೆ ದಾಖಲು ಮಾಡಬಹುದು ಅಥವಾ ನಿರಾಕರಿಸಬಹುದು. ಆದರೆ ಎಲ್ಲಾ ಖಾಸಗಿ ಆಸ್ತಿಗಳನ್ನು ಸಂಶಯದ ದೃಷ್ಟಿಯಿಂದ ನೋಡಿ ಅವುಗಳ ಖಾತೆ ದಾಖಲು ಮಾಡಲು ನಿರ್ಬಂಧ ಹೇರುವುದು ಸರಿಯಾದ ಕ್ರಮವಲ್ಲ ಎಂಬುದು ಈ ಸಮಿತಿಯ ಸ್ಪಷ್ಟ ಅಭಿಮತ.

1. ಬೆಂಗಳೂರು ಸುತ್ತಮುತ್ತಲಿನ ಅಕ್ರಮ ಭೂ-ವ್ಯವಹಾರಗಳಿಗೆ ಗ್ರಾಮಪಂಚಾಯಿತಿಗಳು ಮಾತ್ರವೇ ಕಾರಣವಲ್ಲ. ಅಲ್ಲದೇ ಅಕ್ರಮಗಳನ್ನು ತಡೆಯಲು ಗ್ರಾಮ ಪಂಚಾಯಿತಿಗಳಿಗೆ ಯಾವ ಅಧಿಕಾರವೂ ಇಲ್ಲ. ಕೃಷಿ ಜಮೀನುಗಳನ್ನು ವಿವಿಧ ಕೃಷಿಯೇತರ ಉದ್ದೇಶಗಳಿಗಾಗಿ ಅನ್ಯಾಕ್ರಾಂತ/ಪರಿವರ್ತನೆ ಮಾಡುವ ಅಧಿಕಾರವಿರುವ ಕಂದಾಯ ಇಲಾಖೆ ಅನ್ಯಾಕ್ರಾಂತ ಆದೇಶ ಪಡೆಯದೆಯೇ ವಸತಿ ವಿನ್ಯಾಸಗಳನ್ನು ರಚಿಸಿ ನಿವೇಶನಗಳನ್ನು ಮಾರಾಟ ಮಾಡಿರುವ ಹಾಗೂ ಅಂತಹ ನಿವೇಶನಗಳಲ್ಲಿ ಅನಧಿಕೃತ ಮನೆ/ಕಟ್ಟಡಗಳನ್ನು ನಿರ್ಮಿಸಿರುವವರ

ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಳ್ಳದೇ ಸುಮ್ಮನಿರುವುದು, ಅನ್ಯಾಕ್ರಾಂತವಾದ ಕೃಷಿ ಜಮೀನುಗಳಲ್ಲಿನ ವಸತಿ ವಿನ್ಯಾಸಗಳಿಗೆ ಅನುಮೋದನೆ ನೀಡುವ ಅಧಿಕಾರವುಳ್ಳ ಯೋಜನಾ ಪ್ರಾಧಿಕಾರಗಳು ಕೃಷಿ ಜಮೀನಿನಲ್ಲಿ ಅನಧಿಕೃತವಾಗಿ ರಚಿಸುವ ವಸತಿ ವಿನ್ಯಾಸಗಳಲ್ಲಿ ಪರವಾನಗಿ ಇಲ್ಲದೆ ಮನೆ ಕಟ್ಟುತ್ತಿರುವವರ ವಿರುದ್ಧ ಯಾವ ಕ್ರಮವನ್ನು ಕೈಗೊಳ್ಳದೆ ಸುಮ್ಮನಿರುವುದು. ಅತಿ ವೇಗವಾಗಿ ನಗರೀಕರಣಗೊಳ್ಳುತ್ತಿರುವ ಬೆಂಗಳೂರು ಮಹಾನಗರ ಪಾಲಿಕೆ ಸುತ್ತಣ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗಳಲ್ಲಿ ಅನಧಿಕೃತ ವಸತಿ ವಿನ್ಯಾಸಗಳ ರಚನೆ ಕಟ್ಟಡಗಳ ನಿರ್ಮಾಣಕ್ಕೆ ಮೂಲ ಕಾರಣ. ರಿಟ್ ಪ್ರಕರಣದಲ್ಲಿ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳು ಪ್ರತಿವಾದಿಯಾಗಿರಲಿಲ್ಲ. ಆದರೂ ನಗರ ಪ್ರದೇಶದ ನಿವೇಶನಗಳ ಬಗ್ಗೆ ಯಾವುದೇ ಅಧಿಕಾರ ವ್ಯಾಪ್ತಿಯಿಲ್ಲದೇ ಗೌ|| ಉಚ್ಚ ನ್ಯಾಯಾಲಯದಲ್ಲಿ ಅವರು ಪ್ರಮಾಣಪತ್ರವನ್ನು ಸಲ್ಲಿಸಿರುವುದು ಆಶ್ಚರ್ಯ. ಅನಧಿಕೃತ ವಸತಿ ವಿನ್ಯಾಸಗಳಲ್ಲಿ ವಿಂಗಡಣೆಯಾಗಿ ಪರಭಾರೆಯಾದ ನಿವೇಶನಗಳು, ನಿರ್ಮಾಣವಾದ ಮನೆಗಳ ಬಗ್ಗೆ ನೋಂದಣಿ ಕ್ರಯ ಪತ್ರ ಆಧರಿಸಿ ಗ್ರಾಮ ಪಂಚಾಯಿತಿಗಳು ಖಾತೆ ದಾಖಲಾತಿ ನೀಡುವುದನ್ನು ನಿಲ್ಲಿಸಿದರೆ ಅನಧಿಕೃತ ಬೆಳವಣಿಗೆ ನಿಲ್ಲದು. ಬದಲಿಗೆ ಅದರಿಂದ ಗ್ರಾಮ ಪಂಚಾಯಿತಿಗಳ ಆರ್ಥಿಕ ಹಿತಾಸಕ್ತಿಗೇ ನಷ್ಟ. ಅದಕ್ಕೆ ಪೂರಕವಾಗಿ ಎಲ್ಲಾ ಮೂಲ ದಾಖಲೆಗಳನ್ನು ಸಲ್ಲಿಸಿದವರಿಗೆ ಮಾತ್ರ ಇ-ಸ್ವತ್ತು ಖಾತೆ ಮಾಡಬೇಕೆಂಬ ನಿಯಮ ತಂತ್ರಾಂಶಗಳು ರಚಿತವಾದವು. ಜನ ಸಾಮಾನ್ಯರ ಸಂಕಷ್ಟಗಳ ಅರಿವಿಲ್ಲದ ಅಧಿಕಾರಿಗಳು, ಜನಸಂಪರ್ಕವೇ ಇಲ್ಲದ ಯಾವ ಇಲಾಖೆಯ ಕ್ಷೇತ್ರ ಮಟ್ಟದ ಸಮಸ್ಯೆಗಳ ಅರಿವು ಇಲ್ಲದ ವಿದ್ಯುನ್ಮಾನ (NIC) ಇಲಾಖೆಯೊಡಗೂಡಿದಾಗ ಜನ ಸಾಮಾನ್ಯರನ್ನು ಬೆದರಿಸುವ ಪೆಡಂಭೂತವಲ್ಲದೇ ಬೇರೆ ಏನು ಸೃಷ್ಟಿಯಾದೀತು? ಈ ಕಾರಣಕ್ಕೆ ರಚನೆಯಾದ ತಂತ್ರಾಂಶ, ನಿಯಮಗಳನ್ನು ಹಿಂದುಳಿದ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೂ, ಅರಣ್ಯ ಪ್ರದೇಶದಲ್ಲಿ ಜನವಸತಿ ಇರುವ ಮಲೆನಾಡ ವ್ಯಾಪ್ತಿಗೂ ಅನ್ವಯಿಸಿದಾಗ ಜನರ ಹಿತ ಕಾಯುವುದು ಸಾಧ್ಯವೇ? ಒಟ್ಟಾರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮೀಣ ಪ್ರದೇಶದ ಜನತೆಗೆ ಸಮಸ್ಯೆಗಳ ಸರಮಾಲೆ ಉದ್ಭವವಾಗಿರುವುದು 'ವಿದ್ಯುನ್ಮಾನ ಸ್ವತ್ತು ನಿಯಮ ಹಾಗೂ ತಂತ್ರಾಂಶ' ಎಂಬುದರಲ್ಲಿ ಸಂಶಯವಿಲ್ಲ.

2. ಅತಿ ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ಮಹಾನಗರದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಖಾಸಗಿ ಆಸ್ತಿ ಅಭಿವೃದ್ಧಿ ಸಂಸ್ಥೆಗಳು, ಗೃಹ ನಿರ್ಮಾಣ ಸಹಕಾರ ಸಂಘಗಳು, ಅಭಿವೃದ್ಧಿ ಪಡಿಸುವ ವಸತಿ ವಿನ್ಯಾಸಗಳಿಗೆ ಜಮೀನನ್ನು ಒದಗಿಸಲು ನಗರ ಪಾಲಿಕೆ ಗಡಿ ಹತ್ತಿರದ ಹಸಿರು ವಲಯವನ್ನು ಹಳದಿ ವಲಯವನ್ನಾಗಿ ಪರಿವರ್ತಿಸಿ ಹಸಿರು ವಲಯ ಪಟ್ಟಿಯನ್ನು ಬೆಂಗಳೂರುನಿಂದ ದೂರ ದೂಡುವ ಅವಸರದಲ್ಲಿ ಆ ವಿನೂತನ ಹಸಿರು ವಲಯದಲ್ಲಿ ಬರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಬೆಳವಣಿಗೆಯನ್ನು

ಪರಿಗಣಿಸದಿರುವುದು ದುರದೃಷ್ಟಕರ. ಹಣವಂತರು ಬೆಂಗಳೂರು ನಗರ ವ್ಯಾಪ್ತಿಯಲ್ಲಿ ನಿವೇಶನಗಳನ್ನು ದುಬಾರಿ ಬೆಲೆಗೆ ಕ್ರಯಕ್ಕೆ ಪಡೆಯಲು ಪ್ರಯತ್ನಿಸುವಾಗ ಉದ್ಯೋಗ ನಿಮಿತ್ತ ಬೆಂಗಳೂರು ನಗರಕ್ಕೆ ಬಂದ ಬಡವರು, ಮಧ್ಯಮ ವರ್ಗದವರು, ನಗರ ಸಮೀಪದ ಪಂಚಾಯಿತಿಗಳ ವ್ಯಾಪ್ತಿಯ ಕೃಷಿ ಜಮೀನುಗಳಲ್ಲಿ ರಾತ್ರೋರಾತ್ರಿ ರಚಿತವಾಗುತ್ತಿದ್ದ ಕಂದಾಯ ಭೂಮಿಯಲ್ಲಿನ ವಸತಿ ವಿನ್ಯಾಸಗಳನ್ನೇ ಅವಲಂಬಿಸಿ ಸಣ್ಣ ಸಣ್ಣ ನಿವೇಶನಗಳನ್ನು ತಮಗೆ ನಿಟುಕುವ ದರದಲ್ಲಿ ಕ್ರಯಕ್ಕೆ ಪಡೆದು ಮನೆಯನ್ನು ಕಟ್ಟಿಕೊಂಡು ವಾಸಿಸತೊಡಗಿದರು. ಅಂತಹ ಗ್ರಾಮಗಳು ಹಸಿರು ಪಟ್ಟಿ ವ್ಯಾಪ್ತಿಗೆ ಸೇರಿದ್ದರೂ ಇಡೀ ಕೃಷಿ ಭೂಮಿಯಲ್ಲಿ ವಸತಿ ಉದ್ದೇಶದ ಮನೆಗಳನ್ನು ನಿರ್ಮಿಸಿಕೊಂಡು ವಾಸವಾಗಿರುವುದು ವಾಸ್ತವಾಂಶ. ಹೆಸರುಘಟ್ಟ, ಬನ್ನೇರುಘಟ್ಟ, ಬಾಗಲೂರು ಕೆಲವೇ ಉದಾಹರಣೆಗಳು. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲಾ ವ್ಯಾಪ್ತಿಯ ಅನೇಕ ಗ್ರಾಮ ಪಂಚಾಯಿತಿಗಳು ಈ ರೀತಿ ಶರವೇಗದಲ್ಲಿ ವಸತಿ ಉದ್ದೇಶಕ್ಕೆ ಕಲ್ಪವೃಕ್ಷಗಳಾಗಿ ಪರಿವರ್ತನೆಯಾಗಿವೆ. ಅಲ್ಲಿ ವಾಸಿಸುತ್ತಿರುವ ಜನರೆಲ್ಲರೂ ಜನಗಣತಿಯಲ್ಲಿ ಎಣಿಕೆಯಾಗಿ ಮತದಾರರ ಪಟ್ಟಿಯಲ್ಲಿ ಸೇರಿದ್ದು ಮತ ಚಲಾಯಿಸುತ್ತಿರುವ ಭಾರತದ ಸತ್ಪ್ರಜೆಗಳು. ಅವರು ವಾಸಿಸುತ್ತಿರುವ ಮನೆಗಳನ್ನು ಅನ್ಯಾಕ್ರಾಂತವಾಗದ, ಹಸಿರು ವಲಯಕ್ಕೆ ಸೇರಿದ ಜಮೀನಿನಲ್ಲಿ ನಗರ ಯೋಜನಾ ಪ್ರಾಧಿಕಾರದ ಅನುಮೋದನೆಯಿಲ್ಲದ ವಸತಿ ವಿನ್ಯಾಸದಲ್ಲಿ ಅಕ್ರಮವಾಗಿ ನಿರ್ಮಿಸಿರುವ ಮನೆಗಳೆಂದು ಘೋಷಿಸಿ ಅವುಗಳನ್ನು ಕೆಡವಲು ಸಾಧ್ಯವೇ ಇಲ್ಲ. ಅಂತಹ ಕ್ರಮ ನಾಗರೀಕ ಸಮಾಜದಲ್ಲಿ ಸಾಧುವೂ ಅಲ್ಲ.

3. ಯಾವುದೇ ಕಾಯಿದೆಯನ್ನು ಕೇವಲ ಘೋಷಣೆ, ಗೆಜೆಟ್ ಪ್ರಕಟಣೆ ಮೂಲಕ ಅಮಲಿಗೆ ತರಲಾಗದು. ಅಂತಹ ಕಾಯಿದೆಯ ಅಂಶಗಳನ್ನು ಇಲಾಖೆಯ ಸಿಬ್ಬಂದಿ ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಟ್ಟು ಜಾರಿಗೆ ತರಲು ಸಜ್ಜಾಗಿರಬೇಕು. ಕಾಯಿದೆಯ ಅಂಶಗಳನ್ನು ಜಾರಿಗೆ ತರಬೇಕು ಅರ್ಥಾತ್ ಕಾಯಿದೆ ಉಲ್ಲಂಘನೆಯಾದಲ್ಲಿ ಸಂಬಂಧಿಸಿದವರ ಮೇಲೆ ಕಾನೂನು ಕ್ರಮ ಜಾರಿಯಾಗಬೇಕು. ಗ್ರಾಮೀಣ ಮತ್ತು ನಗರ ಯೋಜನಾ ಕಾಯಿದೆ, ವಿವಿಧ ನಗರ ಅಭಿವೃದ್ಧಿ ಯೋಜನಾ ಪ್ರಾಧಿಕಾರಗಳು, ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರ ವಲಯ ಅಭಿವೃದ್ಧಿ ಪ್ರಾಧಿಕಾರ, ಕಂದಾಯ ಇಲಾಖೆ, ಅರಣ್ಯ ಇಲಾಖೆಗಳು ತಾವು ಕಠಿಣವಾಗಿ ಜಾರಿಗೊಳಿಸಬೇಕಾದ ಕಾನೂನು ಕ್ರಮವನ್ನು, ಕಾನೂನು ಉಲ್ಲಂಘನೆ ಪ್ರಕರಣಗಳಲ್ಲಿ ಕೈಗೊಳ್ಳದ ಕಾರಣ ಸಾವಿರಾರು ಅನಧಿಕೃತ ಮನೆಗಳು ಹಸಿರು ವಲಯದಲ್ಲಿ ಎದ್ದಿವೆ.

4. ಬೆಂಗಳೂರು ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ನಗರ. ರಾಜ್ಯದ ವಿವಿಧ ಭಾಗಗಳಿಂದ ಶಿಕ್ಷಣ ಉದ್ದೇಶಕ್ಕಾಗಿ, ಉದ್ಯೋಗಕ್ಕಾಗಿ ಕುಟುಂಬಗಳು ಇಲ್ಲಿಗೆ ವಲಸೆ ಬಂದರೆ ರಾಜ್ಯದ ವಿವಿಧ ಜಿಲ್ಲೆಗಳಿಂದಲೂ

ಉದ್ಯೋಗ ಅರಸುತ್ತಾ ಗ್ರಾಮೀಣ ಜನ ಬೆಂಗಳೂರಿನತ್ತ ಧಾವಿಸುತ್ತಿರುವುದು ಆಘಾತಕಾರಿ ವಿಷಯ. ಎಲ್ಲರಿಗೂ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ನಿವೇಶನ ಸ್ಥಳಾವಕಾಶ ಕಲ್ಪಿಸಲು ಸರ್ಕಾರದಿಂದ ಸಾಧ್ಯವಿಲ್ಲ. ಬೆಂಗಳೂರಿನ ಸುತ್ತಮುತ್ತ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಮೀಪ ಅನೇಕ ಕೈಗಾರಿಕೆಗಳು ಬರುತ್ತಿದ್ದು ಅವುಗಳಲ್ಲಿ ದುಡಿಯುವ ಜನ ಹತ್ತಿರದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಗ್ರಾಮಗಳಲ್ಲಿ ವಾಸಕ್ಕೆ ಹಸಿರು ವಲಯದಲ್ಲಿ ಜಾಗ ಹುಡುಕಿಕೊಳ್ಳುವುದು ಸ್ವಾಭಾವಿಕ. ಆದ್ದರಿಂದಲೇ ಕೃಷಿ ಜಮೀನುಗಳನ್ನು ಅನ್ಯಾಕ್ರಾಂತ ಮಾಡದೆಯೇ ನಿವೇಶನಗಳನ್ನಾಗಿ ವಿಂಗಡಿಸಿ ಪರಭಾರೆ ಮಾಡಲಾಗುತ್ತಿದೆ. ದೊಡ್ಡ ದೊಡ್ಡ ಉದ್ಯಮಿಗಳಿಗೆ ಜಾಗ ಕೊಡುವ ಸರ್ಕಾರ ಆ ಉದ್ದಿಮೆಗಳಲ್ಲಿ ದುಡಿಯಲು ಬರುವವರಿಗೆ ವಸತಿ ಎಲ್ಲಿ ಎಂಬ ಪ್ರಶ್ನೆಯನ್ನು ಬಂಡವಾಳ ತೊಡಗಿಸುವ ಉದ್ಯಮದಾರರನ್ನು ಕೇಳುವುದೂ ಇಲ್ಲ. ಸರ್ಕಾರವೂ ಆ ಬಗ್ಗೆ ಗಮನ ಹರಿಸುವುದೂ ಇಲ್ಲ. ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ತರಾತುರಿಯಲ್ಲಿ ಕೃಷಿ ಜಮೀನಿನಲ್ಲಿ ಬೆಳವಣಿಗೆಯಾಗುವ ವಸತಿ ವಿನ್ಯಾಸಗಳು ಬೇಡಿಕೆ ಆಧಾರಿತ. ಅಲ್ಲಿ ನಿವೇಶನ ಕೊಂಡವರು ತಕ್ಷಣವೇ ತಾತ್ಕಾಲಿಕವಾಗಿ ಮನೆಗಳನ್ನು ಕಟ್ಟಿಕೊಂಡು ವಾಸಿಸಲು ಆರಂಭಿಸುತ್ತಾರೆ. ನಂತರ ಪಕ್ಕಾ ಮನೆ ನಿರ್ಮಾಣಕ್ಕೆ ಕೈ ಹಾಕುತ್ತಾರೆ. ಸ್ವಂತ ಹಣವಿರುವವರು ಪರವಾನಗಿ ಪಡೆಯದೆ ಮನೆಯನ್ನು ಪೂರ್ಣಗೊಳಿಸುತ್ತಾರೆ. ಆದರೆ ಅಂತಹ ನಿವೇಶನದಾರರಿಗೆ ಇ-ಸ್ವತ್ತಿನಲ್ಲಿ ಖಾತೆ ನೀಡಿ ಕಟ್ಟಡ ಪರವಾನಗಿ ನೀಡಲು ಪಂಚಾಯಿತಿಗೆ ಸಾಧ್ಯವಾಗದ ಕಾರಣ ಅಧಿಕೃತವಾಗಿ ಬ್ಯಾಂಕ್ ಸಾಲ ಪಡೆದು ಮನೆ ಕಟ್ಟಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ನಿವೇಶನಗಳನ್ನು ಅವರು ನೋಂದಾಯಿತ ಕ್ರಯ ಪತ್ರದ ಮುಖಾಂತರ ಖರೀದಿಸಿದ್ದರೂ ಅದಕ್ಕೆ ಮಾನ್ಯತೆ ನೀಡದೆ ಅವರ ಹಕ್ಕು ನಿರಾಕರಿಸುತ್ತಿರುವುದು ನಾಗರೀಕ ಕಲ್ಯಾಣ ಹಿತದೃಷ್ಟಿಯ ಬೆಳವಣಿಗೆಯಲ್ಲ. ಬೆಂಗಳೂರು ಸುತ್ತ ಮುತ್ತ ಹೊರಗಿನಿಂದ ಬಂದ ಭೂ-ಮಾಫಿಯಾದವರು ದುಬಾರಿ ಬೆಲೆ ನೀಡಿ ರೈತರಿಂದ ಖರೀದಿಸಿದ ನೂರಾರು ಎಕರೆ ಜಮೀನಿಗೆ ಸಂಬಂಧಿಸಿದಂತೆ ಕ್ಷಿಪ್ರ ಕಾಲದಲ್ಲಿ ಹಸಿರು ವಲಯ ಹಳದಿ ವಲಯವಾಗಿ ಪರಿವರ್ತನೆಯಾಗುತ್ತದೆ, ಕೃಷಿ ಉದ್ದೇಶದಿಂದ ವಸತಿ/ವಾಣಿಜ್ಯ/ಕೈಗಾರಿಕಾ ಉದ್ದೇಶಕ್ಕೆ ಅನ್ಯಾಕ್ರಾಂತ ಆಗುತ್ತದೆ, ನಗರ ಯೋಜನಾ ಪ್ರಾಧಿಕಾರದಿಂದ ವಸತಿ ವಿನ್ಯಾಸ, ಕಟ್ಟಡ ವಿನ್ಯಾಸಗಳೂ ಅನುಮೋದನೆಯಾಗುತ್ತವೆ. ಅಂತಹ ಬೃಹತ್ ವಸತಿ ವಿನ್ಯಾಸಗಳಿಗೆ ಕೋಟೆ ಗೋಡೆಯಂತಹ ಆವಾರ ನಿರ್ಮಿಸಿ ಒಳಗೆ ಗಿಡಮರಗಳನ್ನು ನೆಟ್ಟಿರುತ್ತಾರೆ. ಅವುಗಳಲ್ಲಿ ಒಂದು ಮನೆಯೂ ನಿರ್ಮಾಣವಾಗಿಲ್ಲ. ಅಂತಹ ವಸತಿ ವಿನ್ಯಾಸಗಳು ರಿಯಲ್ ಎಸ್ಟೇಟ್ ಉದ್ದಿಮೆದಾರರ ಲಾಭಕೋರ ಯೋಜನೆಗಳು. ಅಂತಹ ಅನೇಕ ಯೋಜನೆಗಳು ಯಶಸ್ವಿಯಾಗಿ ಅನುಷ್ಠಾನಗೊಂಡಿವೆ. ಆದರೆ ಒಬ್ಬ ರೈತ ತನ್ನ ಮಗಳ ಮದುವೆ ಮಾಡಲು ತನ್ನ ಒಂದು ಎಕರೆ ಜಮೀನಿನಲ್ಲಿ ಅರ್ಧ ಮಾರಾಟ ಮಾಡಬೇಕಾದಾಗ ಅಥವಾ ತನ್ನ ಮಕ್ಕಳಿಗೇ ಜಮೀನನ್ನು ಪಾಲು ಮಾಡಬೇಕಾದಾಗ ಯಾರಿಂದಲೂ ಅನುಮತಿ ದೊರೆಯುವುದಿಲ್ಲ. ಅನ್ಯಾಕ್ರಾಂತ ದೂರದ ಮಾತು, ನೋಂದಣಿ ಸಾಧ್ಯವೇ ಇಲ್ಲ. ಕನಿಷ್ಠ ಹತ್ತು ಎಕರೆ

ಪಿತ್ರಾರ್ಜಿತ ಜಮೀನಿನಲ್ಲಿ ಮಾತ್ರ ಹೊಸ ಮಾಲೀಕನಿಂದ ಬೇರೆ ಮಾಲೀಕನಿಗೆ, ಕೃಷಿ ಉದ್ದೇಶದಿಂದ ಕೃಷಿಯೇತರ ಉದ್ದೇಶಕ್ಕೆ ಪರಿವರ್ತನೆ ಕುರಿತ ಅದರಲ್ಲಿ ಬೇಕಾದ ವಸತಿ ವಿನ್ಯಾಸದ ಅನುಮೋದನೆ ಸಾಧ್ಯ. ಈ ಪರಿವರ್ತನೆಗೆ ಬಹಳ ಬೆಲೆ ತೆರಬೇಕು. ಅದರಲ್ಲಿ ಭ್ರಷ್ಟಾಚಾರದ ಅಂಶವೂ ಅಡಕವಾಗಿದೆ. ಇದು ಬೆಂಗಳೂರಿನ ಸುತ್ತಮುತ್ತಲೂ ಪ್ರಚಲಿತ ವಾಸ್ತವಾಂಶ. ಹಲವು ನಿವಾಸಿಗಳಾದ ಸ್ಥಳೀಯ ರೈತರಿಗೆ ಅವರ ಜಮೀನಿನಿಂದಲೇ ಲಾಭ ಬರುವಂತೆ ಸರ್ಕಾರದ ಯಂತ್ರ ಅಡ್ಡ ಬರುತ್ತದೆ. ಬೆಂಗಳೂರಿನ ರಿಯಲ್ ಎಸ್ಟೇಟ್ ಕುಳಗಳಿಗೆ ಮಣೆ ಹಾಕುತ್ತದೆ. ಇದು ಇಂದಿನ ನಮ್ಮ ಬೆಂಗಳೂರಿನ ಸದ್ಯದ ಪರಿಸ್ಥಿತಿಯ ವಿಪರ್ಯಾಸ.

5. ಈ ಹಿಂದೆ ಭೂ ಕಂದಾಯ ಕಾಯ್ದೆ, 1964 ರಂತೆ ರಾಜ್ಯದ ಕೃಷಿ ಹಾಗೂ ಕೃಷಿಯೇತರ ಜಮೀನುಗಳ ಖಾತೆ ನಿರ್ವಹಣೆಯನ್ನು ಕಂದಾಯ ಇಲಾಖೆಯು ಮುಂದಾಂತರ ಮಾಡಲಾಗುತ್ತಿತ್ತು. ನಂತರ ಗ್ರಾಮ ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದಾಗ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಕೆಲಸವನ್ನು ಗ್ರಾಮ ಲೆಕ್ಕಿಗರೇ ನಿರ್ವಹಿಸುತ್ತಿದ್ದರು. 1985 ರಲ್ಲಿ ಜಾರಿಗೆ ಬಂದ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳ ಅಧಿನಿಯಮ 1983ರಲ್ಲಿ ಮಂಡಲ ಪಂಚಾಯಿತಿಗಳಿಗೆ ಪ್ರತ್ಯೇಕ ಸಿಬ್ಬಂದಿಯನ್ನು ನಿಯೋಜಿಸಿ ಕರ/ತೆರಿಗೆ ಆಕರಣೆ ಅಧಿಕಾರಗಳನ್ನು ಪ್ರಾಪ್ತ ಗೊಳಿಸಿ ವಿಕೇಂದ್ರೀಕರಣ ವ್ಯವಸ್ಥೆಗೆ ರಾಜ್ಯ ಸರ್ಕಾರ ದಿಟ್ಟ ಹೆಜ್ಜೆ ಇಟ್ಟಿತು. ಪಂಚಾಯತ್ ರಾಜ್ ಕಾಯ್ದೆ, 1993 ಜಾರಿಗೆ ಬಂದ ನಂತರ ವಿಕೇಂದ್ರೀಕರಣದ ತತ್ವದ ಆಧಾರದಲ್ಲಿ ಕೃಷಿಯೇತರ ಜಮೀನುಗಳ/ಕಟ್ಟಡಗಳ ದಾಖಲೆಗಳ ನಿರ್ವಹಣೆಯನ್ನು ಮಾತ್ರ ಕಾರ್ಯದರ್ಶಿ/ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮಾಡುವಂತೆ ಕಾಯ್ದೆಯ ಅನುಸೂಚಿಯ ಲೆಕ್ಕಪತ್ರಗಳ ನಿಯಮದಡಿ ಅವಕಾಶ ಕಲ್ಪಿಸಲಾಗಿದೆ. ವ್ಯವಸಾಯ ಭೂಮಿಯ ಬಗ್ಗೆ ಹಕ್ಕು ಪತ್ರ ದಾಖಲೆ ನಿರ್ವಹಣೆಗೆ ಭೂಕಂದಾಯ ಕಾಯ್ದೆ, 1964 ರ ಕಲಂ 128 ರಲ್ಲಿ ರಾಜ್ಯ ಇಲಾಖೆಯ ವಿವಿಧ ಹಂತದ ಪ್ರಾಧಿಕಾರಗಳಿಗೆ ಅಧಿಕಾರ ನಿರ್ದಿಷ್ಟಪಡಿಸಲಾಗಿದೆ. ನೂತನ ತಂತ್ರಜ್ಞಾನ ಅಳವಡಿಸಿ ಭೂ-ಒಡೆತನ ಹಕ್ಕುಗಳ ಬಗೆಗಿನ ಗಣಕೀಕೃತ ಮಾಹಿತಿಯನ್ನು ವಿತರಿಸುವ ವ್ಯವಸ್ಥೆಯನ್ನು ಕರ್ನಾಟಕ ಸರ್ಕಾರವು ಜಾರಿಗೆ ತಂದಿರುತ್ತದೆ. ಆದರೆ ವ್ಯವಸಾಯೇತರ ಜಮೀನಿನಲ್ಲಿ ನಿರ್ಮಾಣವಾಗುವ ಹಾಗೂ ಇತರ ಕಟ್ಟಡ ಆಸ್ತಿಗಳ ಹಕ್ಕು ದಾಖಲೆ ನಿರ್ವಹಣೆಯ ಬಗ್ಗೆ ಪಂಚಾಯತ್‌ರಾಜ್ ಕಾಯ್ದೆಯ ಯಾವುದೇ ನಿರ್ದಿಷ್ಟ ಕಲಂನಲ್ಲಿ ಗ್ರಾಮ ಪಂಚಾಯತಿಗಳಿಗೆ ಅಧಿಕಾರ ನೀಡದಿರುವುದು ಕಾನೂನು ರಚನೆಯಲ್ಲಿರುವ ಗಂಭೀರವಾದ ಲೋಪವಾಗಿರುತ್ತದೆ. ಅದಕ್ಕೆ ಪರಿಹಾರ ಕಂಡು ಕೊಳ್ಳುವುದು ಇಂದಿನ ಅನಿವಾರ್ಯ ಅಗತ್ಯ.

************

# ಭಾಗ–IV

## ತಕ್ಷಣ ಆಗಬೇಕಾದ ಆಡಳಿತಾತ್ಮಕ ಹಾಗೂ ತಾಂತ್ರಿಕ ಸುಧಾರಣೆಗಳು:

- ಈ ಹಿಂದೆ ಎರಡು ಬಾರಿ ಅವಕಾಶ ನೀಡಿದ್ದರೂ ಕೆಲವು ಆಸ್ತಿಗಳನ್ನು ಪಂಚತಂತ್ರದಲ್ಲಿ ತರಲು ಸಾಧ್ಯವಾಗಿಲ್ಲ. ಅಂತಹ

(1) ಎಲ್ಲಾ ಆಸ್ತಿಗಳನ್ನು ಪಂಚತಂತ್ರಕ್ಕೆ ದಾಖಲಿಸಲು ಅಂತಿಮವಾಗಿ ಪೂರ್ವಭಾವಿ ಪ್ರಚಾರದೊಂದಿಗೆ ಮುಂದಿನ ಏಪ್ರಿಲ್, ಮೇ ತಿಂಗಳಲ್ಲಿ 2 ತಿಂಗಳ ಕಾಲಾವಕಾಶ ಕೊಡುವುದು. ಈ ಅವಧಿಯಲ್ಲಿ ಪ್ರತಿನಿತ್ಯ ಸೇರ್ಪಡೆ ಮಾಡುವ ಆಸ್ತಿಗಳನ್ನು ತಾಲ್ಲೂಕಿನ ಸಹಾಯಕ ನಿರ್ದೇಶಕರು ಅಥವಾ ತತ್ಸಮಾನ/ಹಿರಿಯ ದರ್ಜೆಯ ಅಧಿಕಾರಿಗಳು ಮರುದಿನವೇ ಪರಿಶೀಲಿಸುವಂತಾಗಬೇಕು.

(2) ಇ-ಸ್ವತ್ತು ತಂತ್ರಾಂಶದ ಅನುಷ್ಠಾನದಲ್ಲಿ ದತ್ತಾಂಶವನ್ನು ಆರೋಹಿಸಲು ಈ ಹಿಂದೆ ದಿನದ 24 ಗಂಟೆಗಳ ಕಾಲಾವಕಾಶವಿತ್ತು. ಆದರೆ ಬೆಂಗಳೂರು ಸುತ್ತಮುತ್ತಣ ಅಕ್ರಮಗಳಿಗೆ ಕಡಿವಾಣ ಹಾಕಲು ಕಾಲಾವಧಿಯನ್ನು ಕೆಲಸದ ದಿನಗಳ ಬೆಳಿಗ್ಗೆ 10.00 ಗಂಟೆಯಿಂದ ಸಾಯಂಕಾಲ 5:30 ಗಂಟೆಯವರೆಗೆ ಸೀಮಿತಗೊಳಿಸಿದೆ. ಪ್ರತಿ ಪ್ರಕರಣದಲ್ಲಿ ದತ್ತಾಂಶ ಆರೋಹಿಸಲು 15–20 ನಿಮಿಷಗಳ ಕಾಲಾವಕಾಶ ಬೇಕಾದ್ದರಿಂದ ಅವಧಿಯನ್ನು ವಿಸ್ತರಿಸಲು ಬಹಳ ಜಿಲ್ಲೆಗಳಿಂದ ಬೇಡಿಕೆ ಇರುತ್ತದೆ. ಆದಕಾರಣ ದತ್ತಾಂಶವನ್ನು ಆರೋಹಿಸಲು ಹೆಚ್ಚು ಕಾಲಾವಕಾಶ ಲಭ್ಯಗೊಳಿಸಲು ಗಣಕ ವ್ಯವಸ್ಥೆ ಅವಧಿಯನ್ನು ಬೆಳಿಗ್ಗೆ 9.00 ಗಂಟೆಯಿಂದ ಸಾಯಂಕಾಲ 07.30 ಗಂಟೆಯವರೆಗೆ ಮಾತ್ರ ವಿಸ್ತರಿಸಬೇಕು. ಆದರೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ತಮ್ಮ ಅನುಮೋದನೆಯನ್ನು ಕಚೇರಿ ವೇಳೆಯಲ್ಲಿಯೇ ಅಂದರೆ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆ ಅವಧಿಯೊಳಗೆ ನೀಡುವಂತಾಗಬೇಕು.

(3) ಜನಪ್ರತಿನಿಧಿಗಳಿಂದ ಪ್ರಮುಖವಾಗಿ ಬೀದರ್ ಜಿಲ್ಲಾ ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳಿಂದ ನರೇಗಾ ಹಣ ಪಾವತಿಗೆ ಪಂಚಾಯಿತಿ ಅಧ್ಯಕ್ಷರ ಅನುಮೋದನೆ ಪಡೆಯುವಂತೆ ಇ-ಸ್ವತ್ತು ಖಾತೆಗೆ ಅಂತಿಮ ಅನುಮೋದನೆ ನೀಡುವ ಪೂರ್ವದಲ್ಲಿ ಪಂಚಾಯಿತಿ ಅಧ್ಯಕ್ಷರ ಲಾಗಿನ್‌ಗೂ ಪ್ರಸ್ತಾವನೆ ಹೋಗಿ ಸಮ್ಮತಿ ಪಡೆಯಬೇಕೆಂಬ ಒತ್ತಾಯ ಬಂದಿದೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಅಧ್ಯಕ್ಷರಲ್ಲಿ ಈ ಬಗ್ಗೆ ಬಹುತೇಕ ಜಿಲ್ಲೆಗಳಲ್ಲಿ ಸಹಮತವಿರಲಿಲ್ಲ. ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ವಿಷಯವನ್ನು ಮಂಡಿಸಿ ಅನುಮೋದನೆ ಪಡೆದ

ನಂತರವೇ ಇ-ಸ್ವತ್ತು ಖಾತೆ ದಾಖಲೆ ನೀಡುತ್ತಿದ್ದು ಮತ್ತೊಮ್ಮೆ ಅಧ್ಯಕ್ಷರ ಅನುಮತಿ ಅನಾವಶ್ಯಕ ಎಂಬುದು ಅಧಿಕಾರಿಗಳ ಅಭಿಮತ. ಆದರೆ ಎಲ್ಲಾ ಪ್ರಕರಣಗಳನ್ನು ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಮಂಡಿಸಿ ನಿರ್ಣಯ ಕೈಗೊಂಡು ಇ-ಸ್ವತ್ತು ದಾಖಲೆ ನೀಡಲಾಗುತ್ತಿದೆ ಎಂಬುದು ನಿಜವಲ್ಲ. ಕೆಲವು ಗ್ರಾಮ ಪಂಚಾಯತಿಗಳಲ್ಲಿ ಪಂಚಾಯತಿ ನಿರ್ಣಯ ಮಾಡದೆಯೇ ಇ-ಸ್ವತ್ತು ಖಾತಾ ಮಾಡಿರುವುದು, ಇದು ಅಧ್ಯಕ್ಷರಿಗೆ ತಿಳಿಯದಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಅಲ್ಲದೆ ಇ-ಸ್ವತ್ತು ಖಾತಾ ಪ್ರಕರಣಗಳನ್ನು ಎಲ್ಲವನ್ನು ಪ್ರತಿ ತಿಂಗಳಿಗೊಮ್ಮೆ ಜರುಗುವ ಸಾಮಾನ್ಯ ಸಭೆಯಲ್ಲಿ ಮಂಡಿಸಿ ನಿರ್ಣಯ ಕೈಗೊಳ್ಳುವುದಕ್ಕೆ ಸಾಕಷ್ಟು ಕಾಲಾವಕಾಶವಾಗಿ, ಸರ್ಕಾರದ ನಿಗದಿತ ಕಾಲಮಿತಿ 45 ದಿನಗಳಲ್ಲಿ ಅರ್ಜಿ ಇತ್ಯರ್ಥ ಸಾಧ್ಯವಾಗದೆ ಪ್ರಕರಣಗಳು ಬಾಕಿ ಉಳಿಯುವ ಸಾಧ್ಯತೆ ಹೆಚ್ಚು. ಸಾಮಾನ್ಯವಾದ ಇ-ಸ್ವತ್ತು ಪ್ರಕರಣಗಳನ್ನು ನಿಯಮಾನುಸಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಪರಿಶೀಲಿಸಿ ಅಧ್ಯಕ್ಷರ ಲಾಗಿನ್‌ಗೆ ಕಳುಹಿಸಿ ಸಮ್ಮತಿ ಪಡೆದು ಅನುಮೋದಿಸಿದ ನಂತರ ಇ-ಖಾತಾ ದಾಖಲೆ ನೀಡಿ ಅನಂತರ ಜರುಗುವ ಮಾಸಿಕ ಸಾಮಾನ್ಯ ಸಭೆಯಲ್ಲಿ ವಿಷಯವನ್ನು ಮಾಹಿತಿಗಾಗಿ ಮಂಡಿಸಿ ಸಭೆಯ ಗಮನ ಸೆಳೆಯುವುದು ಸೂಕ್ತ. ಗಂಭೀರ, ವಿವಾದಿತ ಪ್ರಕರಣಗಳನ್ನು ಸಾಮಾನ್ಯ ಸಭೆಯಲ್ಲಿಯೇ ನಿರ್ಣಯ ಕೈಗೊಳ್ಳುವುದು ಅನಿವಾರ್ಯ. ಇದರಿಂದ ಸಕಾಲ ಕಾಲಮಿತಿಯಲ್ಲಿ ಬಹುತೇಕ ಸಾರ್ವಜನಿಕರಿಗೆ ಇ-ಸ್ವತ್ತು ದಾಖಲೆ ದೊರಕುವಂತಾಗುತ್ತದೆ. ಆದ್ದರಿಂದ ಇ-ಸ್ವತ್ತು ಪ್ರಕರಣಗಳು ಪಂಚಾಯತಿ ಅಧ್ಯಕ್ಷರ ಲಾಗಿನ್‌ನೂ ಹೋಗಿ ಸಮ್ಮತಿ ಪಡೆಯುವಂತೆ ತಂತ್ರಾಂಶದಲ್ಲಿ ವ್ಯವಸ್ಥೆಯಾಗಬೇಕು. ಆದರೆ ಅಧ್ಯಕ್ಷರು 2 ದಿನಗಳಲ್ಲಿ ಸಮ್ಮತಿ ನೀಡದಿದ್ದರೆ ಪ್ರಕರಣ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಲಾಗಿನ್‌ಗೆ ವಾಪಸ್ಸು ಬಂದು ಅವರು ನಿರ್ಣಯ ಕೈಗೊಳ್ಳುವಂತಾಗಬೇಕು. ತಂತ್ರಾಂಶದಲ್ಲಿ ಈ ಬದಲಾವಣೆ ತರಬೇಕು.

(4) ಬಹಳಷ್ಟು ಪ್ರಕರಣಗಳು ಭೂಮಾಪಕರ ವರದಿಗಾಗಿ ತಡವಾಗುತ್ತಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಭೂಮಾಪಕರು ವರದಿ ಕೊಡುವುದು ಆಸ್ತಿ ಗ್ರಾಮಠಾಣಾ ವ್ಯಾಪ್ತಿಯಲ್ಲಿ ಬರುತ್ತದೆಯೇ ಅಥವಾ ಇಲ್ಲವೇ ಎಂದು ಮಾತ್ರ. ಗ್ರಾಮಠಾಣಾ ನಕ್ಷೆಯು ಗ್ರಾಮಪಂಚಾಯತಿಯಲ್ಲಿ ಲಭ್ಯವಿದ್ದಲ್ಲಿ ನಕ್ಷೆ ಹಾಗೂ ಸ್ಥಳ ಪರಿಶೀಲಿಸಿ ಗ್ರಾಮ ಪಂಚಾಯತಿಯೇ ಈ ಬಗ್ಗೆ ನಿರ್ಣಯ ಕೈಗೊಳ್ಳಲು ಸಾಧ್ಯ. ಇದಕ್ಕೆ ವಿಶೇಷ ಭೂಮಾಪಕರ ವ್ಯವಸ್ಥೆ ಬೇಕಿಲ್ಲ. ಆದ್ದರಿಂದ ಯಾವ ಇ-ಸ್ವತ್ತು ಖಾತಾ ಪ್ರಕರಣವನ್ನು ಭೂ ಮಾಪಕರಿಗೆ ಕಳುಹಿಸುವ ಪ್ರಮೇಯ ಉದ್ಭವಿಸುವುದಿಲ್ಲ. ಗ್ರಾಮ ಪಂಚಾಯತಿ ಅಧ್ಯಕ್ಷರು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳೇ ಸ್ಥಳ ಪರಿಶೀಲಿಸಿ ಅಭಿಪ್ರಾಯ ದಾಖಲಿಸಿದರೆ ಸಾಕು. ಎಲ್ಲಾ ಪ್ರಕರಣಗಳನ್ನು ಭೂ ಮಾಪಕರಿಗೆ ಕಳುಹಿಸುವುದನ್ನು

ನಿರ್ಧರಿಸಬೇಕು. ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕೈಗೊಂಡ ನಿರ್ಣಯದಂತೆ ಅಥವಾ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯ ಠರಾವಿನಂತೆ ಬದಲಾವಣೆಯಾಗಬೇಕು.

(5) ಪ್ರಮುಖವಾಗಿ ಇ-ಸ್ವತ್ತು ಖಾತಾ ದಾಖಲೆ ವಿತರಿಸುವಲ್ಲಿ ಗ್ರಾಮ ಪಂಚಾಯಿತಿ ನಿರ್ಣಯಕ್ಕೆ ಮಾನ್ಯತೆ ದೊರೆಯಬೇಕು. ಯಾವ ದಾಖಲೆ ಇಲ್ಲದೆ ಅನಾದಿಕಾಲದಿಂದ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವ ಪ್ರಕರಣಗಳಲ್ಲಿ, ಹಕ್ಕುಪತ್ರ ಇಲ್ಲದ/ನೀಡದ/ಕಳೆದುಹೋದ ಪ್ರಕರಣಗಳಲ್ಲಿ, ಸರ್ಕಾರದ ವಸತಿ ಯೋಜನೆಗಳಲ್ಲಿ ನಿವೇಶನ, ಮನೆ ಪಡೆದು ವಾಸಿಸುತ್ತಿದ್ದು ಹಕ್ಕು ಪತ್ರ ಕಳೆದುಕೊಂಡ, ಹಕ್ಕು ಪತ್ರ ವಿತರಿಸದೇ ಇರುವ ಪ್ರಕರಣಗಳಲ್ಲಿ ವಾಸ್ತವಾಂಶಗಳನ್ನು ಆಧರಿಸಿ ಆಸ್ತಿಯ ಸ್ಥಳ ಪರಿಶೀಲಿಸಿ ಗ್ರಾಮ ಪಂಚಾಯಿತಿಯು ಕೈಗೊಂಡ ನಿರ್ಣಯವೇ ಅಂತಿಮವಾಗಬೇಕು. ಅದರ ಪ್ರಕಾರವೇ ಖಾತೆ ಬದಲಾವಣೆಯಾಗಬೇಕು. ಈ ಆಸ್ತಿ ತಂತ್ರಾಂಶದಲ್ಲಿ ಅಡಕವಾಗುವಂತಹ ಬದಲಾವಣೆಯಾಗಬೇಕು. ಹೇಗಿದ್ದರೂ ಪಂಚಾಯಿತಿ ನಿರ್ಣಯದಿಂದ ತೊಂದರೆಗೊಳಗಾದವರು ಮೇಲ್ಮನವಿ ಸಲ್ಲಿಸಿ ನಿರ್ಣಯವನ್ನು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗಳ ಎದುರು ಪ್ರಶ್ನಿಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಕಲಂ 269 ಅಡಿಯಲ್ಲಿ ಅವಕಾಶ ಇದ್ದೇ ಇದೆ. ಅಲ್ಲದೇ ಪಂಚಾಯಿತಿ ದಾಖಲೆಗಳಲ್ಲಿ ಮಾಡುವ ಹಕ್ಕು ನಮೂದು, ಉಲ್ಲೇಖಗಳು ಆಸ್ತಿ ಹಕ್ಕಿನ ಅಂತಿಮ ನಿರ್ವಿವಾದ ದೃಢೀಕರಣ ಪ್ರಮಾಣ ಪತ್ರ ಅಲ್ಲ. ಆದ್ದರಿಂದ ಹಕ್ಕು ನಮೂದು ದಾಖಲೆಗಳಲ್ಲಿ ನಮೂನೆ-11, ನಮೂನೆ-11ಬಿ ಇತ್ಯಾದಿ ವರ್ಗೀಕರಣ ಸಲ್ಲದು.

(6) ರಾಜ್ಯದಲ್ಲಿ ದಿನಾಂಕ: 14.06.2013 ರಿಂದ ಇ-ಸ್ವತ್ತು ಜಾರಿಗೆ ಬಂದ ನಂತರ ಗ್ರಾಮ ಪಂಚಾಯಿತಿಗಳು ಗ್ರಾಮ ವ್ಯಾಪ್ತಿಯಲ್ಲಿನ ಎಲ್ಲಾ ಕಟ್ಟಡ/ನಿವೇಶನಗಳಿಗೆ ಖಾತೆ ಮಾಡಿಕೊಡದೇ ತೆರಿಗೆ ವಸೂಲಾತಿ ಸಾಧ್ಯವಿಲ್ಲದಂತಾಗಿದೆ. ಅದೇ ರೀತಿ ಕೃಷಿ ಜಮೀನುಗಳಲ್ಲಿ ಕಟ್ಟಿಕೊಂಡ ಫಾರ್ಮ್‌ಹೌಸ್/ಗೋಡೌನ್/ಮೋಜುದಾಣ/ಕಲ್ಯಾಣ ಮಂಟಪ/ಉಪಹಾರ ಗೃಹ/ತಂಗುದಾಣ ಮುಂತಾದ ಕಟ್ಟಡಗಳಿಗೂ ಸಹ ಕೃಷಿಯೇತರ ಜಮೀನಾಗಿ ಪರಿವರ್ತನೆಗೊಂಡು ಖಾತಾ ಆಗದೇ ತೆರಿಗೆ ವಸೂಲಾತಿ ಸಾಧ್ಯವಿಲ್ಲದಂತಾಗಿದೆ. ವ್ಯಾಪ್ತಿಯಲ್ಲಿನ ಹಲವಾರು ಕಟ್ಟಡಗಳಿಗೆ ಅಗತ್ಯವಿದ್ದ ನೀರು ಪೂರೈಕೆ, ಬೀದಿ ದೀಪ, ಒಳಚರಂಡಿ ವ್ಯವಸ್ಥೆ, ನೈರ್ಮಲ್ಯ ಕಾಪಾಡುವ ವ್ಯವಸ್ಥೆ ಇತ್ಯಾದಿಗಳ ವೆಚ್ಚ ಭರಿಸಿ ಗ್ರಾಮ ಪಂಚಾಯಿತಿಗಳು ಸೌಲಭ್ಯಗಳನ್ನು ಕಲ್ಪಿಸಿದಾಗ್ಯೂ ತೆರಿಗೆ ವಸೂಲಾತಿ ಸಾಧ್ಯವಾಗುತ್ತಿಲ್ಲ. ನಮೂನೆ-11ಎ ಮತ್ತು ನಮೂನೆ-11ಬಿ ಜಾರಿಗೆ ಬಂದ ನಂತರ ಮತ್ತು ಈ ನಮೂನೆಗಳಲ್ಲಿ ಖಾತಾ ನೀಡಲು ಹಲವಾರು ನಿರ್ಬಂಧಗಳನ್ನು ವಿಧಿಸಿದ ಕಾರಣದಿಂದಾಗಿ ಗ್ರಾಮ ಪಂಚಾಯಿತಿಗಳ ಆರ್ಥಿಕ ಸ್ಥಿತಿಯಲ್ಲಿ ಕುಸಿತವಾಗಿರುವುದು ವಾಸ್ತವಾಂಶವಾಗಿದೆ. ಕೆಲವು ಗ್ರಾಮ

ಪಂಚಾಯಿತಿಗಳು ತಮ್ಮ ಸಿಬ್ಬಂದಿಯ ಮಾಸಿಕ ಸಂಬಳ ಪಾವತಿಸಲೂ ಸಹ ಪರದಾಡುವಂತಾಗಿದೆ. ಈ ಹಿನ್ನೆಲೆಯಲ್ಲಿ ಹಿಂದೆ ಕರ್ನಾಟಕ ಜಿಲ್ಲಾ ಪರಿಷತ್ತುಗಳ, ತಾಲ್ಲೂಕ ಪಂಚಾಯಿತಿ ಸಮಿತಿಗಳ, ಮಂಡಲ ಪಂಚಾಯಿತಿಗಳ ಮತ್ತು ನ್ಯಾಯ ಪಂಚಾಯಿತಿಗಳ ಅಧಿನಿಯಮ, 1983 ರ ಕಲಂ 116(1) ರಲ್ಲಿ (ಅನುಬಂಧ-ಎ) ಸ್ಪಷ್ಟವಾಗಿದ್ದ ಕೃಷಿ ಅಥವಾ ಕೃಷಿಯೇತರ ಜಮೀನುಗಳಲ್ಲಿ ನಿರ್ಮಿಸಿದ ಕಟ್ಟಡಗಳಿಗೆ ಯಾವುದೇ ತಾರತಮ್ಯವಿಲ್ಲದೆ ತೆರಿಗೆ/ಕರ ವಿಧಿಸಲು ಪಂಚಾಯಿತಿಗೆ ದತ್ತವಾಗಿದ್ದ ಅಧಿಕಾರವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಕಲಂ 199(1) ರಲ್ಲಿಯೂ (ಅನುಬಂಧ-ಬಿ) ಪ್ರಾಪ್ತ ಮಾಡುವ ನಿಬಂಧನೆ ಅಳವಡಿಸುವುದು ಸೂಕ್ತವೆಂದು ಅಭಿಪ್ರಾಯ ಪಡಲಾಗಿದೆ. ಈ ಕ್ರಮದಿಂದಾಗಿ ರಾಜ್ಯದಲ್ಲಿನ ಗ್ರಾಮ ಪಂಚಾಯಿತಿಗಳ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆಯಾಗಿ ಸಶಕ್ತಗೊಳ್ಳಲು ಸಹಕಾರಿಯಾಗುವುದು.

**********

# ಭಾಗ–V

## ಈ ಸಮಸ್ಯೆಗಳಿಗೆ ಅಂತಿಮವಾದ ದೀರ್ಘಕಾಲದ ಪರಿಹಾರ ಮಾರ್ಗಗಳು :

- ಗ್ರಾಮ ಪಂಚಾಯಿತಿಗಳಿಗೆ ಆದಾಯದ ಮೂಲವಾದ ಮತ್ತು ಅನೇಕ ಸರ್ಕಾರಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ, ಫಲಾನುಭವಿಗಳ ಆಯ್ಕೆಗೆ ಆಧಾರವಾದ ಗ್ರಾಮಠಾಣಾ ವ್ಯಾಪ್ತಿಯ ಹಾಗೂ ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿತವಾದ ಕೃಷಿ ಜಮೀನುಗಳಲ್ಲಿ ನಿರ್ಮಾಣವಾಗುವ ಆಸ್ತಿಗಳ ಮಾಲೀಕತ್ವ/ಅನುಭೋಗದಾರಿಕೆಯ ವಾಸ್ತವ ಪರಿಸ್ಥಿತಿಯನ್ನು ಪ್ರತಿಫಲಿಸುವಂತೆ ದಾಖಲೆಗಳ ನಿರ್ವಹಣೆ ಮಾಡುವ ಜವಾಬ್ದಾರಿ, ಅಂತಹ ಆಸ್ತಿಗಳ ಗಡಿಗುರುತು ವಿಸ್ತೀರ್ಣದ, ಅನುಭೋಗದಾರಿಕೆಯ ಬಗ್ಗೆ ಉದ್ಭವವಾಗುವ ಸಣ್ಣ ವಿವಾದ/ವ್ಯಾಜ್ಯಗಳನ್ನು ಸ್ಥಳೀಯವಾಗಿ ಇತ್ಯರ್ಥಪಡಿಸುವ ಅಧಿಕಾರವನ್ನು, ಗ್ರಾಮ ಪಂಚಾಯಿತಿಗಳಿಗೆ ಗ್ರಾಮ ಸ್ವರಾಜ್ಯ ಕಾಯಿದೆಯ ಕಲಂ 199 ಅಡಿಯಲ್ಲಿ ಸೇರ್ಪಡೆ ಮಾಡಿ ಪ್ರಾಪ್ತಗೊಳಿಸಬೇಕು (ಅನುಬಂಧ–ಉ). ನಂತರ ಈ ಜವಾಬ್ದಾರಿಯ ನಿರ್ವಹಣೆಗಾಗಿ ನಿಯಮಗಳನ್ನು ರಚಿಸಿ ಪ್ರಕಟಿಸಬೇಕು.

- ಗ್ರಾಮೀಣ ಸೊಗಡನ್ನು ಕಳೆದುಕೊಂಡು ವೇಗವಾಗಿ ನಗರೀಕರಣಗೊಳ್ಳುತ್ತಿರುವ, ಪಂಚಾಯತ್ ರಾಜ್ ಕಾಯಿದೆಯ ಜನಸಂಖ್ಯೆ ಮಿತಿ ಮೀರಿದ ಪಂಚಾಯಿತಿಗಳನ್ನು ಹತ್ತಿರದ ನಗರ/ ಪಟ್ಟಣ ಸ್ಥಳೀಯ ಸಂಸ್ಥೆಯ ವ್ಯಾಪ್ತಿಗೆ ವಿಲೀನಗೊಳಿಸುವ ಅಥವಾ ಸ್ವತಂತ್ರ ಪಟ್ಟಣ/ನಗರ ಸ್ಥಳೀಯ ಸಂಸ್ಥೆಗಳನ್ನಾಗಿ ಘೋಷಿಸುವ ಕೆಲಸ ಮೊದಲು ಆಗಬೇಕು. ಆಗ ನಗರ/ಪಟ್ಟಣ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳ ಹಕ್ಕು ದಾಖಲೆಗಳ ನಿರ್ವಹಣೆಯನ್ನು ಸಂಬಂಧಿಸಿದ ನಗರ/ಪಟ್ಟಣ ಸ್ಥಳೀಯ ಸಂಸ್ಥೆಗೆ ಅನ್ವಯವಾಗುವ ಕಾನೂನು ಅಡಿಯಲ್ಲಿ ಪಟ್ಟಣ ಭೂಮಾಪಕರ ನೆರವಿನಿಂದ ಸ್ಥಳೀಯ ಸಂಸ್ಥೆ ಸಿಬ್ಬಂದಿ ಮುಖಾಂತರ ಮಾಡುವಂತಾಗುವುದು. ಈ ಪ್ರಕ್ರಿಯೆಗೆ ಪಂಚಾಯತ್ ರಾಜ್ ಇಲಾಖೆ ಹಾಗೂ ಪೌರಾಡಳಿತ ಇಲಾಖೆಗಳು ಕೂಡಲೇ ಕೈಜೋಡಿಸುವ ಅಗತ್ಯವಿದೆ.

- ಬೃಹತ್ ನೀರಾವರಿ, ವಿದ್ಯುತ್ ಯೋಜನೆಗಳ ಅನುಷ್ಠಾನದಿಂದ ಸ್ಥಳಾಂತರಗೊಂಡ ಜನರ ಪುನರ್ವಸತಿ ಕೇಂದ್ರಗಳು. ಅನಾದಿ ಕಾಲದಿಂದ ಇರುವ ಲಂಬಾಣಿ ತಾಂಡಾ, ನಾಯಕರ ಹಟ್ಟಿ, ಗೊಲ್ಲರ ದೊಡ್ಡಿಗಳನ್ನು, ತುಂಗಭದ್ರಾ ಯೋಜನೆಯ ಅಚ್ಚುಕಟ್ಟು ಪ್ರದೇಶದಲ್ಲಿ ನಿರ್ಮಾಣಗೊಂಡಿರುವ ಕ್ಯಾಂಪ್‌ಗಳನ್ನು, ಸ್ವತಂತ್ರ ಗ್ರಾಮಗಳನ್ನಾಗಿ ಘೋಷಿಸಿ ಈವರೆಗೆ ಆಗಿರುವ ಅಭಿವೃದ್ಧಿಯ ಕ್ಷೇತ್ರವನ್ನು ಪರಿಗಣಿಸಿ ಗ್ರಾಮದ ಗಡಿ ನಿಗದಿಪಡಿಸಿ ಗ್ರಾಮಠಾಣಾ ನಕ್ಷೆ ತಯಾರಿಸಿ, ರಾಜ್ಯ ಸರ್ಕಾರದ ಕಂದಾಯ ಇಲಾಖೆಯ ಮುಖಾಂತರ ಪ್ರಕಟಿಸುವ ಕ್ರಮ ಕೂಡಲೇ ಆಗಬೇಕು. ನಂತರ

ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ಗ್ರಾಮಠಾಣಾ ನಕ್ಷೆಗಳನ್ನು ಪೂರೈಸುವ ವ್ಯವಸ್ಥೆಯಾಗಬೇಕು. ಈ ಪ್ರಕ್ರಿಯೆ ಕಂದಾಯ ಇಲಾಖೆಯಲ್ಲಿ ಜರುಗುತ್ತಿದ್ದು ಇದರ ವೇಗವನ್ನು ಹೆಚ್ಚಿಸುವ ಅವಶ್ಯಕತೆಯಿದೆ.

- 1930ರಲ್ಲಿ ಗ್ರಾಮಠಾಣಾಗಳನ್ನು ಅಳತೆ ಮಾಡಿ ನಕ್ಷೆಗಳನ್ನು ತಯಾರಿಸಲಾಗಿದ್ದು ನಂತರದ ಕಾಲದಲ್ಲಿ ಜನಸಂಖ್ಯೆ ಹೆಚ್ಚಳ, ಅಭಿವೃದ್ಧಿ ಕಾರ್ಯಗಳ ಅನುಷ್ಠಾನ ಇತ್ಯಾದಿ ಕಾರಣಗಳಿಂದ ಕಟ್ಟಡಗಳು ಹಿಂದಿನ ಗ್ರಾಮಠಾಣಾ ವ್ಯಾಪ್ತಿಯ ಹೊರಗೆ ಅನ್ಯಾಕ್ರಾಂತಗೊಂಡಿರುವ/ ಅನ್ಯಾಕ್ರಾಂತವಾಗದ ಕೃಷಿ ಜಮೀನುಗಳಲ್ಲಿ ನಿರ್ಮಾಣಗೊಂಡಿದ್ದು ಜನರೂ ವಾಸ ಮಾಡುತ್ತಿದ್ದು, ಕೈಗಾರಿಕೋದ್ಯಮ, ಶಾಲಾ ಕಾಲೇಜು, ವಾಣಿಜ್ಯ ಸಂಸ್ಥೆಗಳು ತಲೆ ಎತ್ತಿದ್ದು ಅವುಗಳನ್ನು ಒಳಗೊಂಡಂತೆ ಭವಿಷ್ಯದಲ್ಲಿ ಆಗುವ ಬದಲಾವಣೆಯ ವಾಸ್ತವಾಂಶಗಳನ್ನು ಚಿತ್ರಿಸುವಂತೆ ಗ್ರಾಮಠಾಣಾ ವ್ಯಾಪ್ತಿಯನ್ನು ವಿಸ್ತರಿಸಿ, ನವೀನ ಗ್ರಾಮಠಾಣಾ ನಕ್ಷೆಗಳನ್ನು ತಯಾರಿಸಿ, ಪ್ರಕಟಿಸಿ ಪಂಚಾಯಿತಿಗಳಿಗೆ ವಿತರಿಸುವ ವ್ಯವಸ್ಥೆ ತುರ್ತಾಗಿ ಆಗಬೇಕು. ಸರ್ಕಾರದಿಂದ ಈ ಬಗ್ಗೆ ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಗಳ ಜಂಟಿ ಸುತ್ತೋಲೆಯನ್ನು (ಅನುಬಂಧ–ಐಐ) ಹೊರಡಿಸಿ, ಒಂದು ವರ್ಷವಾಗಿದ್ದರೂ ಕ್ಷೇತ್ರಮಟ್ಟದಲ್ಲಿ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲದಿರುವುದು ವಿಷಾದಕರ. ಇನ್ನಾದರೂ ತಡ ಮಾಡದೇ ಈ ಕಾರ್ಯವನ್ನು ಆದ್ಯತೆ ಮೇರೆಗೆ ಕೈಗೆತ್ತಿಕೊಳ್ಳಬೇಕು. ವಿಸ್ತೃತ ಗ್ರಾಮಠಾಣಾ ವ್ಯಾಪ್ತಿಯನ್ನು ವಸತಿ ವಲಯವೆಂದು ಪರಿಗಣಿಸಬೇಕು. ಈ ಪ್ರಕ್ರಿಯೆಗೆ ವಿವಿಧ ಇಲಾಖೆಗಳ ಕ್ಷೇತ್ರಮಟ್ಟದಲ್ಲಿ ಸಮನ್ವಯ ಸಾಧಿಸಿ ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರ ಕಾಲಾವಧಿಯನ್ನು ನಿಗದಿಪಡಿಸಿ ಪ್ರಕಟಿಸಬೇಕು.

- ಗ್ರಾಮಠಾಣಾ ವಿಸ್ತರಣೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಗ್ರಾಮಠಾಣಾ ವ್ಯಾಪ್ತಿಯಲ್ಲಿನ ಆಸ್ತಿಗಳನ್ನು ಅಳತೆಮಾಡಿ ಪ್ರತಿ ಆಸ್ತಿಗೆ ಬೆಂಗಳೂರು ನಗರದಲ್ಲಿರುವಂತೆ (PIN) ಆಸ್ತಿ ಗುರುತಿನ ಕ್ರಮಸಂಖ್ಯೆಯನ್ನು ನೀಡಬೇಕು. ಅಳತೆಯನ್ನು ವೇಗವಾಗಿ ಮಾಡುವ ತಂತ್ರಜ್ಞಾನವನ್ನು ಅಳವಡಿಸಿಕೊಂಡು ನಿರ್ದಿಷ್ಟ ಕಾಲಮಿತಿಯಲ್ಲಿ ಈ ಕಾರ್ಯವನ್ನು ಸಮರೋಪಾದಿಯಲ್ಲಿ ಕೈಗೊಂಡು ಮುಗಿಸಬೇಕು. GPS/GIS/Satellite/Imagery/Remote Sensing ಇತ್ಯಾದಿ ಆಧುನಿಕ ತಂತ್ರಜ್ಞಾನವನ್ನು ಈ ಕಾರ್ಯದಲ್ಲಿ ವ್ಯಾಪಕವಾಗಿ ಬಳಸಿಕೊಳ್ಳಬೇಕು. ಇದಕ್ಕೆ ತಗಲುವ ವೆಚ್ಚ ಒಂದೇ ಬಾರಿಗೆ ಅತಿ ಹೆಚ್ಚು ಎಂದೆನಿಸಬಹುದು. ಆದರೆ ಗ್ರಾಮ ಪಾಲಿಕೆಗಳ ಸ್ವಾಯತ್ತ ನಿರ್ವಹಣೆ ದೀರ್ಘಾವಧಿಯಲ್ಲಿ ಗ್ರಾಮ ಪಂಚಾಯಿತಿಗಳ ಆರ್ಥಿಕ ಸದೃಢತೆ ಸಾಧಿಸುವ ಉದ್ದೇಶದ ದೂರ ದೃಷ್ಟಿಯಿಂದ ನೋಡಿದರೆ ವೆಚ್ಚವು ಅಧಿಕವಲ್ಲ.

- ಅಂತಹ ಆಸ್ತಿಗಳೆಲ್ಲವನ್ನು ಯಾರಿಂದಲೂ ಅರ್ಜಿ ಪಡೆಯದೇ ಇ-ಸ್ವತ್ತಿನಲ್ಲಿ ಹಾಗೂ ಪಂಚತಂತ್ರದಲ್ಲಿ ಕಡ್ಡಾಯವಾಗಿ ಉಲ್ಲೇಖಿಸಬೇಕು. ಪ್ರತಿವರ್ಷ ಕರ ಬೇಡಿಕೆ ನೋಟೀಸು ತಾನೇ ತಾನಾಗಿ ಉದ್ಭವವಾಗುವಂತೆ ತಂತ್ರಾಂಶವನ್ನು ಅಳವಡಿಸಿಕೊಳ್ಳಬೇಕು. ಪಂಚತಂತ್ರ-ಇ-ಸ್ವತ್ತು ದತ್ತಾಂಶ ಪರಸ್ಪರ ಪೂರಕವಾಗಬೇಕು. ಈ ದತ್ತಾಂಶದ ಆಧಾರದ ಮೇಲೆ ಬೇಡಿಕೆ, ವಸೂಲಿ, ಆಸ್ತಿ ವಹಿಗಳನ್ನು ಹಸ್ತ ಬರಹದಲ್ಲಿ ನಿರ್ವಹಿಸಬೇಕು.

- ಈ ಪ್ರಕ್ರಿಯೆಗಳು ಮುಗಿದ ನಂತರ ಸೃಷ್ಟಿಯಾಗುವ ಆಸ್ತಿಗಳ ಮಾಲೀಕರು, ಹಕ್ಕು/ಕ್ರಯ ಪಡೆದವರು ಗ್ರಾಮ ಪಂಚಾಯಿತಿಗೆ ಇ-ಸ್ವತ್ತು ಖಾತಾ ಕೋರಿ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು 'ಸಕಾಲ' ಅಡಿಯಲ್ಲಿ ಸಲ್ಲಿಸಲು ಅವಕಾಶ ಕಲ್ಪಿಸಿ ಬಂದ ಅರ್ಜಿಗಳಿಗೆ ಕೂಡಲೇ ಸ್ವೀಕೃತಿ ನೀಡಿ ಕಾಲಮಿತಿಯೊಳಗೆ ಇತ್ಯರ್ಥಪಡಿಸಿ, ಹಕ್ಕು ದಾಖಲೆ ವಿತರಿಸಲು ಸಾಧ್ಯವಾಗುವಂತೆ ತಂತ್ರಾಂಶವನ್ನು ಅಳವಡಿಸಬೇಕು. ಆ ಬಗ್ಗೆ ಸ್ಪಷ್ಟ ನಿಯಮಗಳನ್ನು ರಚಿಸಿ ಪ್ರಕಟಿಸಬೇಕು.

- ಹಕ್ಕು ದಾಖಲಿಸಲು, ಖಾತಾ ಬದಲಾವಣೆ, ಕರ ಆಕರಣೆ ವಿಷಯಗಳಲ್ಲಿ ಪಂಚಾಯಿತಿ ಸಾಮಾನ್ಯ ಸಭೆಯ ನಿರ್ಣಯವೇ ಅಂತಿಮವಾಗಬೇಕು. ಅದರನ್ವಯವೇ ಖಾತೆ ದಾಖಲಾಗುವಂತೆ ತಂತ್ರಾಂಶದಲ್ಲಿ 'ಆಪ್ಷನ್' ಪ್ರತಿ ಸಂದರ್ಭದಲ್ಲಿಯೂ ಇರಬೇಕು. ಅದಕ್ಕೆ ಪೂರಕವಾಗಿ ಈ ವರೆಗೆ ಸರ್ಕಾರ ಹೊರಡಿಸಿರುವ ಸುತ್ತೋಲೆಗಳ ಸಮಗ್ರ ನಿರ್ದೇಶನಗಳನ್ನು ಪರಿಷ್ಕರಿಸಿ, ಕ್ರೋಢೀಕರಿಸಿ ಇ-ಸ್ವತ್ತು ಕೈಪಿಡಿಯನ್ನು ಪ್ರಕಟಿಸಬೇಕು.

ಅಂತಿಮವಾಗಿ ಪರಾಮರ್ಶೆಗೆ ವಹಿಸಿರುವ ಮುಖ್ಯ ಮೂರು ಅಂಶಗಳ ಬಗ್ಗೆ ಈ ಸಮಿತಿಯು ನಿರ್ದಿಷ್ಟವಾದ ಮಾರ್ಗೋಪಾಯಗಳನ್ನು ಶಿಫಾರಸ್ಸು ಮಾಡಬೇಕಾಗಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸರ್ಕಾರದ ಸೂಚನೆಗಳನ್ನು ಉಲ್ಲಂಘಿಸಿ ಅನ್ಯಾಕ್ರಾಂತವಾಗದ ಕೃಷಿ ಜಮೀನುಗಳಲ್ಲಿ ನಗರ ಯೋಜನಾ ಪ್ರಾಧಿಕಾರದ ಅನುಮೋದನೆ ಪಡೆಯದೆ ರಚಿಸಿದ ವಸತಿ ವಿನ್ಯಾಸಗಳಲ್ಲಿ ನಿವೇಶನಗಳನ್ನು ಕ್ರಯಕ್ಕೆ ಪಡೆದವರ ಹೆಸರಿಗೆ ಮಾಡಿರುವ 11ಬಿ ಖಾತೆಗಳನ್ನು ವೈಯಕ್ತಿಕ ಹಿತಾಸಕ್ತರಿಗೆ ಯಾವುದೇ ಪೂರ್ವಭಾವಿ ತಿಳುವಳಿಕೆ ನೀಡಿ ಅವರ ಅಹವಾಲನ್ನು ಆಲಿಸದೆ ಏಕಪಕ್ಷೀಯವಾಗಿ ಪೂರ್ತಿ ರದ್ದು ಮಾಡಿರುವುದು ಕಂಡು ಬಂದಿದೆ. ಅಂತಹ ಸ್ವಾಭಾವಿಕ ನ್ಯಾಯ ನಿಯಮದ ವಿರುದ್ಧವಾದ ಆದೇಶಗಳನ್ನು ಊರ್ಜಿತದಲ್ಲಿಡಲಾಗದು. ಅವುಗಳನ್ನು ರದ್ದುಗೊಳಿಸಿ ಖಾತೆಗಳನ್ನು ಮರುಕಳಿಸುವುದು ಅನಿವಾರ್ಯ. ಬೆಂಗಳೂರು ನಗರ ಜಿಲ್ಲೆಯ ಉಳಿದ ಪಂಚಾಯಿತಿಗಳಲ್ಲಿ ಈ ಪ್ರಕ್ರಿಯೆಗೆ ಚಾಲನೆ ನೀಡಿದ್ದರೂ ಪೂರ್ಣವಾಗಿ ಅಂತಹ ಖಾತೆಗಳನ್ನು ರದ್ದು ಪಡಿಸಿಲ್ಲ. ಎರಡೂ ತರಹದ ಈ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಗ್ರಾಮಗಳಲ್ಲಿ ಹಲವು ಪಟ್ಟ

ಪ್ರದೇಶದಲ್ಲಿಯೇ ನಿವೇಶನಗಳ ರಚನೆಯಾಗಿದ್ದು ಕೆಲವರು ಮನೆಗಳನ್ನು ಕಟ್ಟಿರುತ್ತಾರೆ. ಬ್ಯಾಂಕ್ ಸಾಲ ಪಡೆದು ಮನೆ ನಿರ್ಮಿಸಲು ಕೆಲವರು ಪಂಚಾಯಿತಿಯ ಖಾತೆಗಾಗಿ ಕಾಯುತ್ತಿದ್ದಾರೆ. ಈ ಗ್ರಾಮಗಳ ಗ್ರಾಮಠಾಣಾ ವ್ಯಾಪ್ತಿ ಶತಮಾನದ ಹಿಂದೆ ನಿಗದಿಯಾಗಿದ್ದು ಅನಂತರದ ಬೆಳವಣಿಗೆಯನ್ನು ಬೆಂಗಳೂರು ನಗರ ಮಹಾಯೋಜನೆಯಲ್ಲಿ ಹಸಿರು ಪಟ್ಟಿ ಘೋಷಣೆ ಮಾಡುವಾಗ ಪರಿಗಣಿಸದಿರುವುದು ಸತ್ಯಾಂಶ. ಹಿಂದಿನ ಮಹಾನಗರದ ಗಡಿ, ವಿಸ್ತರಣೆಯಲ್ಲದೆ ಬೆಳವಣಿಗೆಯಿಂದ ಅದರ ಸುತ್ತ ಉಪನಗರ/ಪಟ್ಟಣಗಳನ್ನು ಅಭಿವೃದ್ಧಿ ಪಡಿಸಿ ಸಂಪರ್ಕ ವ್ಯವಸ್ಥೆ ಸುಗಮಗೊಳಿಸುವುದು ನಗರ ನಿವಾಸಿಗಳ ಹಿತದೃಷ್ಟಿಯಿಂದ, ಮಾಲಿನ್ಯ, ಜನಸಂದಣಿ ನಿಯಂತ್ರಿಸಲು ಸಹಕಾರಿಯಾಗುವುದರಲ್ಲಿ ಯಾವುದೇ ಸಂದೇಹವಿರದು.

ಈ ಹಿನ್ನೆಲೆಯಲ್ಲಿ

(1) ಬಾಗಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬಾಗಲೂರು ಕಂದಾಯ ಗ್ರಾಮವೊಂದೇ ಬರುತ್ತಿದ್ದು, ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಈ ಗ್ರಾಮ ಒಳಪಟ್ಟಿದ್ದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಗಡಿಗೆ ಹೊಂದಿಕೊಂಡಿದ್ದು, ಜನಸಂಖ್ಯೆ, ಜನವಸತಿ ವೇಗವಾಗಿ ಬೆಳೆಯುತ್ತಿರುವ ಕೃಷಿ ಜಮೀನು ಕ್ಷೀಣಿಸುತ್ತಿರುವ ಕಾರಣ ಈ ಗ್ರಾಮ ಪಂಚಾಯಿತಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿಸುವುದು ಸೂಕ್ತ. ಹಾಗೆ ಮಾಡುವಾಗ ಈವರೆಗೆ ಗ್ರಾಮದ ಸುತ್ತ ಆಗಿರುವ ವಸತಿ, ಕೈಗಾರಿಕಾ ಉದ್ದೇಶದ ಅಭಿವೃದ್ಧಿಯನ್ನು ಪರಿಗಣಿಸಿ ಅಭಿವೃದ್ಧಿಯಾಗಿರುವ ಪ್ರದೇಶವನ್ನು ಹಸಿರು ವಲಯದಿಂದ ಕೈಬಿಟ್ಟು ಹಳದಿ ವಲಯವನ್ನಾಗಿ ಪರಿವರ್ತಿಸಬೇಕು. ನಂತರ ಅನಧಿಕೃತ ನಿವೇಶನ/ಕಟ್ಟಡಗಳಿಂದ ಅನ್ಯಕ್ರಾಂತ ಶುಲ್ಕ, ಅಭಿವೃದ್ಧಿ ಶುಲ್ಕ, ದಂಡ ಇತ್ಯಾದಿ ವಸೂಲು ಮಾಡಿ ಅವುಗಳನ್ನು ಸಕ್ರಮಗೊಳಿಸುವ ಬಗ್ಗೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನ್ವಯವಾಗುವ ಕಾನೂನು, ನಿಯಮಗಳಡಿಯಲ್ಲಿ ಕ್ರಮ ಕೈಗೊಳ್ಳುವುದು ಸೂಕ್ತ.

(2) ಹೆಸರಘಟ್ಟ ಗ್ರಾಮ ಪಂಚಾಯಿತಿಯನ್ನು ಸ್ವತಂತ್ರ ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಿ ಅದರ ವ್ಯಾಪ್ತಿಯೊಳಗಿನ ಗ್ರಾಮಗಳ ಸುತ್ತ ಈಗಾಗಲೇ ಅಭಿವೃದ್ಧಿಯಾಗಿರುವ ಜನವಸತಿ ಪ್ರದೇಶಗಳನ್ನು ಹಸಿರು ವಲಯದಿಂದ ಕೈಬಿಟ್ಟು ಹಳದಿ ವಲಯವನ್ನಾಗಿ ಪರಿವರ್ತಿಸಿ ಪುರಸಭೆಯ ಗಡಿ ನಿರ್ಧರಿಸುವುದು. ನಂತರ ಪುರಸಭೆ ವ್ಯಾಪ್ತಿಯ ನಿವೇಶನ, ಕಟ್ಟಡಗಳ ಬಗ್ಗೆ ಕರ್ನಾಟಕ ಪುರಸಭೆಗಳ ಕಾಯಿದೆ ಅನ್ವಯ ಕ್ರಮ ಜರುಗಿಸುವುದು. ಅನಧಿಕೃತವೆಂದು ಈ ವರೆಗೆ ಘೋಷಿಸಲಾದ ಕಟ್ಟಡಗಳನ್ನು/ನಿವೇಶನಗಳನ್ನು ಅನ್ಯಕ್ರಾಂತ ಶುಲ್ಕ, ಅಭಿವೃದ್ಧಿ ಶುಲ್ಕ, ದಂಡ ವಿಧಿಸಿ ಸಕ್ರಮಗೊಳಿಸಬಹುದು.

(3) ಅರಕೆರೆ, ಹುರಳಿಚಿಕ್ಕನಹಳ್ಳಿ, ಮಾರೇನಹಳ್ಳಿ ಈ ಮೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿನ ಗ್ರಾಮಗಳಲ್ಲಿ **01.01.2018** ರವರೆಗೆ ಆಗಿರುವ ಬೆಳವಣಿಗೆ/ ಅಭಿವೃದ್ಧಿಯನ್ನು ಪರಿಗಣಿಸಿ ಗ್ರಾಮಠಾಣಾ ವ್ಯಾಪ್ತಿಯನ್ನು ವಿಸ್ತರಿಸಿ ಅದಕ್ಕೆ ಹೊರಗಿನ ಕೃಷಿ ಜಮೀನುಗಳನ್ನು ಹಸಿರು ವಲಯವನ್ನಾಗಿ ಘೋಷಿಸುವುದು ಸದ್ಯ ಸಮಸ್ಯೆಗೆ ಕಂಡು ಬರುವ ಏಕೈಕ ಪರಿಹಾರ ಕ್ರಮ. ಇದರಿಂದ ಗ್ರಾಮಠಾಣಾ ವ್ಯಾಪ್ತಿಯ ನಿವೇಶನ/ಕಟ್ಟಡಗಳನ್ನು ನಿವೇಶನದಾರರಿಂದ ಗ್ರಾಮಪಂಚಾಯಿತಿಗೆ ಬರಬೇಕಾದ ಅಭಿವೃದ್ಧಿ ಶುಲ್ಕ, ಕಂದಾಯ ಇಲಾಖೆಗೆ ಸಂದಾಯವಾಗಬೇಕಾಗಿದ್ದ ಅನ್ಯಾಕ್ರಾಂತ ಶುಲ್ಕವನ್ನು ವಸೂಲು ಮಾಡುವ ಷರತ್ತಿಗೊಳಪಟ್ಟು ಕ್ರಮಬದ್ಧಗೊಳಿಸಿ ಒಂದು ಬಾರಿಗೆ ಮಾತ್ರ ಸಕ್ರಮಗೊಳಿಸಬಹುದು.

ಎರಡನೆಯದಾಗಿ, ಬೆಂಗಳೂರು ಮಹಾನಗರದ ಸುತ್ತಮುತ್ತಣ ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ, ಮೈಸೂರು ಈ ನಾಲ್ಕು ಜಿಲ್ಲೆಗಳ ಬೆಂಗಳೂರು, ಮೈಸೂರು ನಗರಗಳ ಹೊರವಲಯದ ಗ್ರಾಮ ಪಂಚಾಯಿತಿಗಳಲ್ಲಿ ಮಾತ್ರ ನಮೂನೆ-11ಬಿ ಖಾತೆಗಳನ್ನು ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ ವಿತರಣೆ ಮಾಡಿರುವುದು ಕಂಡು ಬರುತ್ತದೆ. ಈ ಬಗ್ಗೆ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಮೈಸೂರು ನಗರ ಪಾಲಿಕೆ ಹೊರವಲಯಗಳಲ್ಲಿನ ಪಂಚಾಯಿತಿಗಳಲ್ಲಿ ಇ-ಸ್ವತ್ತು ನಮೂನೆ-11ಬಿ ಅನಧಿಕೃತವಾಗಿ ಅನುಮೋದಿಸಿ ವಿತರಿಸಿರುವ ಬಗ್ಗೆ ವಿಚಾರಣೆ ಮಾಡಲು ಇಬ್ಬರು ಪ್ರತ್ಯೇಕ ವಿಚಾರಣಾಧಿಕಾರಿಗಳನ್ನು ನೇಮಿಸಿ ಇದಕ್ಕೆ ಜವಾಬ್ದಾರರಾದ ಅಧಿಕಾರಿ, ಸಿಬ್ಬಂದಿಗಳನ್ನು ಪತ್ತೆ ಮಾಡಿ ಅವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳುವುದಲ್ಲದೆ ಖಾತಾ ವಿತರಣೆಯಿಂದ ಸರ್ಕಾರಕ್ಕೆ, ನಗರ ಪಾಲಿಕೆಗೆ, ಗ್ರಾಮ ಪಂಚಾಯಿತಿಗಳಿಗೆ ಆಗಿರುವ ಆರ್ಥಿಕ ನಷ್ಟವನ್ನು ಖಾತೆ ಪಡೆದ ಆಸ್ತಿಗಳ ಕ್ರಯದಾರರಿಂದ ವಸೂಲು ಮಾಡಲು ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಿದೆ. ಈ ಜಿಲ್ಲೆಗಳನ್ನು ಹೊರತುಪಡಿಸಿದರೆ ರಾಜ್ಯದ ಉಳಿದ ಜಿಲ್ಲೆಗಳ ಗ್ರಾಮೀಣ ಭಾಗದಲ್ಲಿ ಅಂತಹ ಅಕ್ರಮಗಳು ಹೆಚ್ಚಾಗಿ ಕಂಡುಬರುವುದಿಲ್ಲ. ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ನಮೂನೆ-11ಬಿ ಅಕ್ರಮಗಳ ದಾಖಲೆಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ಈ ಸಮಿತಿಗೆ ನೀಡಿರುವ ಕಾಲಾವಧಿಯಲ್ಲಿ ಸಾಧ್ಯವಾಗುವುದಿಲ್ಲ. ಆದರೆ ಈ ಬಗ್ಗೆ ಮೇಲ್ಕಂಡ ನಾಲ್ಕು ಜಿಲ್ಲೆಗಳನ್ನು ಹೊರತು ಪಡಿಸಿ ಉಳಿದ ಜಿಲ್ಲೆಗಳ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ವಿಚಾರಣಾಧಿಕಾರಿಗಳನ್ನು ನೇಮಿಸಿ ಕ್ರಮ ವಹಿಸಲು ಸ್ವತಂತ್ರರು. ಆದರೂ ಭವಿಷ್ಯದಲ್ಲಿ ಆ ಜಿಲ್ಲೆಗಳ ಜಿಲ್ಲಾ, ಉಪವಿಭಾಗ, ತಾಲ್ಲೂಕು ಕೇಂದ್ರಗಳ ಸುತ್ತ ವಸತಿ ಅಭಿವೃದ್ಧಿ ಚಟುವಟಿಕೆಗಳು ತೀವ್ರವಾಗುತ್ತಿರುವುದರಿಂದ ಸಂಬಂಧಿಸಿದ ನಗರ ಯೋಜನಾ ಪ್ರಾಧಿಕಾರಗಳು, ಗ್ರಾಮಾಂತರ ನಗರ ಯೋಜನಾ ಇಲಾಖೆ, ಕಂದಾಯ ಇಲಾಖೆಗಳು ಬೆಳವಣಿಗೆಯನ್ನು ನಿಯಂತ್ರಿಸಿ ಕ್ರಮಬದ್ಧಗೊಳಿಸಲು ಸೂಕ್ತ ಕ್ರಮವನ್ನು ಈಗಿನಿಂದಲೇ ಕೈಗೊಳ್ಳಬೇಕು.

ಮೂರನೆಯದಾಗಿ ಇ-ಸ್ವತ್ತು ತಂತ್ರಾಂಶದಲ್ಲಿ ಸಂದರ್ಭಕ್ಕೆ ತಕ್ಕಂತೆ ಗ್ರಾಮ ಪಂಚಾಯಿತಿ ಕೈಗೊಳ್ಳುವ ನಿರ್ಣಯಕ್ಕೆ ಮಾನ್ಯತೆ ನೀಡುವ ಹೊಸದಾಗಿ ಅಂಶಗಳನ್ನು ಸೇರಿಸಬೇಕಾಗಿದ್ದು, ಆ ಬಗ್ಗೆ ವ್ಯಾಪಕವಾಗಿ ಬೇಡಿಕೆಗಳು ಪಂಚಾಯಿತಿ ಅನುಷ್ಠಾನಾಧಿಕಾರಿಗಳು ಬಳಕೆದಾರರ ಸಿಬ್ಬಂದಿಯಿಂದ ಬಂದಿದ್ದು, ತಂತ್ರಾಂಶದ ಪರಿಷ್ಕರಣೆ ಭಾಗ-IV ರಲ್ಲಿ ಸೂಚಿಸಿರುವ ಸಂದರ್ಭಗಳಲ್ಲಿ ಅತ್ಯಗತ್ಯವೆಂದು ಭಾವಿಸಲಾಗಿದೆ.

(ಕೆ.ಹೆಚ್. ಗೋಪಾಲಕೃಷ್ಣೇಗೌಡ)
ಅಧ್ಯಕ್ಷರು

ಸ್ಥಳ: ಬೆಂಗಳೂರು
ದಿನಾಂಕ: 31.01.2018

(ಕೆ. ಸುಬ್ರಹ್ಮಣ್ಯ ಕಾಮತ್)
ಸದಸ್ಯರು

(ಎಸ್.ಎಸ್. ಕಟಗೇರಿ)
ಸದಸ್ಯರು

## ಭೇಟಿ ನೀಡಿದ ಜಿಲ್ಲಾ ಪಂಚಾಯಿತಿಗಳ ಹಾಗೂ ತಾಲ್ಲೂಕು ಪಂಚಾಯಿತಿಯ ವಿವರಗಳು

| ಕ್ರ. ಸಂ. | ದಿನಾಂಕ | ಜಿಲ್ಲಾ ಪಂಚಾಯಿತಿಗಳು | ಹಾಜರಿದ್ದ ಅಧಿಕಾರಿ ಹಾಗು ಚುನಾಯಿತ ಪ್ರತಿನಿಧಿಗಳು |
|---|---|---|---|
| 1. | 07.09.2017 | ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿ | ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 2. | 08.09.2017 | ಉಡುಪಿ ಜಿಲ್ಲಾ ಪಂಚಾಯಿತಿ, ಉಡುಪಿ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 3. | 12.09.2017 | ಉತ್ತರ ಕನ್ನಡ ಜಿಲ್ಲಾ ಪಂಚಾಯಿತಿ, ಕಾರವಾರ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 4. | 21.09.2017 | ಯಾದಗಿರಿ ಜಿಲ್ಲಾ ಪಂಚಾಯಿತಿ | ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 5. | 22.09.2017 | ಕಲಬುರಗಿ ಜಿಲ್ಲಾ ಪಂಚಾಯಿತಿ, ಕಲಬುರಗಿ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 6. | 23.09.2017 | ಬೀದರ ಜಿಲ್ಲಾ ಪಂಚಾಯಿತಿ, ಬೀದರ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |

| ಕ್ರ. ಸಂ. | ದಿನಾಂಕ | ಜಿಲ್ಲಾ ಪಂಚಾಯತಿಗಳು | ಹಾಜರಿದ್ದ ಅಧಿಕಾರಿ ಹಾಗು ಚುನಾಯಿತ ಪ್ರತಿನಿಧಿಗಳು |
|---|---|---|---|
| 7. | 26.10.2017 | ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ, ಬೆಂಗಳೂರು | ಅಧ್ಯಕ್ಷರು, ಜಿಲ್ಲಾ ಪಂಚಾಯತ್ ಬೆಂಗಳೂರು (ಗ್ರಾ), ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 8. | 27.10.2017 | ರಾಮನಗರ ಜಿಲ್ಲಾ ಪಂಚಾಯಿತಿ, ರಾಮನಗರ | ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 9. | 28.10.2017 | ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ, ಬೆಂಗಳೂರು | ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 10. | 31.10.2017 | ತುಮಕೂರು ಜಿಲ್ಲಾ ಪಂಚಾಯಿತಿ, ತುಮಕೂರು | ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 11. | 03.11.2017 | ಕೊಡಗು ಜಿಲ್ಲಾ ಪಂಚಾಯಿತಿ, ಮಡಿಕೇರಿ | ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಯೋಜನಾ ನಿರ್ದೇಶಕರು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 12. | 04.11.2017 | ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು | ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 13. | 09.11.2017 | ಶಿವಮೊಗ್ಗ ಜಿಲ್ಲಾ ಪಂಚಾಯಿತಿ, ಶಿವಮೊಗ್ಗ | ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |

| ಕ್ರ. ಸಂ. | ದಿನಾಂಕ | ಜಿಲ್ಲಾ ಪಂಚಾಯಿತಿಗಳು | ಹಾಜರಿದ್ದ ಅಧಿಕಾರಿ ಹಾಗು ಚುನಾಯಿತ ಪ್ರತಿನಿಧಿಗಳು |
|---|---|---|---|
| 14. | 10.11.2017 | ಹಾಸನ ಜಿಲ್ಲಾ ಪಂಚಾಯಿತಿ, ಹಾಸನ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು. |
| 15. | 16.11.2017 | ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ | ಜಿಲ್ಲಿ ಪಂಚಾಯತ್ ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 16. | 21.11.2017 | ಚಿತ್ರದುರ್ಗ ಜಿಲ್ಲಾ ಪಂಚಾಯಿತಿ, ಚಿತ್ರದುರ್ಗ | ಜಿಲ್ಲಾ ಪಂಚಾಯತ್ ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 17. | 22.11.2017 | ಕೋಲಾರ ಜಿಲ್ಲಾ ಪಂಚಾಯಿತಿ, ಕೋಲಾರ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 18. | 24.11.2017 | ಬಳ್ಳಾರಿ ಜಿಲ್ಲಾ ಪಂಚಾಯಿತಿ, ಬಳ್ಳಾರಿ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 19. | 25.11.2017 | ರಾಯಚೂರು ಜಿಲ್ಲಾ ಪಂಚಾಯಿತಿ, ರಾಯಚೂರು | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 20. | 06.12.2017 | ಧಾರವಾಡ ಜಿಲ್ಲಾ ಪಂಚಾಯಿತಿ, ಧಾರವಾಡ | ಜಿಲ್ಲಾ ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |

| ಕ್ರ. ಸಂ. | ದಿನಾಂಕ | ಜಿಲ್ಲಾ ಪಂಚಾಯಿತಿಗಳು | ಹಾಜರಿದ್ದ ಅಧಿಕಾರಿ ಹಾಗು ಚುನಾಯಿತ ಪ್ರತಿನಿಧಿಗಳು |
|---|---|---|---|
| 21. | 07.12.2017 | ಬೆಳಗಾವಿ ಜಿಲ್ಲಾ ಪಂಚಾಯಿತಿ, ಬೆಳಗಾವಿ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು. |
| 22. | 08.12.2017 | ವಿಜಯಪುರ ಜಿಲ್ಲಾ ಪಂಚಾಯಿತಿ, ವಿಜಯಪುರ | ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 23. | 12.12.2017 | ಮೈಸೂರು ಜಿಲ್ಲಾ ಪಂಚಾಯಿತಿ, ಮೈಸೂರು | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |
| 24. | 28.12.2017 | ಗದಗ ಜಿಲ್ಲಾ ಪಂಚಾಯಿತಿ, ಗದಗ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಕೆಲವು ಕಾರ್ಯ ನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು ಹಾಗೂ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂ.ಅ.ಅ ಮತ್ತು ಸಿಬ್ಬಂದಿಗಳು. |

ತಾಲ್ಲೂಕು ಪಂಚಾಯಿತಿ

| | | | |
|---|---|---|---|
| 01. | 10.08.2017 | ಹೊಸಕೋಟೆ ತಾ. ಪಂ., ಬೆಂ.ಗ್ರಾ.ಜಿಲ್ಲೆ | ಅಧ್ಯಕ್ಷರು ತಾಲ್ಲೂಕು ಪಂಚಾಯಿತಿ, ಹೊಸಕೋಟೆ, ಪ್ರಭಾರ ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗು 09 ಗ್ರಾಮ ಪಂಚಾಯಿತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು. |

# ಭೇಟಿ ನೀಡಿದ ಗ್ರಾಮ ಪಂಚಾಯಿತಿಗಳ ವಿವರಗಳು

| ಕ್ರ. ಸಂ. | ದಿನಾಂಕ | ಗ್ರಾಮ ಪಂಚಾಯಿತಿಗಳು | ತಾಲ್ಲೂಕು | ಜಿಲ್ಲೆ | ಹಾಜರಿದ್ದ ಅಧಿಕಾರಿ ಹಾಗು ಚುನಾಯಿತ ಪ್ರತಿನಿಧಿಗಳು |
|---|---|---|---|---|---|
| 1. | 13.07.2017 | ಹುರುಳಿಚಿಕ್ಕನಹಳ್ಳಿ | ಬೆಂಗಳೂರು ಉತ್ತರ | ಬೆಂಗಳೂರು ನಗರ | ಗ್ರಾ.ಪಂ. ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 2. | 13.07.2017 | ಹೆಸರುಘಟ್ಟ | ಬೆಂಗಳೂರು ಉತ್ತರ | ಬೆಂಗಳೂರು ನಗರ | ಗ್ರಾ.ಪಂ. ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 3. | 14.07.2017 | ಮಾರೇನಹಳ್ಳಿ | ಬೆಂಗಳೂರು ಉತ್ತರ | ಬೆಂಗಳೂರು ನಗರ | ಗ್ರಾ.ಪಂ. ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 4. | 14.07.2017 | ಬಾಗಲೂರು | ಬೆಂಗಳೂರು ಉತ್ತರ | ಬೆಂಗಳೂರು ನಗರ | ಗ್ರಾ.ಪಂ. ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 5. | 15.07.2017 | ಅರಕೆರೆ | ಬೆಂಗಳೂರು ಉತ್ತರ | ಬೆಂಗಳೂರು ನಗರ | ಗ್ರಾ.ಪಂ. ಅಧ್ಯಕ್ಷರು, ಸದಸ್ಯರು, ಕಾರ್ಯದರ್ಶಿ, ಹಾಗೂ ಸಿಬ್ಬಂದಿ ವರ್ಗದವರು |
| 6. | 15.07.2017 | ಗೋಪಾಲಪುರ | ಬೆಂಗಳೂರು ಉತ್ತರ | ಬೆಂಗಳೂರು ನಗರ | ಗ್ರಾ.ಪಂ. ಅಧ್ಯಕ್ಷರು. ಸದಸ್ಯರು ಹಾಗೂಸಿಬ್ಬಂದಿ ವರ್ಗದವರು |
| 7. | 22.07.2017 | ಹಾದಿಹಳ್ಳಿ | ತುರುವೇಕೆರೆ | ತುಮಕೂರು | ಗ್ರಾಮ ಪಂಚಾಯಿತಿಯ ಲೆಕ್ಕ ಸಹಾಯಕರು ಹಾಗೂ ಸಿಬ್ಬಂದಿ ವರ್ಗದವರು |
| 8. | 02.08.2017 | ಉರಿಗಿಲಿ | ಕೋಲಾರ | ಕೋಲಾರ | ಗ್ರಾ.ಪಂ. ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 9. | 05.08.2017 | ಬನ್ನೇರುಘಟ್ಟ | ಬೆಂಗಳೂರು ಉತ್ತರ | ಬೆಂಗಳೂರು ನಗರ | ಗ್ರಾ.ಪಂ. ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 10. | 05.08.2017 | ಕಲ್ಲುಬಾಳು | ಆನೇಕಲ್ | ಬೆಂಗಳೂರು ನಗರ | ಗ್ರಾ.ಪಂ. ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |

| ಕ್ರ. ಸಂ. | ದಿನಾಂಕ | ಗ್ರಾಮ ಪಂಚಾಯಿತಿಗಳು | ತಾಲ್ಲೂಕು | ಜಿಲ್ಲೆ | ಹಾಜರಿದ್ದ ಅಧಿಕಾರಿ ಹಾಗು ಚುನಾಯಿತ ಪ್ರತಿನಿಧಿಗಳು |
|---|---|---|---|---|---|
| 11. | 10.08.2017 | ಕಂಬಳೀಪುರ | ಹೊಸಕೋಟೆ | ಬೆಂಗಳೂರು ಗ್ರಾಮಾಂತರ | ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್, ಹೊಸಕೋಟೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 12. | 10.08.2017 | ಲಕ್ಕೊಂಡಹಳ್ಳಿ | ಹೊಸಕೋಟೆ | ಬೆಂಗಳೂರು ಗ್ರಾಮಾಂತರ | ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್, ಹೊಸಕೋಟೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 13. | 10.08.2017 | ದೊಡ್ಡಹುಲ್ಲೂರು | ಹೊಸಕೋಟೆ | ಬೆಂಗಳೂರು ಗ್ರಾಮಾಂತರ | ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್, ಹೊಸಕೋಟೆ |
| 14. | 11.08.2017 | ಸಮೇತನಹಳ್ಳಿ | ಹೊಸಕೋಟೆ | ಬೆಂಗಳೂರು ಗ್ರಾಮಾಂತರ | ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್, ಹೊಸಕೋಟೆ |
| 15. | 11.08.2017 | ಮುತ್ಸಂದ್ರ | ಹೊಸಕೋಟೆ | ಬೆಂಗಳೂರು ಗ್ರಾಮಾಂತರ | ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್, ಹೊಸಕೋಟೆ |
| 16. | 11.08.2017 | ದೊಡ್ಡಗಟ್ಟಿಗನಬ್ಬೆ | ಹೊಸಕೋಟೆ | ಬೆಂಗಳೂರು ಗ್ರಾಮಾಂತರ | ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್, ಹೊಸಕೋಟೆ |
| 17. | 31.08.2017 | ಮುಗ್ತಿಹಳ್ಳಿ ಹಾಗೂ ತೇಗೂರು | ಚಿಕ್ಕಮಗಳೂರು | ಚಿಕ್ಕಮಗಳೂರು | ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 18. | 07.09.2017 | ತಲಪಾಡಿ | ಮಂಗಳೂರು | ದಕ್ಷಿಣ ಕನ್ನಡ | ಉಪಾಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 19. | 07.09.2017 | ಕೋಟೆಕೆಕ್ಕಾರ | ಮಂಗಳೂರು | ದಕ್ಷಿಣ ಕನ್ನಡ | ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 20. | 08.09.2017 | 48ನೇ ಕೋಟ- ತಟ್ಟು | ಉಡುಪಿ | ಉಡುಪಿ | ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳು, ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |

| ಅ. ಸಂ. | ದಿನಾಂಕ | ಗ್ರಾಮ ಪಂಚಾಯಿತಿಗಳು | ತಾಲ್ಲೂಕು | ಜಿಲ್ಲೆ | ಹಾಜರಿದ್ದ ಅಧಿಕಾರಿ ಹಾಗು ಚುನಾಯಿತ ಪ್ರತಿನಿಧಿಗಳು |
|---|---|---|---|---|---|
| 21. | 08.09.2017 | ಉದ್ಯಾವರ | ಉಡುಪಿ | ಉಡುಪಿ | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳು, ಕಾರ್ಯನಿರ್ವಾಹಕ ಅಧಿಕಾರಿಗಳು, ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 22. | 12.09.2017 | ಚೆಂಡಿಯ | ಕಾರವಾರ | ಉತ್ತರ ಕನ್ನಡ | ಗ್ರಾ. ಪಂ. ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 23. | 12.09.2017 | ಕಾನಗೋಡ | ಸಿರ್ಸಿ | ಉತ್ತರ ಕನ್ನಡ | ಕಾರ್ಯನಿರ್ವಾಹಕ ಅಧಿಕಾರಿಗಳು, ಸಿರ್ಸಿ ತಾಲ್ಲೂಕು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 24. | 14.09.2017 | ಕೆಸರಟ್ಟಿ | ಗಂಗಾವತಿ | ಕೊಪ್ಪಳ | ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 25. | 16.09.2017 | ಚಿಕ್ಕಾಲಗುಂಡಿ | ಬೀಳಗಿ | ಬಾಗಲಕೋಟೆ | ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 26. | 18.09.2017 | ಹಲಗಲಿ | ಮುಧೋಳ | ಬಾಗಲಕೋಟೆ | ಅಧ್ಯಕ್ಷರು, ಸದಸ್ಯರು. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 27. | 21.09.2017 | ಗೋಗಿ (ಕೋಣಾ) ಮತ್ತು ಗೋಗಿ(ಪೇಟಾ) | ಶಹಾಪುರ | ಯಾದಗಿರಿ | ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಶಹಾಪುರ, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 28. | 22.09.2017 | ಹಾಗರಗಾ | ಕಲ್ಬುರ್ಗಿ | ಕಲ್ಬುರ್ಗಿ | ಸಹಾಯಕ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಗ್ರಾಮ ಪಂಚಾಯಿತಿ ಅಧ್ಯಕ್ಷರು. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |

| ಕ್ರ. ಸಂ. | ದಿನಾಂಕ | ಗ್ರಾಮ ಪಂಚಾಯಿತಿಗಳು | ತಾಲ್ಲೂಕು | ಜಿಲ್ಲೆ | ಹಾಜರಿದ್ದ ಅಧಿಕಾರಿ ಹಾಗೂ ಚುನಾಯಿತ ಪ್ರತಿನಿಧಿಗಳು |
|---|---|---|---|---|---|
| 29. | 22.09.2017 | ಮಾಡಬೂಳ | ಚಿತ್ತಾಪುರ | ಕಲ್ಬುರ್ಗಿ | ಸಹಾಯಕ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 30. | 23.09.2017 | ಪ್ರತಾಪುರ | ಬಸವಕಲ್ಯಾಣ | ಬೀದರ್ | ಕಾರ್ಯನಿರ್ವಾಹಕ ಅಧಿಕಾರಿಗಳು, ಬಸವಕಲ್ಯಾಣ, ಗ್ರಾ. ಪಂ. ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 31. | 23.09.2017 | ಅಣದೂರ | ಬೀದರ್ | ಬೀದರ್ | ಕಾರ್ಯನಿರ್ವಾಹಕ ಅಧಿಕಾರಿಗಳು, ಬಸವಕಲ್ಯಾಣ, ಗ್ರಾ. ಪಂ. ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 32. | 31.10.2017 | ಹೆಬ್ಬಾಳ | ತುಮಕೂರು | ತುಮಕೂರು | ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 33. | 03.11.2017 | ಮುಳ್ಳುಸೋಗೆ | ಸೋಮವಾರಪೇಟೆ | ಕೊಡಗು | ಉಪಕಾರ್ಯದರ್ಶಿಗಳು, ಜಿಲ್ಲಾ ಪಂಚಾಯಿತಿ, ಕಾರ್ಯನಿರ್ವಾಹಕ ಅಧಿಕಾರಿ/ಸಹಾಯಕ ನಿರ್ದೇಶಕರು, ಸೋಮವಾರಪೇಟೆ ತಾ. ಪಂ. ಗ್ರಾ. ಪಂ. ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 34. | 09.11.2017 | ಸಿರಿವಾಳ | ಸೊರಬ | ಶಿವಮೊಗ್ಗ | ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |
| 35. | 24.11.2017 | ರಾಮಸಾಗರ | ಶಿರಗುಪ್ಪ | ಬಳ್ಳಾರಿ | ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |

| ಕ್ರ. ಸಂ. | ದಿನಾಂಕ | ಗ್ರಾಮ ಪಂಚಾಯಿತಿಗಳು | ತಾಲ್ಲೂಕು | ಜಿಲ್ಲೆ | ಹಾಜರಿದ್ದ ಅಧಿಕಾರಿ ಹಾಗೂ ಚುನಾಯಿತ ಪ್ರತಿನಿಧಿಗಳು |
|---|---|---|---|---|---|
| 36. | 12.12.2017 | ಬಮ್ಮನಹಳ್ಳಿ | ಮೈಸೂರು | ಮೈಸೂರು | ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಉಪಕಾರ್ಯದರ್ಶಿಗಳು, ಜಿಲ್ಲಾ ಪಂಚಾಯಿತಿ. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು |

# 94 'ಸಿ' ರಡಿ ಸ್ವೀಕರಿಸಿದ ಅರ್ಜಿಗಳ ವಿಲೇವಾರಿ ವಿವರ

| ಕ್ರ ಸಂ | ಜಿಲ್ಲೆಯ ಹೆಸರು | 94 'ಸಿ' | | |
|---|---|---|---|---|
| | | ಸ್ವೀಕೃತ ಅರ್ಜಿಗಳು | ವಿಲೇವಾರಿ | ಬಾಕಿ |
| 1 | ಚಿಕ್ಕಮಗಳೂರು | 44006 | 5181 | 38825 |
| 2 | ಹಾಸನ | 31086 | 6023 | 25063 |
| 3 | ಬೆಳಗಾವಿ | 48729 | 33629 | 15100 |
| 4 | ಶಿವಮೊಗ್ಗ | 69825 | 57031 | 12794 |
| 5 | ಬೀದರ್ | 17359 | 5620 | 11739 |
| 6 | ಉಡುಪಿ | 28930 | 17209 | 11721 |
| 7 | ಕೊಡಗು | 18236 | 10524 | 7712 |
| 8 | ದಕ್ಷಿಣ ಕನ್ನಡ | 82834 | 75455 | 7379 |
| 9 | ಬೆಂಗಳೂರು ನಗರ | 10853 | 3690 | 7163 |
| 10 | ಹಾವೇರಿ | 12114 | 6488 | 5626 |
| 11 | ತುಮಕೂರು | 9619 | 4377 | 5242 |
| 12 | ಕಲಬುರ್ಗಿ | 13869 | 8964 | 4905 |
| 13 | ಧಾರವಾಡ | 13340 | 8850 | 4490 |
| 14 | ರಾಯಚೂರು | 10104 | 6064 | 4040 |
| 15 | ಚಿತ್ರದುರ್ಗ | 5740 | 1729 | 4011 |
| 16 | ಯಾದಗಿರಿ | 5719 | 2264 | 3455 |
| 17 | ಚಿಕ್ಕಬಳ್ಳಾಪುರ | 6633 | 3321 | 3312 |
| 18 | ಕೊಪ್ಪಳ | 14937 | 11997 | 2940 |
| 19 | ಮೈಸೂರು | 5781 | 2966 | 2815 |
| 20 | ಬೆಂಗಳೂರು ಗ್ರಾಮಾಂತರ | 14454 | 11644 | 2810 |
| 21 | ರಾಮನಗರ | 4390 | 2630 | 1760 |
| 22 | ಉತ್ತರ ಕನ್ನಡ | 50344 | 48624 | 1720 |
| 23 | ಕೋಲಾರ | 3962 | 2841 | 1121 |
| 24 | ಮಂಡ್ಯ | 3066 | 2255 | 811 |
| 25 | ಬಾಗಲಕೋಟೆ | 14026 | 13302 | 724 |
| 26 | ದಾವಣಗೆರೆ | 10852 | 10282 | 570 |
| 27 | ಚಾಮರಾಜನಗರ | 953 | 921 | 32 |
| 28 | ಬಳ್ಳಾರಿ | 20634 | 20634 | 0 |
| 29 | ಗದಗ | 1559 | 1559 | 0 |
| 30 | ವಿಜಯಪುರ | 22664 | 22664 | 0 |
| | ಒಟ್ಟು | 596618 | 408738 | 187880 |

# ಅರಣ್ಯ ಹಕ್ಕು ಕಾಯ್ದೆಯಡಿ ಬಾಕಿ ಇರುವ ಅರ್ಜಿಗಳು

| ಕ್ರ ಸಂ | ಜಿಲ್ಲೆಯ ಹೆಸರು | ಸ್ವೀಕೃತ ಅರ್ಜಿಗಳ ಸಂಖ್ಯೆ | ಹಕ್ಕುಪತ್ರ ವಿತರಿಸಿದ ಸಂಖ್ಯೆ | ತಿರಸ್ಕೃತ ಅರ್ಜಿಗಳ ಸಂಖ್ಯೆ | ಬಾಕಿ ಅರ್ಜಿಗಳ ಸಂಖ್ಯೆ |
|---|---|---|---|---|---|
| 1 | ಉತ್ತರ ಕನ್ನಡ | 88095 | 6565 | 41379 | 40151 |
| 2 | ಶಿವಮೊಗ್ಗ | 85518 | 2506 | 43042 | 39970 |
| 3 | ರಾಮನಗರ | 4582 | 374 | 798 | 3410 |
| 4 | ಹಾವೇರಿ | 2844 | 25 | 1002 | 1817 |
| 5 | ಚಿತ್ರದುರ್ಗ | 5602 | 347 | 4634 | 621 |
| 6 | ಕಲಬುರ್ಗಿ | 95 | 0 | 0 | 95 |
| 7 | ಬೆಂಗಳೂರು ನಗರ | 328 | 0 | 241 | 87 |
| 8 | ಬಳ್ಳಾರಿ | 5272 | 0 | 5196 | 76 |
| 9 | ಬೆಂಗಳೂರು ಗ್ರಾಮಾಂತರ | 465 | 56 | 341 | 68 |
| 10 | ಮೈಸೂರು | 7026 | 766 | 6199 | 61 |
| 11 | ಚಾಮರಾಜನಗರ | 2512 | 2016 | 436 | 60 |
| 12 | ಧಾರವಾಡ | 1348 | 45 | 1248 | 55 |
| 13 | ಮಂಡ್ಯ | 103 | 0 | 53 | 50 |
| 14 | ಕೊಡಗು | 3623 | 1637 | 1973 | 13 |
| 15 | ಕೊಪ್ಪಳ | 106 | 4 | 97 | 5 |
| 16 | ಚಿಕ್ಕಮಗಳೂರು | 24659 | 1897 | 22759 | 3 |
| 17 | ಬಾಗಲಕೋಟೆ | 12479 | 87 | 12392 | 0 |
| 18 | ದಾವಣಗೆರೆ | 12059 | 527 | 11532 | 0 |
| 19 | ತುಮಕೂರು | 1502 | 0 | 1502 | 0 |
| 20 | ಗದಗ | 1440 | 1300 | 140 | 0 |
| 21 | ಹಾಸನ | 492 | 1 | 491 | 0 |
| 22 | ಕೋಲಾರ | 0 | 0 | 0 | 0 |
| 23 | ಚಿಕ್ಕಬಳ್ಳಾಪುರ | 0 | 0 | 0 | 0 |
| 24 | ದಕ್ಷಿಣ ಕನ್ನಡ | 2382 | 125 | 2257 | 0 |
| 25 | ಉಡುಪಿ | 2118 | 529 | 1589 | 0 |
| 26 | ಬೆಳಗಾವಿ | 17424 | 447 | 16977 | 0 |
| 27 | ವಿಜಯಪುರ | 0 | 0 | 0 | 0 |
| 28 | ಯಾದಗಿರಿ | 0 | 0 | 0 | 0 |
| 29 | ಬೀದರ್ | 0 | 0 | 0 | 0 |
| 30 | ರಾಯಚೂರು | 0 | 0 | 0 | 0 |
| | ಒಟ್ಟು | 282074 | 19254 | 176278 | 86542 |

ಮೂಲ : [illegible]

ಅನುಬಂಧ -೩ಬ

# KARNATAKA

# GRAMA SWARAJ AND PANCHAYATH RAJ ACT, 1993

## [AMENDED UNDER 17 AND 44 OF 2015 KARNATAKA ACT]

## CHAPTER XIII

### TAXES AND FEES

**199. Levy of taxes, rates, etc., by Grama Panchayats.-** (1) Every Grama Panchayat shall in such manner and subject to such exemptions as may be prescribed and not exceeding the maximum rate specified in Schedule IV levy tax upon buildings and lands which are not subject to agricultural assessment, within the limits of the panchayat area:

Provided that where an owner of the building or land has left the Panchayat area or cannot otherwise be found, the occupier of such building or land shall be liable for the tax leviable on such owner.

(2) A Grama Panchayat may levy water rate for supply of water for drinking and other purposes.

(3) A Grama Panchayat may also levy all or any of the following taxes and fee at such rates as the Grama panchayat may by bye-laws determine but not exceeding the maximum specified in Schedule IV and in such manner and subject to such exemptions as may be prescribed, namely:-

(a) tax on entertainment other than cinematograph shows;

(b) tax on vehicles, other than motor vehicles;

(c) tax on advertisement and hoardings;

(d) pilgrim fee on person attending the jatras, festivals, etc., where necessary arrangements for water supply, health and sanitation are made by the Grama Panchayats;

(e) market fee on persons who expose their goods for sale in any market place;

(f) fee on the registration of cattle brought for sale in any market place;

(g) fee on buses and taxies and auto-stands provided adequate facilities for the travellers by the Grama panchayat; and

(h) fee on grazing cattle in the grazing lands.

**200. Recovery of taxes and other dues.-** (1) When any tax, cess, rate or fee becomes due, Grama Panchayat shall, with the least practicable delay, cause to be presented to the person liable for the payment thereof a bill for the amount due from him, specifying the date on or before which amount shall be paid.

(2) If any person fails to pay any tax or fee or any other sum due to the Grama Panchayat under this Act or the rules or bye-laws on or before the specified date of payment the Grama Panchayat shall cause a notice of demand in the prescribed form to be served on the defaulter.

(3) The presentation of every bill under sub-section (1) and the service of every notice of demand under sub-section (2), shall be effected by the Secretary or an officer duly authorised by him in this behalf,-

(a) by giving or tendering the bill or notice to the person to whom it is addressed; or

(b) if such person is not found, by leaving the bill or notice at his last known place of abode, if within the limits of the panchayat area or by giving or tendering the bill or notice to some adult member or servant of his family; or

(c) if such person does not reside within the limits of the panchayat area and his address elsewhere is known to the person directing the issue of the bill or notice, then by forwarding the bill or notice to such person by registered post, under cover bearing the said address; or

(d) if none of the means aforesaid be available then by causing the bill or notice to be affixed on some conspicuous part of the building or land, if any, to which the bill or notice relates.

(4) If the tax, rate, fee or other amounts for which a notice of demand has been served is not paid within thirty days from the date of such service, the Grama Panchayat may recover the amount due along with a penalty of ten percent of the sum due, by the distraint and sale of the movable property of the defaulter in the prescribed manner.

(5) Fees for,-

(a) every distraint made under sub-section (4);

(b) every notice of demand issued under sub-section (2);

(c) the cost of maintaining any live-stock seized under sub-section (4), shall be chargeable at such rates as may be prescribed.

(6) Notwithstanding anything contained in the foregoing sub-sections, any tax ,rate or fee payable to a Grama panchayat shall be recoverable as an arrears of land revenue.

**201. Appeal against assessment, etc.-** Subject to such rules as may be prescribed, any person aggrieved by the assessment, levy or imposition of any tax, rate or fee under section 199 may appeal to the prescribed authority, whose decision shall be final.

**202. Composition of taxes in factory areas.-** (1) Subject to such rules as may be prescribed, when the owner of any industry or factory established in any panchayat area provides sanitary and other amenities for the buildings and land used for the industry or as factory quarters for employees and for other purposes connected with the undertaking the Grama Panchayat may in lieu of the taxes, rates or fees, payable under this Act in respect of such buildings and lands receive such amount annually as may be agreed upon between the Grama panchayat and such owner.

(2) Where no such agreement as is referred to in sub-section (1) can be reached, the matter may be referred to the [1][Chief Executive Officer][1] and the [1][Chief Executive Officer][1] may, after giving to the Grama panchayat and the owner concerned an opportunity of being heard, determine the amount payable by such owner and such determination shall be binding on the Grama Panchayat and such owner. [2][The Chief Executive Officer shall settle the matter within three months from the date of receipt of such reference and before making such reference such owners shall pay compulsorily fifty percent of the rates or tax or fee in question to the Grama Panchayath and the Chief Executive Officer shall accept the reference only after such payment of fifty percent of rates or tax or fees][2]

(3) The [1][Government][1] may by notification direct that the provisions of sub-section (1) shall be applicable to such other establishments as may be specified in such notification.

4-1

ಅನುಬಂಧ-೨೮

**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ/441/ಗ್ರಾಪಂಅ/2016 (ಭಾಗ-3)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 28-10-2016.

**ಸುತ್ತೋಲೆ**

ವಿಷಯ: ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳ ಗ್ರಾಮಠಾಣಾ ಗಡಿ ತುಂಬಾ ಹಿಂದೆ ನಿಗದಿಪಡಿಸಿದ್ದು, ಪ್ರಸ್ತುತ ವಿಸ್ತರಣೆಯಾಗಿರುವ ಪ್ರದೇಶ ಒಳಗೊಂಡಂತೆ ಹೊಸದಾಗಿ ಸರ್ವೆ ಮಾಡಿಸಿ ಗ್ರಾಮಠಾಣಾವನ್ನು ಪುನರ್ ನಿಗದಿಪಡಿಸುವ ಬಗ್ಗೆ.

ಉಲ್ಲೇಖ: ದಿನಾಂಕ 21.09.2016 ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮತ್ತು ಕಂದಾಯ ಸಚಿವರ ಜಂಟಿ ಅಧ್ಯಕ್ಷತೆಯಲ್ಲಿ ಇ-ಸ್ವತ್ತು ಯೋಜನೆ ಅನುಷ್ಠಾನದ ಬಗೆಗಿನ ಸಮಸ್ಯೆಗಳ ಬಗ್ಗೆ ನಡೆದ ಸಭೆಯ ನಡವಳಿಗಳು.

---

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ರ ನಿಯಮ 28 ರಂತೆ ರಾಜ್ಯದ ಗ್ರಾಮ ಪಂಚಾಯತಿಗಳ ಗ್ರಾಮಠಾಣಾ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳ ತೆರಿಗೆ ನಿರ್ಧಾರಣೆ ಪಟ್ಟಿಯನ್ನು ನಮೂನೆ-9 ರಲ್ಲಿ ಮತ್ತು ನಿಯಮ 30 ರಂತೆ ಭೂಮಿ ಮತ್ತು ಕಟ್ಟಡದ ತೆರಿಗೆಗಳ ಬೇಡಿಕೆ ಮತ್ತು ವಸೂಲಾತಿ ರಿಜಿಸ್ಟರ್ ಅನ್ನು ನಮೂನೆ-11ಎ ರಲ್ಲಿ ಗ್ರಾಮ ಪಂಚಾಯತಿಗಳು ನಿರ್ವಹಿಸುತ್ತಿವೆ.

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ ಪ್ರಕರಣ 148 ಮತ್ತು ಕರ್ನಾಟಕ ಭೂ ಕಂದಾಯ ನಿಯಮಾವಳಿ 1966 ರ ನಿಯಮ 82 ರಂತೆ ಕೃಷಿಯೇತರ ಜಮೀನಿನಲ್ಲಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ ಭೂ ಮಾಪನ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯು ಪಟ್ಟಣಗಳಲ್ಲಾಗಲಿ, ನಗರಗಳಲ್ಲಾಗಲಿ ಅಥವಾ ಹಳ್ಳಿಗಳಲ್ಲಾಗಲಿ ದಾಖಲೆಗಳನ್ನು ನಿರ್ವಹಿಸುವ ಜವಾಬ್ದಾರಿ ಹೊಂದಿರುತ್ತದೆ.

ಪ್ರಸ್ತುತ ಇರುವ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಠಾಣದ ಜೊತೆಗೆ ಗ್ರಾಮಗಳಲ್ಲಿ ಗ್ರಾಮಠಾಣಕ್ಕೆ ಹೊಂದಿಕೊಂಡಂತೆ ಗ್ರಾಮಗಳ ಬೆಳವಣಿಗೆಯಾಗಿದ್ದು, ಗ್ರಾಮಠಾಣದ ಅಕ್ಕಪಕ್ಕದಲ್ಲಿ ವಿವಿಧ ವಸತಿ ಯೋಜನೆಗಳಡಿ ಹಕ್ಕುಪತ್ರ ವಿತರಿಸಿ, ಮನೆ ನಿರ್ಮಾಣ ಮಾಡಿಕೊಂಡಿರುತ್ತಾರೆ. ಅಲ್ಲದೆ ಕೃಷಿ ಭೂಮಿಯಲ್ಲಿ ಮನೆಗಳನ್ನು ನಿರ್ಮಾಣ ಮಾಡಿಕೊಂಡಿದ್ದು, ಅವು ಸಕ್ರಮಗೊಂಡಿರುತ್ತವೆ. ಈ ಪ್ರದೇಶಗಳು ಗ್ರಾಮಠಾಣಾ ವ್ಯಾಪ್ತಿಗೆ ಒಳಪಡದಿರುವುದರಿಂದ ನಾಗರೀಕರು ಆಸ್ತಿಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಗಳಿಂದ ನಮೂನೆ-9 ಮತ್ತು 11ಎ ಪಡೆಯಲು ತುಂಬಾ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ ದಿನಾಂಕ:21-09-2016 ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮತ್ತು ಕಂದಾಯ ಸಚಿವರ ಸಮಕ್ಷಮ ಇ-ಸ್ವತ್ತು ಯೋಜನೆ ಅನುಷ್ಠಾನದ ಬಗೆಗಿನ ಸಮಸ್ಯೆಗಳ ಬಗ್ಗೆ ನಡೆದ ಸಭೆಯಲ್ಲಿ ಈ ವಿಷಯದ ಬಗ್ಗೆ ಸವಿವರವಾಗಿ ಚರ್ಚಿಸಲಾಗಿದ್ದು, ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳ ಗ್ರಾಮಠಾಣಾ ಗಡಿ ತುಂಬಾ ಹಿಂದೆ ನಿಗದಿಪಡಿಸಿದ್ದು, ಪ್ರಸ್ತುತ ವಿಸ್ತರಣೆಯಾಗಿರುವ ಪ್ರದೇಶ ಒಳಗೊಂಡಂತೆ ಹೊಸದಾಗಿ ಸರ್ವೆ ಮಾಡಿಸಿ ಗ್ರಾಮಠಾಣಾವನ್ನು ಪುನರ್ ನಿಗದಿಪಡಿಸುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳ ಗ್ರಾಮಠಾಣಾ ಗಡಿಯನ್ನು ಪ್ರಸ್ತುತ ವಿಸ್ತರಣೆಯಾಗಿರುವ ಪ್ರದೇಶವನ್ನು ಒಳಗೊಂಡಂತೆ ಹೊಸದಾಗಿ ಸರ್ವೆ ಮಾಡಿಸಿ ಪುನರ್ ನಿಗದಿಪಡಿಸುವ ಬಗ್ಗೆ ಕಂದಾಯ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಈ ಕೆಳಗಿನಂತೆ ಕ್ರಮ ವಹಿಸುವಂತೆ ನಿರ್ದೇಶಿಸಿದೆ.

1) ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳ ಗ್ರಾಮ ಠಾಣಾ ಗಡಿ ತುಂಬಾ ಹಿಂದೆ ನಿಗದಿಪಡಿಸಿದ್ದು, ಮೂಲ ಗ್ರಾಮಠಾಣದ ಜೊತೆಗೆ ಹೊಂದಿಕೊಂಡಂತೆ ಪ್ರಸ್ತುತ ವಿಸ್ತರಣೆಯಾಗಿರುವ ಪ್ರದೇಶ ಒಳಗೊಂಡಂತೆ ಹೊಸದಾಗಿ ಸರ್ವೆ ಮಾಡಲು ಕ್ರಮ ವಹಿಸುವುದು.

2) ಸರ್ವೆಯವರಿಗೆ ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಸಹಕಾರ ನೀಡುವುದು.
3) ಗ್ರಾಮಠಾಣದ ಜೊತೆಗೆ ಹೊಂದಿಕೊಂಡಂತೆ ಪ್ರಸ್ತುತ ವಿಸ್ತರಣೆಯಾಗಿರುವ ಪ್ರದೇಶದ ಬಗ್ಗೆ ಡ್ರಾಫ್ಟ್ ನಕ್ಷೆ ಮತ್ತು ಗ್ರಾಮ ನಕ್ಷೆಗಳಲ್ಲಿ ಕಂದಾಯ ಇಲಾಖೆಯ ಗ್ರಾಮ ಲೆಕ್ಕಿಗರು, ತಾಲ್ಲೂಕು ನಿರೀಕ್ಷಕರು ರವರು ಜಂಟಿಯಾಗಿ ಈ ಬಗ್ಗೆ ಪರಿಶೀಲನೆ ನಡೆಸಿ ಕ್ರಮ ತೆಗೆದುಕೊಳ್ಳುವುದು.
4) ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸಾರ್ವಜನಿಕ ಮತ್ತು ಗ್ರಾಮ ಸಭೆ ಹಾಗೂ ಸಾಮಾನ್ಯ ಸಭೆಗೆ ಕಂದಾಯ ಇಲಾಖೆಯ ಅಧಿಕಾರಿ / ನೌಕರರುಗಳನ್ನು ಆಹ್ವಾನಿಸುವುದು.
5) ಸರ್ವೆ ಮಾಡಿದ ಗ್ರಾಮಠಾಣಾ ವಿಸ್ತರಣೆಯ ಬಗ್ಗೆ ಗ್ರಾಮ ಪಂಚಾಯತಿ ಸಭೆಯಲ್ಲಿ ಸಮಗ್ರವಾಗಿ ಚರ್ಚಿಸಿ ನಿರ್ಣಯ ತೆಗೆದುಕೊಂಡು, ತದನಂತರ ಸಂಬಂಧಿಸಿದ ತಹಶೀಲ್ದಾರ್ ಮತ್ತು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವುದು.
6) ತಹಶೀಲ್ದಾರ್ ರವರು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು, ಈ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ, ಗ್ರಾಮಠಾಣಾ ವಿಸ್ತರಿತ ಪ್ರದೇಶ ವಿಸ್ತರಣೆಯಾಗಿರುವ ಬಗ್ಗೆ ಕ್ರಮಬದ್ಧಗೊಳಿಸಿಕೊಂಡು ತದನಂತರ ಉಪವಿಭಾಗಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವುದು.
7) ಉಪವಿಭಾಗಾಧಿಕಾರಿಗಳು ಪ್ರಸ್ತಾವನೆಯನ್ನು ಪರಿಶೀಲಿಸಿ ಕ್ರಮಬದ್ಧವಾಗಿರುವುದನ್ನು ಖಚಿತಪಡಿಸಿಕೊಂಡು ಭೂ ಮಾಪನ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯ ಉಪನಿರ್ದೇಶಕರಿಗೆ ಸಲ್ಲಿಸುವುದು.
8) ಭೂ ದಾಖಲೆಗಳ ಉಪನಿರ್ದೇಶಕರು ಗ್ರಾಮಠಾಣಾ ವಿಸ್ತರಣೆಯ ಪ್ರಸ್ತಾವನೆಯನ್ನು ಪರಿಶೀಲಿಸಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವುದು.
9) ತದನಂತರ ಪ್ರಸ್ತಾವನೆಯನ್ನು ಪರಿಶೀಲಿಸಿ ಜಿಲ್ಲಾಧಿಕಾರಿಗಳು ಗ್ರಾಮಠಾಣಾ ವಿಸ್ತರಣೆ ಬಗ್ಗೆ ಆದೇಶ ಹೊರಡಿಸಲು ಕ್ರಮ ವಹಿಸುವುದು.
10) ಒಂದು ವೇಳೆ ಸರ್ವೆಯರ್‌ಗಳ ಅಲಭ್ಯತೆ ಇದ್ದಲ್ಲಿ ನಿವೃತ್ತ ಸರ್ವೆಯರ್‌ಗಳನ್ನು ನೇಮಿಸಿಕೊಳ್ಳುವುದು.

(ಡಾ॥ ಎಸ್. [illegible])
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

(ಡಾ॥ ಇ.ವಿ. ರಮಣರೆಡ್ಡಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಕಂದಾಯ ಇಲಾಖೆ.

ಗೆ:
1) ಆಯುಕ್ತರು, ಭೂ ಮಾಪನ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು
2) ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು.
3) ಎಲ್ಲಾ ಪ್ರಾದೇಶಿಕ ಆಯುಕ್ತರು,
4) ಎಲ್ಲಾ ಜಿಲ್ಲಾಧಿಕಾರಿಗಳು.
5) ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
6) ಎಲ್ಲಾ ಉಪವಿಭಾಗಾಧಿಕಾರಿಗಳು.
7) ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು,
8) ಎಲ್ಲಾ ತಹಶೀಲ್ದಾರ್‌ಗಳು
9) ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.

ಪ್ರತಿ:
1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು.
2. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಯವರು
3. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ, ಗ್ರಾಅಪ ಇಲಾಖೆ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ.
5. ಎಲ್ಲಾ ಸರ್ಕಾರದ ಅಧೀನ ಕಾರ್ಯದರ್ಶಿಗಳು, ಕಂದಾಯ ಇಲಾಖೆ.
6. ನಿರ್ದೇಶಕರು, ಕರ್ನಾಟಕ [illegible], ಗ್ರಾಅಪ ಮತ್ತು ಪಂ.ರಾಜ್ ಇಲಾಖೆ.
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಅನುಬಂಧ - ಎ

# KARNATAKA ACT NO.20 OF 1985

## THE KARNATAKA ZILLA PARISHADS, TALUK PANCHAYAT SAMITHIS, MANDAL PANCHAYATS AND NYAYA PANCHAYATS ACT, 1983

AND

## VARIOUS RULES FRAMED UNDER THE KARNATAKA ZILLA PARISHADS, TALUK PANCHAYATS SAMITHIS, MANDAL PANCHAYATS AND NYAYA PANCHAYATS ACT, 1983

1987

**116. Taxes and Fees** – (1) Every Mandal Panchayat shall in such manner and subject to such exemptions as may be prescribed and not exceeding the maximum rate specified in Schedule 1, levy a tax upon buildings whether or not the lands on which the buildings are constructed are subject to payment of agricultural assessment, and upon lands which are not subject to payment of agricultural assessment within the limits of the mandal.

(2) Where an owner of the building or land has left the Mandal or cannot otherwise be found, the occupier of such building or land shall be liable for the tax leviable under sub-section (1) on such owner.

(3) A Mandal Panchayat may levy all or any of the following taxes or fees at such rates as the Mandal Panchayat may by bye-laws determine not exceeding the maximum specified in schedule I and in such manner and subject to exemptions as may be prescribed, namely:-

(i) a tax on entertainments other than cinematograph shows;

(ii) a tax on vehicles other than motor vehicles;

(iii) a fee on bus stands;

(iv) a fee on markets;

(v) a tax on mineral rights;

Provided that no fee on bus stands shall be levied unless a bus-stand with adequate facilities for travellers is established and the previous sanction of the Zilla Parishad for such levy is obtained.

(4) A Mandal Panchayat may levy: -

(a) a water rate for supply of water by the Mandal Panchayat ; and

(b) a fee for grazing cattle on the grazing land belonging to or vested in the Mandal Panchayat, at such rates, in such manner and subject to such exemptions as the Mandal Panchayat may by bye-laws determine.

(5) (a) A Mandal Panchayat may levy a duty on transfers of immovable property (hereinafter in this section referred to as transfer duty). Such duty shall be levied in the form of a surcharge on the duty imposed by the Karnataka Stamp Act, 1957, on instruments of

sale, gift, mortgage, exchange and lease in perpetuity of immovable property situated within the limits of Mandal Panchayats at a rate not exceeding three per cent on, as the case may be, the amount of the consideration for the sale, the value of the property in the case of a gift, or the amount secured by the mortgage, the value of the property of the greater value in the case of exchange, or the value of the rent for the first ten years in the case of a lease, as set forth in the instruments.

Provided that no such duty is leviable in respect of mortgage where the amount secured by a mortgage does not exceed rupees two thousand ;

Provided further that no transfer duty shall be chargeable. –

(i) in respect of any instrument executed by or on behalf of or in favour of the Government in cases where but for this exemption the Government would be liable to pay the transfer duty under this sub-section in respect of such instrument, or

(ii) in respect of any instrument exempt from stamp duty under the Karnataka Stamp Act, 1957.

(b) On the introduction of the transfer duty, section-26 of the Karnataka Stamp Act, 1957 shall be read as if it specifically required the particulars to be set forth separately in respect of the property situated within and without the area under the jurisdiction of the Mandal Panchayat and section-61 of the said Act shall be read as if it referred to the Mandal Panchayat as well as the Government.

(c) The Government may make rules for regulating the collection of transfer duty, the payment thereof to the Mandal Panchayat and the deduction of any expenses incurred by the Government in the collection thereof.

(6) The Zilla Parishad may, after giving an opportunity to the Mandal Panchayat to be heard, by notification suspend the levy or imposition of any tax or fees under the preceding sub-sections or reduce the rate at which any such tax or fee is levied or imposed and may at any time rescind such suspension or reduction.

************